ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 23 ಬುಧವಾರ 2022

ಸಂಪುಟ: 43 | ಸಂಚಿಕೆ: 216 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಹಾಲು, ಮೊಸರು ದರ ಏರಿಕೆ

ಇನ್ನೆರಡು ದಿನದಲ್ಲಿ ಅಂತಿಮ ನಿರ್ಧಾರ

ಬೆಂಗಳೂರು: ಹಾಲು ಮತ್ತು ಮೊಸರು ದರ ಏರಿಕೆಯನ್ನು ನಿಗದಿ ಪಡಿಸಲು ಕರ್ನಾಟಕ ಹಾಲು ಮಹಾ ಮಂಡಳ ಕಾಲಾವಕಾಶ ಕೋರಿರುವುದರಿಂದ 2 ದಿನಗಳ ನಂತರ ಕರ್ನಾಟಕ ಸರ್ಕಾರ ಹಾಲಿನ ದರ ಕುರಿತು ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆಯಿದೆ.

ಲೀಟರ್‌ಗೆ 3 ರೂಪಾಯಿ ಏರಿಕೆ ಮಾಡದಂತೆ ಆದರೆ ರೈತರಿಗಾಗಲಿ, ಗ್ರಾಹಕರಿಗಾಗಲಿ ನಷ್ಟ ಉಂಟು ಮಾಡಬಾರದು ಎಂದು ಕೆಎಂಎಫ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ. ಈ ಸಂಬಂಧ ಕೆಎಂಎಫ್ 2 ದಿನಗಳ ಕಾಲಾವಕಾಶ ಕೋರಿದೆ ಎಂದರು. ಕೆಎಂಎಫ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಬೊಮ್ಮಾಯಿ ಮಾತನಾಡಿ, 'ಇತರ ರಾಜ್ಯಗಳಲ್ಲಿ ಹಾಲು ಮತ್ತು ಮೊಸರಿನ ಬೆಲೆ ಸೇರಿದಂತೆ ಹೆಚ್ಚಿನ ವಿವರಗಳನ್ನು ಅವರಿಂದ ಕೇಳಲಾಗಿದೆ. ಕೆಎಂಎಫ್‌ನ ಉತ್ಪಾದನಾ ವೆಚ್ಚ ಮತ್ತು ಅವರು ಏಕೆ ಬೆಲೆಯನ್ನು ಹೆಚ್ಚಿಸಬೇಕೆಂದು ಕೂಡ ನಾನು ಅವರನ್ನು ಕೇಳಿದ್ದೇನೆ. ಹಾಲಿನ ಸೋರಿಕೆಯನ್ನು ಕಡಿಮೆ ಮಾಡಲು ಮತ್ತು ತಡೆಯಲು ಅವರು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂದು ತಿಳಿಯಲು ನಾನು ಪ್ರಯತ್ನಿಸಿದೆ ಎಂದರು. ಹಾಲಿನ ದರವು ಕಾಲ ಕಾಲಕ್ಕೆ ಬದಲಾಗುತ್ತಲೇ ಇರುತ್ತದೆ. ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು.

ಆಸ್ತಿ ನೋಂದಣಿ ಆದ ಏಳು ದಿನದಲ್ಲಿ ಖಾತಾ ನೀಡಿಕೆ

● ಸರ್ಕಾರಿ ಆದೇಶ ● ಈ ಮೊದಲು 34 ದಿನ ಕಾಯಬೇಕಿತ್ತು ● ಕಚೇರಿಗಳಿಗೆ ಅಲೆಯಬೇಕಿತ್ತು; ಸಾಕಷ್ಟು ಹಣ ಕಳೆದುಕೊಳ್ಳುತ್ತಿದ್ದರು ● ಬೆಳಗಾವಿ ಅಧಿವೇಶನದಲ್ಲಿ 2 ವಿಧೇಯಕ ಮಂಡನೆ–(i) ಕೃಷಿ ಭೂಮಿ ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ (ii) ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಒತ್ತುವರಿ ಭೂಮಿ ಗುತ್ತಿಗೆ ನೀಡಲು ನಿರ್ಧಾರ ● ಹೆಚ್.ಡಿ.ಕೋಟೆ ಹಾಡಿ ಕುಟುಂಬಗಳಿಗೆ ಭೂಮಿ ಹಕ್ಕುಪತ್ರ

ಬೆಂಗಳೂರು, ನ.22 (ಕೆಎಂಶಿ)– ಆಸ್ತಿ ನೋಂದಣಿ ಮಾಡಿದ ಏಳು ದಿನಗಳ ಒಳಗೆ ಖಾತಾ ನೀಡುವ ಸರ್ಕಾರಿ ಆದೇಶ ಹೊರಬಿದ್ದಿದೆ.



ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಕಂದಾಯ ಸಚಿವ ಆರ್. ಅಶೋಕ್, ಇದುವರೆಗೆ ನೋಂದಣಿ ಮಾಡಿದ ಮೂವತ್ನಾಲ್ಕು ದಿನಗಳ ನಂತರ ಖಾತಾ ನೀಡಲಾಗುತ್ತಿತ್ತು. ಹಾಗಾಗಿ ಖಾತಾ ಪಡೆಯಲು ನೋಂದಣಿ ಕಚೇರಿಗಳಿಗೆ ಸುತ್ತಾಡಬೇಕಾಗಿತ್ತು ಹಾಗೂ ಅನಗತ್ಯವಾಗಿ ಜೇಬಿನಿಂದ ಹಣ ಕಳೆದುಕೊಳ್ಳುವುದಲ್ಲದೆ, ಹಿಂಸೆಗೆ ಒಳಪಡುತ್ತಿದ್ದರು. ಇದನ್ನು ತಪ್ಪಿಸಲು ಮತ್ತು ಸರಳ ರೀತಿಯಲ್ಲಿ ಆಸ್ತಿ ನೋಂದಣಿ ಪತ್ರ ಮತ್ತು ಖಾತಾ ದೊರೆಯುವಂತೆ ಮಾಡಲು ಈ ಆದೇಶ ಹೊರಡಿಸಲಾಗಿದೆ ಎಂದರು.

ಮುಂದಿನ ತಿಂಗಳು ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲ ಅಧಿವೇಶನದಲ್ಲಿ ಎರಡು ಪ್ರಮುಖ ವಿಧೇಯಕಗಳನ್ನು ಮಂಡಿಸುವುದಾಗಿ ಅವರು ವಿವರಿಸಿದರು. ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಿ ಕೊಡಲು ಮತ್ತು ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ 1 ಲಕ್ಷ ಹೆಕ್ಟೇರ್ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಕಾಫೀ ತೋಟ ಮಾಡುತ್ತಿರುವವರಿಗೆ ಅಂತಹ ಭೂಮಿಯನ್ನು ಅವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವ ವಿಧೇಯಕಗಳಿಗೆ ಅನುಮತಿ ಪಡೆಯಲಾಗುವುದು. ಮೈಸೂರು, ಚಾಮರಾಜನಗರ, ದಾವಣಗೆರೆ, ಚಿತ್ರದುರ್ಗ ಸೇರಿದಂತೆ ಹಳೇ ಮೈಸೂರು ಭಾಗದ ಜಿಲ್ಲೆಗಳ ಲಂಬಾಣಿ ತಾಂಡಾ ಮತ್ತು ಹಟ್ಟಿಗಳನ್ನು



ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ, ಜನವರಿ ಮೊದಲ ವಾರದಲ್ಲಿ ಹಕ್ಕುಪತ್ರ ನೀಡಲಾಗುವುದು.

ಈ ಸಂಬಂಧ ದಾವಣಗೆರೆಯಲ್ಲಿ ಸಮಾವೇಶವೊಂದನ್ನು ನಡೆಸಲು ತೀರ್ಮಾನಿಸಲಾಗಿದೆ. ಅಲ್ಲದೆ, ಐದು ದಶಕಗಳಿಂದ ಭೂಮಿಗಾಗಿ ಹೋರಾಡುತ್ತಿರುವ ಹೆಚ್.ಡಿ. ಕೋಟೆ ತಾಲೂಕಿನ ಹಾಡಿಗಳ ಕುಟುಂಬಗಳಿಗೂ ಅಲ್ಲಿಯೇ ಹಕ್ಕುಪತ್ರ ಒದಗಿಸಲಾಗುವುದು ಎಂದರು.


ಕಬಿನಿ ಅಣೆಕಟ್ಟು ಕಟ್ಟುವಾಗ ಅರಣ್ಯ ಪ್ರದೇಶದಲ್ಲಿ ಉಳುಮೆ ಮಾಡುತ್ತಿದ್ದ ಇವರು, ಭೂಮಿ ಕಳೆದುಕೊಂಡಿದ್ದರು. ಹೀಗೆ ಕೆಂಚನಹಳ್ಳಿ ಸೇರಿದಂತೆ ಹೆಚ್.ಡಿ.ಕೋಟೆ ತಾಲೂಕಿನ ಕೆಲ ಗ್ರಾಮಗಳ ಜನ 1070 ಎಕರೆಯಷ್ಟು ಭೂಮಿ ಕಳೆದುಕೊಂಡಿದ್ದರು. ಆದರೆ ಹೀಗೆ ಕಳೆದುಕೊಂಡ ಜಮೀನಿಗೆ ಪರ್ಯಾಯವಾಗಿ ಭೂಮಿ ಕೊಡುವಾಗ 800 ಎಕರೆಯಷ್ಟು ಭೂಮಿ ಮಾತ್ರ ಅವರಿಗೆ ನೀಡಲಾಯಿತು. ಇದರಿಂದಾಗಿ ಕೊರತೆಯಾದ 330 ಎಕರೆ ಭೂಮಿ ಗಾಗಿ ಆ ಭಾಗದ ಜನರು 5 ದಶಕಗಳ ಕಾಲದಿಂದ ನಿರಂತರವಾಗಿ ಹೋರಾಟ ಮಾಡುತ್ತಾ ಬಂದಿದ್ದು, ಈಗ ಅವರಿಗೆ ಕೊಡಬೇಕಿದ್ದ ಭೂಮಿಯನ್ನು ಜನವರಿ ತಿಂಗಳಲ್ಲಿ ಕೊಡುವುದಾಗಿ ಹೇಳಿದರು. ತಾವು ಸದರಿ ಪ್ರದೇಶಕ್ಕೆ ಹೋಗಿ ವಾಸ್ತವ್ಯ ಮಾಡಿದ ನಂತರ ಹಲವು ವಿವರಗಳು ತಮಗೆ ಸಿಕ್ಕಿದ್ದು, ಅವರಿಗೆ ನ್ಯಾಯಯುತ ವಾಗಿ ಸಲ್ಲಬೇಕಾದ ಭೂಮಿಯನ್ನು ಮರಳಿ ಕೊಡಿಸುವ ಸಂಬಂಧ ಈ ವಾರ ಉನ್ನತ ಮಟ್ಟದ ಸಭೆ ನಡೆಸುವುದಾಗಿ ತಿಳಿಸಿದರು.

ಅರಣ್ಯ ಇಲಾಖೆ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಮತ್ತು ಚಾಮ ರಾಜನಗರ ಜಿಲ್ಲಾಧಿಕಾರಿಗಳು ಸೇರಿದಂತೆ ಹಲವರು ಈ ಸಭೆಯಲ್ಲಿ ಭಾಗವಹಿಸಲಿದ್ದು, ಕಬಿನಿ ಸಂತ್ರಸ್ತರಿಗೆ ಸಲ್ಲಬೇಕಾದ ಭೂಮಿಯನ್ನು ಕೊಡುವ ಮಾರ್ಗೋಪಾಯಗಳ ಕುರಿತು ಚರ್ಚಿಸುವುದಾಗಿ ನುಡಿದರು. ಎರಡು ದಿನಗಳ ಕಾಲ ಆ ಪ್ರದೇಶದಲ್ಲಿದ್ದಾಗ ಸದರಿ ಭೂಮಿ ▶ 8ನೇ ಪುಟಕ್ಕೆ

ಪಠ್ಯದಲ್ಲಿ ಭಗವದ್ಗೀತೆ, ರಾಮಾಯಣ ಸೇರ್ಪಡೆ

ಸ್ವಾಮೀಜಿಗಳಿಗೆ ಜವಾಬ್ದಾರಿ ನೀಡಲು ಸರ್ಕಾರ ಚಿಂತನೆ

ಬೆಂಗಳೂರು, ನ.22– ಶಾಲಾ ಪಠ್ಯದಲ್ಲಿ ಭಗವದ್ಗೀತೆ, ರಾಮಾಯಣ ಸೇರ್ಪಡೆಗೆ



ಸಿದ್ಧತೆ ಪ್ರಾರಂಭವಾಗಿದ್ದು, ಅದಕ್ಕಾಗಿ ನೈತಿಕ ಶಿಕ್ಷಣ ಪಠ್ಯ ಸಮಿತಿ ರಚನೆಗೆ ಸರ್ಕಾರ ಮುಂದಾಗಿದೆ. ನಾಡಿನ ಪ್ರಮುಖ ಸ್ವಾಮೀಜಿಗಳ ನೇತೃತ್ವದಲ್ಲಿ ಸಮಿತಿ ರಚನೆಯಾಗಲಿದೆ. ನೈತಿಕ ಶಿಕ್ಷಣದ ಪಠ್ಯ ಹೇಗೆ ಇರಬೇಕು ಎಂಬ ಬಗ್ಗೆ ಶ್ರೀಗಳು ಪಠ್ಯ ಸಿದ್ಧ ಮಾಡಲಿದ್ದಾರೆ. ನೈತಿಕ ಶಿಕ್ಷಣದ ಪಠ್ಯ ▶ 8ನೇ ಪುಟಕ್ಕೆ

ಹೋರಾಟ ಕೈ ಬಿಡಲು ಸಿದ್ದರಾಮಯ್ಯ ಬ್ರಾಹ್ಮಣರಲ್ಲಿ ಮನವಿ



ಬೆಂಗಳೂರು,ನ.22(ಜಿಎ)– ಚಿಂತಕ ಪ.ಮಲ್ಲೇಶ್ ವಿರುದ್ಧ ಬ್ರಾಹ್ಮಣ ಮಹಾ ಸಭಾ ರಾಜ್ಯಾದ್ಯಂತ ನಡೆಸುತ್ತಿರುವ ಹೋರಾಟವನ್ನು ಕೈ ಬಿಡಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ಇಂದು ಬೆಂಗಳೂರಿನ ತಮ್ಮ ನಿವಾಸದಲ್ಲಿ ತಮ್ಮನ್ನು ಭೇಟಿಯಾದ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಹಾಗೂ ಖ್ಯಾತ ಹಿರಿಯ ನ್ಯಾಯವಾದಿ ಅಶೋಕ್ ಹಾರ್ನಳ್ಳಿ ಅವರನ್ನು ಭೇಟಿಯಾಗಿ ಚರ್ಚಿಸಿದ ನಂತರ ಈ ಮನವಿ ಮಾಡಿ ದ್ದಾರೆ. ನ.15ರಂದು ಮೈಸೂರಿನಲ್ಲಿ ನಡೆದ 'ಸಿದ್ದರಾಮಯ್ಯ–75' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಚಿಂತಕ ಪ.ಮಲ್ಲೇಶ್ ಬ್ರಾಹ್ಮಣ ಸಮುದಾಯ ನಿಂದಿಸಿರುವ ಪ್ರಕರಣ ಕುರಿತು ಸಿದ್ದರಾಮಯ್ಯ ಮತ್ತು ಅಶೋಕ್ ಹಾರ್ನಳ್ಳಿ ಅವರು ಕೆಲಕಾಲ ಚರ್ಚಿಸಿದರು. ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಹಾಗೂ ಖ್ಯಾತ ವಕೀಲ ಅಶೋಕ್ ಹಾರ್ನಳ್ಳಿ ಭೇಟಿ ಮಾಡಿ, ಮೈಸೂರಿನಲ್ಲಿ ನಡೆದ ಘಟನೆ ಬಗ್ಗೆ ಪ್ರಸ್ತಾಪಿಸಿದ್ದಾರೆ. ನಾನು ಅವರಿಗೆ ಅಂದಿನ ಘಟನೆ ಬಗ್ಗೆ ಎಲ್ಲಾ ವಿವರಣೆ ನೀಡಿದ್ದೇನೆ. ಅಂದು ನಾನು ಭಾಷಣ ಮಾಡಲಿಲ್ಲ. ಪ.ಮಲ್ಲೇಶ್ ಅವರು ಏನು ಭಾಷಣ ಮಾಡಿದರೂ ಎಂಬುದನ್ನು ಕೇಳಿಸಿಕೊಂಡಿಲ್ಲ. ಆದರೂ ಪ.ಮಲ್ಲೇಶ್ ಅವರು ಬ್ರಾಹ್ಮಣ ಸಮುದಾಯದ ಬಗ್ಗೆ ಬಳಸಿದ ಪದ ಸರಿ ಇಲ್ಲವೆಂದು ಈಗಾಗಲೇ ವಿಷಾದ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಮತ್ತೆ ಅದನ್ನು ಮುಂದು ವರೆಸುವುದು ಅನಗತ್ಯ ಎಂದು ಭಾವಿಸಿ ದ್ದೇನೆ. ನಾನು ಇದುವರೆಗೂ ಯಾವುದೇ ಸಮಾಜವನ್ನು ನಿಂದಿಸುವ ಕೆಲಸವನ್ನು ಮಾಡಿಲ್ಲ. ಇದನ್ನು ಇಲ್ಲಿಗೆ ಕೈ ಬಿಡಬೇಕು ಎಂದು ಬ್ರಾಹ್ಮಣ ಮಹಾಸಭಾವನ್ನು ಕೇಳಿಕೊಳ್ಳುತ್ತೇನೆ ಎಂದು ವಿಡಿಯೋ ಮೂಲಕ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ

ಮೈಸೂರಿಂದ ಮಂಗಳೂರಿಗೆ ಸಾಕ್ಷ್ಯಗಳು ವರ್ಗಾವಣೆ

● ಸಾಕ್ಷ್ಯಗಳ ಸಂಬಂಧ ಮಂಗಳೂರಲ್ಲಿ ಎಡಿಜಿಪಿಗೆ ವಿವರ ನೀಡಿದ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ● ಡಿಐಜಿ ನೇತೃತ್ವದ ತಮಿಳುನಾಡು ಪೊಲೀಸರಿಂದಲೂ ಮೈಸೂರಿನ ಲೋಕನಾಯಕನಗರದ ಶಂಕಿತ ಉಗ್ರ ಮೊಹಮದ್ ಶಾರಿಕ್ ಮನೆ ಪರಿಶೀಲನೆ

ಮೈಸೂರು, ನ.22(ಆರ್‌ಕೆ)–ಮಂಗಳೂರಲ್ಲಿ ಸಂಭವಿಸಿದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಮೈಸೂರಿನ ಲೋಕನಾಯಕನಗರದಲ್ಲಿ ಶಂಕಿತ ಉಗ್ರ ನೆಲೆಸಿದ್ದ ಕೊಠಡಿಯಲ್ಲಿ ಸಿಕ್ಕಿದ್ದ ಸಾಕ್ಷ್ಯಗಳನ್ನು ಮಂಗಳೂರಿಗೆ ವರ್ಗಾಯಿಸಲಾಗಿದೆ.

ಮಂಗಳೂರಿನಲ್ಲಿ ಆಟೋರಿಕ್ಷಾದಲ್ಲಿ ಸಂಭವಿಸಿದ ಕುಕ್ಕರ್ ಬಾಂಬ್ ಸ್ಫೋಟದ ಪ್ರಮುಖ ಆರೋಪಿ ಮೊಹಮದ್ ಶಾರಿಕ್ ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಲೋಕನಾಯಕನಗರದಲ್ಲಿ ಕೊಠಡಿಯೊಂದನ್ನು ಬಾಡಿಗೆಗೆ ಪಡೆದು ವಾಸವಿದ್ದ. ಮಂಗಳೂರಲ್ಲಿ ಸ್ಫೋಟ ಸಂಭವಿಸಿದ ನಂತರ ಪೊಲೀಸರು ಈತನ ಕೊಠಡಿ ಪರಿಶೀಲಿಸಿದಾಗ ಕುಕ್ಕರ್ ಬಾಂಬ್ ತಯಾರಿಸಲು ಬಳಸುತ್ತಿದ್ದ ಕಚ್ಚಾವಸ್ತುಗಳು ಅಲ್ಲಿ ಪತ್ತೆಯಾಗಿದ್ದವು. ಅವುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದರು. ನಿನ್ನೆ ಈ ಪದಾರ್ಥಗಳನ್ನು ಮಂಗಳೂರಿಗೆ ಕೊಂಡೊಯ್ದು, ತನಿಖಾಧಿಕಾರಿಗಳಿಗೆ ಒಪ್ಪಿಸಲಾಯಿತು. ಸೋಮವಾರ ಮಂಗಳೂರಿಗೆ ಭೇಟಿ ನೀಡಿದ್ದ ಕಾನೂನು–ಸುವ್ಯವಸ್ಥೆ ಎಡಿಜಿಪಿ ಅಲೋಕ್ ಕುಮಾರ್ ಅವರಿಗೆ ಮೈಸೂರಿನಲ್ಲಿ ವಶಪಡಿಸಿಕೊಂಡ ಸ್ಫೋಟದ ಸಾಕ್ಷ್ಯಗಳ ಬಗ್ಗೆ ಮೈಸೂರು ನಗರ



ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್(ಎಡಬದಿ) ಅವರು ಕಾನೂನು–ಸುವ್ಯವಸ್ಥೆ ಎಡಿಜಿಪಿ ಅಲೋಕ್‌ಕುಮಾರ್ ಅವರಿಗೆ ಪ್ರಕರಣದ ಸಾಕ್ಷ್ಯ ಕುರಿತಂತೆ ಸೋಮವಾರ ಮಂಗಳೂರಲ್ಲಿ ವಿವರ ನೀಡಿದರು. ಮಂಗಳೂರು ನಗರ ಪೊಲೀಸ್ ಆಯುಕ್ತ ಎನ್.ಶಶಿಕುಮಾರ್, ಇತರರನ್ನು ಚಿತ್ರದಲ್ಲಿ ಕಾಣಬಹುದು.

ಪೊಲೀಸ್ ಆಯುಕ್ತ ಬಿ.ರಮೇಶ್ ವಿವರಿಸಿದರು. ಸರ್ಕ್ಯೂಟ್ ಬೋರ್ಡ್, ಸಣ್ಣ–ಸಣ್ಣ ಬೋಲ್ಟ್‌ಗಳು, ಬ್ಯಾಟರಿ, ವ್ಯಾಚ್ ಬಾಕ್ಸ್, ಸಲ್ಫರ್, ಪಾಸ್ಫರಸ್, ವುಡನ್ ಪೌಡರ್, ಅಲ್ಯೂಮಿನಿಯಂ ಮಲ್ಟಿಮೀಟರ್, ವೈಯರ್‌ಗಳು, ಮಿಕ್ಸರ್ ಜಾರ್‌ಗಳು, ಪ್ರೆಷರ್ ಕುಕ್ಕರ್ ಸೇರಿದಂತೆ ಹಲವು ವಸ್ತುಗಳನ್ನು, ಶಾರಿಕ್ ಕುಕ್ಕರ್ ಬಾಂಬ್ ತಯಾರಿಸಲು ಬಳಸುತ್ತಿದ್ದನೆಂಬುದು ಆತ ವಾಸವಿದ್ದ ಕೊಠಡಿ ▶ 8ನೇ ಪುಟಕ್ಕೆ

ದೃಢಪಡದ ಮಾಹಿತಿ ಹಂಚಿಕೊಳ್ಳದಂತೆ ಜನರಿಗೆ ಸಲಹೆ

ಮಂಗಳೂರು: ಮಂಗಳೂರಿನಲ್ಲಿ ಚಲಿಸುತ್ತಿದ್ದ ಆಟೋದಲ್ಲಿ ಬಾಂಬ್ ಸ್ಫೋಟಗೊಂಡಿದ್ದ ಪ್ರಕರಣದ ಬಗ್ಗೆ ದೃಢಪಡದ ಯಾವುದೇ ಮಾಹಿತಿಯನ್ನು ಹಂಚಿಕೊಳ್ಳದಂತೆ ಮಂಗಳೂರು ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಜನರಿಗೆ ಸಲಹೆ ನೀಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ, ಸ್ಫೋಟಕ್ಕೆ ಸಂಬಂಧಿಸಿದ್ದೆಂದು ಹೇಳಲಾಗುತ್ತಿರುವ ವೀಡಿಯೋ ಒಂದು ವೈರಲ್ ಆಗಿದ್ದು, ಅದರಲ್ಲಿ ಇಬ್ಬರು ವ್ಯಕ್ತಿಗಳು ವೈನ್ ಅಂಗಡಿ ಮುಂದೆ ಬ್ಯಾಗ್ ಹಿಡಿದಿರುವುದು ಕಂಡುಬಂದಿದೆ. ಈ ಬಗ್ಗೆ ಪೊಲೀಸ್ ಆಯುಕ್ತರು ಮಾತನಾಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ವೀಡಿಯೋ ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ. ಪೊಲೀಸರಿಗೆ ಕೆಲವು ದೃಢಪಡದ ವಿಡಿಯೋಗಳು ದೊರೆತಿವೆ, ಇದರಲ್ಲಿ ಇಬ್ಬರು ವ್ಯಕ್ತಿಗಳು ವೈನ್ ಶಾಪ್ ಬಳಿ ಕಾಣಿಸಿಕೊಂಡಿದ್ದಾರೆ ಈ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗತೊಡಗಿದೆ. ಇಂತಹ ದೃಢಪಡದ ವೀಡಿಯೋಗಳನ್ನು ಹಂಚಿ ಕೊಳ್ಳಬೇಡಿ ಎಂದು ಆಯುಕ್ತರು ಮನವಿ ಮಾಡಿದ್ದಾರೆ.

ಅನಾಹುತ ತಪ್ಪಿಸಿದ್ದಕ್ಕೆ ದೇವರಿಗೆ ಧನ್ಯವಾದ


ಮಂಗಳೂರು, ನ.22– ಕುಕ್ಕರ್ ಬಾಂಬ್ ಬ್ಲಾಸ್ಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ದೊಡ್ಡ ಅನಾಹುತ ತಪ್ಪಿಸಿದ್ದಕ್ಕೆ ದೇವರಿಗೆ ಧನ್ಯವಾದವನ್ನು ಎಡಿಜಿಪಿ ಅಲೋಕ್‌ಕುಮಾರ್ ಸಲ್ಲಿಸಿದರು.

ಅಧರ್ಮದ ಹಾದಿಯಲ್ಲಿ ಬಂದವರಿಗೆ ಶಿಕ್ಷೆ ನೀಡಿದ ತುಳು ನಾಡಿನ ಅವಳಿ ವೀರ ಪುರುಷರ ಪವಾಡ ಇದಾಗಿದೆ. ಗರೋಡಿ ಕ್ಷೇತ್ರದ 200 ಮೀಟರ್ ದೂರ ಕುಕ್ಕರ್ ಬಾಂಬ್ ಬ್ಲಾಸ್ಟ್ ಆಗಿದೆ. ದೊಡ್ಡ ಅನಾಹುತ ತಪ್ಪಿಸಿದ್ದೇ ಗರೋಡಿ ಕ್ಷೇತ್ರದ ಕಾರಣಿಕ ಶಕ್ತಿಗಳು ಎಂದು ಭಕ್ತರು ಹೇಳಿದ್ದಾರೆ ಎಂದರು. ಮಂಗಳೂರಿನ ಗರೋಡಿ ಶ್ರೀ ಬ್ರಹ್ಮ ಬೈದರ್ಕಳ ಕ್ಷೇತ್ರದಲ್ಲಿ ನೆಲೆಯೂರಿರುವ ಕೋಟಿ–ಚೆನ್ನಯ್ಯ ಅವಳಿ ಮಹಾಪುರುಷ ಶಕ್ತಿಗಳು. ದೊಡ್ಡ ಮಟ್ಟದ ಅನಾಹುತ ತಪ್ಪಿಸಿದ್ದು ಈ ಶಕ್ತಿಗಳು. ಮಾನವ ಬಲವೊಂದಿದ್ದರೆ ಸಾಲದು ದೈವಬಲವೂ ಬೇಕು ▶ 8ನೇ ಪುಟಕ್ಕೆ

ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದರೆ ಮುಸ್ಲಿಂ ಸಮುದಾಯಕ್ಕೆ ಸಿಎಂ ಸ್ಥಾನ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮುಕ್ತ ಮನಸ್ಸು

ಕೋಲಾರ, ನ.22– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದರೆ ಮುಸ್ಲಿಂ ಸಮುದಾಯಕ್ಕೆ ಮುಖ್ಯಮಂತ್ರಿ ಪಟ್ಟ ನೀಡುವ ಮುಕ್ತ ಅವಕಾಶಗಳೂ ನಮ್ಮ ಪಕ್ಷದಲ್ಲಿ ಇವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.



ತಾಲೂಕಿನ ಕ್ಯಾಲನೂರಿನಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕುಮಾರಸ್ವಾಮಿ ದೆಹಲಿಗೆ ಹೋದರೆ ತಾವೇ ಮುಖ್ಯಮಂತ್ರಿ ಆಗಬಹುದೆಂದು ಸಿ.ಎಂ.ಇಬ್ರಾಹಿಂ ಕೂಡ ಹೇಳಿದ್ದಾರೆ. ಈ ರೀತಿ ಚರ್ಚೆ ಮಾಡಲು ಅವಕಾಶ ಇರುವುದು ನಮ್ಮ ಪಕ್ಷದಲ್ಲಿ ಮಾತ್ರ ಎಂದರು. ಮುಸ್ಲಿಮರೂ ನಮ್ಮವರೇ. ಅವರೂ ಕರ್ನಾಟಕದ ಪ್ರಜೆಗಳು, ಕನ್ನಡಿಗರು. ಹೀಗಾಗಿ, ಆ ಸಮುದಾಯದವರನ್ನು ಮುಖ್ಯಮಂತ್ರಿ ಮಾಡಬಾರದೆಂದೇನೂ ಇಲ್ಲ. ಒಬ್ಬ ವ್ಯಕ್ತಿಗೆ ಅವಕಾಶ ನೀಡುವ ಪ್ರಶ್ನೆ ಇದಲ್ಲ. ನನಗೆ ಆ ಸಮುದಾಯಗಳಲ್ಲಿನ ಸಮಸ್ಯೆಗೆ ಪರಿಹಾರ ಬೇಕು ಎಂದು ತಿಳಿಸಿದರು.

ದಲಿತರು ಹಾಗೂ ಮಹಿಳೆಯರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲು ಸಿದ್ಧನಿದ್ದೇನೆ. ಇದು ಸ್ವಯಂಪ್ರೇರಣೆಯಿಂದ ಮಾಡಿದ ಘೋಷಣೆ ಅಲ್ಲ. ದಲಿತ ಸಮುದಾಯದ ಯುವಕನೊಬ್ಬ ಆತ ಎದುರಿಸಿರುವ ಸಮಸ್ಯೆ ಹೇಳಿಕೊಂಡ. ಎಲ್ಲಾ ರಾಜಕೀಯ ಪಕ್ಷಗಳು ದಲಿತರನ್ನು ಅಸಡ್ಡೆಯಿಂದ ನೋಡುತ್ತಿರುವುದಾಗಿ ಬೇಸರ ವ್ಯಕ್ತಪಡಿಸಿದ ಅವರು, ದಲಿತರ ಮತ ಪಡೆಯಲು ಈ ಘೋಷಣೆ ಮಾಡಿಲ್ಲ. ಹಾಗೆಯೇ ಮಹಿಳೆಯರ ಕಷ್ಟಗಳನ್ನು ಯಾವುದೇ ಸರ್ಕಾರ ಆಲಿಸುತ್ತಿಲ್ಲ. ಮಹಿಳೆಯರ ರಕ್ಷಣೆಗಾಗಿ ಉಪಮುಖ್ಯಮಂತ್ರಿ ಅವಶ್ಯವೆಂದಾದರೆ ಅದಕ್ಕೂ ಸಿದ್ಧ ಎಂದರು. ▶ 8ನೇ ಪುಟಕ್ಕೆ

ಹೆಗ್ಗೋಠಾರ ಅಸ್ಪೃಶ್ಯತೆ ಆಚರಣೆ ಪ್ರಕರಣ: ಆರೋಪಿ ಬಂಧನ

ಚಾಮರಾಜನಗರ, ನ.22– ತಾಲೂಕಿನ ಹೆಗ್ಗೋಠಾರ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮಹಿಳೆ ಗ್ರಾಮದ ಸಾರ್ವಜನಿಕ ನೀರಿನ ಟ್ಯಾಂಕ್‌ನಲ್ಲಿ ನೀರು ಕುಡಿದ ಕಾರಣಕ್ಕೆ ಆ ಟ್ಯಾಂಕ್‌ನಲ್ಲಿ ಸಂಗ್ರಹವಾಗಿದ್ದ ನೀರನ್ನು ಖಾಲಿ ಮಾಡಿ, ನಂತರ ಗೋಮೂತ್ರದಿಂದ ಶುದ್ಧೀಕರಣ ಮಾಡಿ ಅಸ್ಪೃಶ್ಯತೆ ಆಚರಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಸಂತ್ರಸ್ತೆ ಶಿವಮ್ಮ ಹೇಳಿಕೆ ದಾಖಲು

ಗ್ರಾಮದ ಮಹದೇವಪ್ಪ ಎಂಬುವರನ್ನು ಪೊಲೀಸರು ಸೋಮವಾರ ರಾತ್ರಿ ಬಂಧಿಸಿದರು. ಮಂಗಳವಾರ ಅವರನ್ನು ಚಾಮರಾಜನಗರದ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು. ನ್ಯಾಯಾಧೀಶರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಸಂತ್ರಸ್ತೆ ಹೇಳಿಕೆ ದಾಖಲು: ಪ್ರಕರಣದ ಸಂತ್ರಸ್ತೆ, ಹೆಚ್.ಡಿ.ಕೋಟೆ ತಾಲೂಕಿನ ಸರಗೂರು ಗ್ರಾಮದ ಶಿವಮ್ಮ, ಮಂಗಳವಾರ ಪೊಲೀಸರಿಗೆ ಹೇಳಿಕೆ ನೀಡಿದ್ದರು. ಡಿವೈಎಸ್ಪಿ ಕಚೇರಿಯಲ್ಲಿ ನ.18ರಂದು ಹೆಗ್ಗೋಠಾರ ಘಟನೆ ಸಂಬಂಧ ಹೇಳಿಕೆ ದಾಖಲಿಸಲಾಗಿತ್ತು.

ಮನವಿ ಸಲ್ಲಿಕೆ: ಹೆಗ್ಗೋಠಾರದ ದಲಿತ ಮುಖಂಡರು ಹಾಗೂ ದಲಿತ ಸಂಘಟನೆಗಳ ಮುಖಂಡರು ಡಿಸಿಗೆ ಮನವಿ ಸಲ್ಲಿಸಿ, ಗ್ರಾಮದಲ್ಲಿರುವ ದೇವಸ್ಥಾನಗಳಿಗೆ ಹಿಂದಿನಿಂದಲೂ ಪ್ರವೇಶವನ್ನು ನಿರಾಕರಿಸಲಾಗಿದ್ದು, ಅಸ್ಪೃಶ್ಯತಾ ಆಚರಣೆ ನಡೆಯುತ್ತಿದೆ. ಹೋಟೆಲ್‌ಗಳ ಪ್ರವೇಶಿಸಲು ಅವಕಾಶ ನೀಡುತ್ತಿಲ್ಲ. ಕುಡಿಯುವ ನೀರು ಬಿಡಲು ಸ್ವಜಾತಿಯವರನ್ನೇ ನೇಮಕ ಮಾಡಿಕೊಳ್ಳಲಾಗಿದೆ. ಇದನ್ನು ಬದಲಾಯಿಸಬೇಕು. ಡಾ.ಬಿ.ಆರ್. ಅಂಬೇಡ್ಕರ್ ಭವನದ ಸುತ್ತಲೂ ಗ್ರಾಮದ ಗಲೀಜು ನೀರು ನಿಂತಿದೆ. ಅದು ಮುಂದೆ ಹೋಗದಂತೆ ಸವರ್ಣೀಯರು ತಡೆಹಿಡಿದಿದ್ದಾರೆ. ಏನೂ ಕ್ರಮ ಕೈಗೊಳ್ಳದ ಗ್ರಾಪಂ ಅಭಿವೃದ್ಧಿ ಅಧಿಕಾರಿಯನ್ನು ಕೂಡಲೇ ವಜಾಗೊಳಿಸಿ, ಕಾನೂನು ಕ್ರಮ ಕೈಗೊಳ್ಳಬೇಕು. ಗ್ರಾಮದ ಸರ್ವೆ ನಂ.240/2ರಲ್ಲಿ ತಿಪ್ಪೆಗುಂಡಿಯನ್ನು ಸವರ್ಣೀಯರು ಮಾತ್ರ ಉಪಯೋಗಿಸುತ್ತಿದ್ದು, ದಲಿತರಿಗೆ ಪ್ರವೇಶವಿಲ್ಲದಂತಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ನಿಮ್ಮ ಜಾತಿ ಯಾವುದು?

"ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೆಗ್ಗೋಠಾರ ಗ್ರಾಮಕ್ಕೆ ನಾನು ಬಂದಿದ್ದೆ. ಮಧ್ಯಾಹ್ನ ಊಟ ಆದ ನಂತರ ತಾವು ಬಂದಿದ್ದ ವಾಹನದಲ್ಲಿ ವಾಪಸ್ ಹೋಗುವ ಮೊದಲು ಸ್ಥಳದಲ್ಲಿದ್ದ ನೀರಿನ ಟ್ಯಾಂಕ್‌ನಲ್ಲಿ ನೀರು ಕುಡಿದೆ. ಈ ವೇಳೆ ಅಲ್ಲಿದ್ದ ವ್ಯಕ್ತಿಯೊಬ್ಬರು, ನೀವು ಮುಟ್ಟಬಾರದು. ನಿಮ್ಮ ಜಾತಿ ಯಾವುದು ಎಂದರು. ಅದಕ್ಕೆ ನಾನು ಎಸ್ಸಿ ಎಂದಾಗ ಅವರು ನೀವು ಇಲ್ಲಿ ನೀರು ಕುಡಿಯಬಾರದೆಂದರು. **–ಶಿವಮ್ಮ, ಸಂತ್ರಸ್ತೆ**



ಮೈಸೂರು ಜಿಲ್ಲೆಯ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ ಪ್ರಬಲ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾದ ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಕೂರ್ಗಳ್ಳಿ ಮಹದೇವ ಅವರು ಸೋಮವಾರ ಬೆಂಗಳೂರು ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ 2 ಲಕ್ಷ ರೂ. ಡಿಡಿಯೊಂದಿಗೆ ಅರ್ಜಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರೂ ಆದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಚಿಕ್ಕಣ್ಣ, ತಾಲೂಕು ಪಂಚಾಯ್ತಿ ಮಾಜಿ ಸದಸ್ಯ ಬೆಳವಾಡಿ ಲೋಕೇಶ್, ಮೈಸೂರು ಜಿಲ್ಲಾ ಗ್ರಾಮಾಂತರ ಯುವ ಕಾಂಗ್ರೆಸ್ ಅಧ್ಯಕ್ಷ ಎಸ್‌ಆರ್‌ಎಸ್ ವಿನೋದ್, ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ನವೀನ್, ಯುವ ಕಾಂಗ್ರೆಸ್ ಮುಖಂಡ ಹಿನಕಲ್ ಮಂಜು, ಯುವ ಮುಖಂಡರು ಹಾಗೂ ವಕೀಲರಾದ ಜೀವನ್ ಮಹದೇವ್ ಉಪಸ್ಥಿತರಿದ್ದರು. ಕೂರ್ಗಳ್ಳಿ ಮಹದೇವ ಅವರು ಕೂರ್ಗಳ್ಳಿ ಗ್ರಾಪಂ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕಳೆದ 30 ವರ್ಷಕ್ಕೂ ಅಧಿಕ ಕಾಲದಿಂದ ಕಾಂಗ್ರೆಸ್‌ನಲ್ಲಿ ನಿಷ್ಠವಂತರಾಗಿ ದುಡಿಯುತ್ತಾ ಬಂದಿದ್ದಾರೆ.

ಪ್ರೊ. ಆರ್. ಇಂದಿರಾಗೆ ಜೀವಮಾನ ಸಾಧನೆ ಪ್ರಶಸ್ತಿ



ಪ್ರೊ॥ಆರ್.ಇಂದಿರಾ

ಮೈಸೂರು,ನ.22–ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದು ಹಾಲಿ ಡಾ.ಬಿ.ಆರ್.ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿರುವ ಪ್ರೊ॥ಆರ್.ಇಂದಿರಾ ಅವರಿಗೆ ಭಾರತೀಯ ಸಮಾಜಶಾಸ್ತ್ರ ಸಂಘ ಜೀವಮಾನ ಸಾಧನೆ ಪ್ರಶಸ್ತಿ ನೀಡಿದೆ.

ಸಮಾಜಶಾಸ್ತ್ರದ ಅಭಿವೃದ್ಧಿಗಾಗಿ ಅಸಾಧಾರಣ ಕೊಡುಗೆಗಳನ್ನು ನೀಡಿ ವೃತ್ತಿಯ ಘನತೆಯನ್ನು ಹೆಚ್ಚಿಸಿರುವ ಭಾರತೀಯ ಸಮಾಜಶಾಸ್ತ್ರಜ್ಞರಿಗೆ ಗೌರವ ಸಲ್ಲಿಸಲು ಭಾರತೀಯ ಸಮಾಜಶಾಸ್ತ್ರ ಸಂಘ ನೀಡುವ ಅತ್ಯುನ್ನತ ಮತ್ತು ಪ್ರತಿಷ್ಠಿತ ಪ್ರಶಸ್ತಿ ಇದಾಗಿದೆ. ಮೇಘಾಲಯದಲ್ಲಿ ಡಿಸೆಂಬರ್‌ನಲ್ಲಿ ನಡೆಯುವ 47 ನೇ ಭಾರತೀಯ ಸಮಾಜಶಾಸ್ತ್ರ ಸಮ್ಮೇಳನದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ತಮ್ಮ 50 ವರ್ಷಗಳ ವೃತ್ತಿ ಜೀವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದಲ್ಲಿ 42 ವರ್ಷಗಳ ಕಾಲ ಅಧ್ಯಾಪಕಿಯಾಗಿ, ಮುಖ್ಯಸ್ಥರಾಗಿ, ಅಂತರರಾಷ್ಟ್ರೀಯ ಕೇಂದ್ರ ಮತ್ತು ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿರುವ ಪ್ರೊ. ಇಂದಿರಾ ಎರಡು ಬಾರಿ ಫುಲ್ ಬ್ರೈಟ್, ನಾಲ್ಕು ಬಾರಿ ಶಾಸ್ತ್ರಿ ಇಂಡೋ ಕೆನಡಿಯನ್ ಹಾಗೂ ಶೈಕ್ಷಣಿಕ ಕ್ಷೇತ್ರದ ಇತರ ಪ್ರತಿಷ್ಠಿತ ಸಂಶೋಧನಾ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಭಾರತೀಯ ಸಮಾಜಶಾಸ್ತ್ರ ಸಂಘದ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ, ಕರ್ನಾಟಕ ಸಮಾಜಶಾಸ್ತ್ರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಅವರು, ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ರಚಿಸಿರುವ ಗ್ರಂಥಗಳು, ಲೇಖನಗಳು, ಸಂಶೋಧನಾ ವರದಿಗಳು, ಶಬ್ದಕೋಶಗಳು ಸಮಾಜಶಾಸ್ತ್ರ ಕ್ಷೇತ್ರಕ್ಕೆ ನೀಡಿರುವ ಪ್ರಮುಖ ಕೊಡುಗೆಗಳು, ನಾಡಿನ ಪ್ರಮುಖ ಕನ್ನಡ ಪತ್ರಿಕೆಗಳಲ್ಲಿ ತಮ್ಮ ಅಂಕಣಗಳ ಮೂಲಕ ಸಮಾಜಶಾಸ್ತ್ರೀಯ ವಿಚಾರಗಳನ್ನು ಸಾರ್ವಜನಿಕ ವಲಯಕ್ಕೆ ತಂದ ಹೆಗ್ಗಳಿಕೆ ಅವರದ್ದು. ಸಮೃದ್ಧಿ ಫೌಂಡೇಶನ್‌ನ ಅಧ್ಯಕ್ಷರಾಗಿ, ವಿದ್ಯಾರ್ಥಿಗಳು ಮತ್ತು ಯುವ ಅಧ್ಯಾಪಕರ ಸಾಮರ್ಥ್ಯ ಬಲವರ್ಧನೆಯ ಕೆಲಸದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.



ಇತ್ತೀಚೆಗೆ ದಾವಣಗೆರೆಯಲ್ಲಿ ನಡೆದ ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಮೈಸೂರಿನ ಅಪೋಲೋ ವ್ಯಾಯಾಮ ಶಾಲೆಯ ಶ್ರೀನಿವಾಸ ಪ್ರಸಾದ್ (ಚಿನ್ನ), ಗಣೇಶ್ ಪ್ರಸಾದ್ (ಬೆಳ್ಳಿ) ಮತ್ತು ಬಿ.ರಾಹುಲ್ (5ನೇ) ಬಹುಮಾನ ಪಡೆದುಕೊಂಡಿದ್ದಾರೆ. ನಿರ್ದೇಶಕ ವೈ.ಎನ್.ನಾಗೇಶ್‌ರಾವ್ ಚಿತ್ರದಲ್ಲಿದ್ದಾರೆ.

ರಾಜ್ಯಸಭಾ ಸದಸ್ಯ ಡಾ.ಎಲ್.ಹನುಮಂತಯ್ಯರ ಕವನ ಸಂಕಲನ 'ಅಂತರಾಳದ ಒಳದನಿಗಳು' ಲೋಕಾರ್ಪಣೆ



ಡಾ.ಎಲ್.ಹನುಮಂತಯ್ಯ

ಮೈಸೂರು,ನ.22–ಮೈಸೂರಿನ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ರಾಜ್ಯಸಭಾ ಸದಸ್ಯ ಡಾ.ಎಲ್.ಹನುಮಂತಯ್ಯ ಅವರ ಆಯ್ದ ನೂರೊಂದು ಕವಿತೆಗಳನ್ನು ಸಂಗ್ರಹಿಸಿ ವೈದ್ಯ ವಾರ್ತಾ ಪ್ರಕಾಶನದ ಮುಖಾಂತರ ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ಅವರು ಸಂಪಾದಿಸಿರುವ ಅಂತರಾಳದ ಒಳಧ್ವನಿಗಳು ಕೃತಿಯ ಲೋಕಾರ್ಪಣೆ ಸಮಾರಂಭವನ್ನು ನ.28ರ ಸೋಮವಾರ ಬೆಳಗ್ಗೆ 10.45 ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಆಯುಕ್ತ ಪಿ.ಜಿ.ಆರ್ ಸಿಂಧ್ಯಾ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಕೃತಿ ಲೋಕಾರ್ಪಣೆ ಮಾಡುವರು. ಸಾಹಿತಿ, ವಿಮರ್ಶಕರೂ ಆದ ಓ.ಎಲ್. ನಾಗಭೂಷಣಸ್ವಾಮಿ ಕೃತಿ ಕುರಿತು ಮಾತನಾಡುವರು. ಸಮಾರಂಭದ ಅಧ್ಯಕ್ಷತೆಯನ್ನು ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷರಾದ ವಿಜಯಲಕ್ಷ್ಮಿ ಅರಸ್ ವಹಿಸುವರು. ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಸದಸ್ಯರಾದ ಹೆಚ್.ಎಸ್.ಸುರೇಶ್‌ಬಾಬು ಅವರು ಅನ್ವೇಷಣಾ ಸೇವಾ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷ ಅಮರನಾಥರಾಜೇಅರಸ್ ಮತ್ತು ರಾಜ್ಯಸಭಾ ಸದಸ್ಯ ಡಾ.ಎಲ್.ಹನುಮಂತಯ್ಯ ಮುಖ್ಯ ಅತಿಥಿಗಳಾಗಿರುವರು.

ಮಹಾಜನ ಕಾಲೇಜಿಗೆ ಸಮಗ್ರ ಪ್ರಶಸ್ತಿ



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸಿದ್ದ ನಗರ ಅಂತರ ಕಾಲೇಜು ಪುರುಷರ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು 2021–22ನೇ ಸಾಲಿನ ಸಮಗ್ರ ತಂಡ ಪ್ರಶಸ್ತಿ ಪಡೆದುಕೊಂಡಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂದನ, ಡಾ.ಭಾಸ್ಕರ್, ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಆಡಳಿತ ಮಂಡಳಿ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಡಾ.ಶ್ರೀಧರ, ಡೀನ್ (ಶೈಕ್ಷಣಿಕ), ಮಂಜುನಾಥ, ಪರೀಕ್ಷಾ ನಿಯಂತ್ರಣಾಧಿಕಾರಿ ಹಾಗೂ ವಿವಿಧ ತಂಡಗಳ ನಾಯಕರುಗಳನ್ನು ಕಾಣಬಹುದು.

ವಿಶೇಷಚೇತನರ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ನ.22(ಆರ್‌ಕೆಬಿ)–ಭಾರತದಲ್ಲಿ ದೃಷ್ಟಿಹೀನರು, ವಿಕಲಚೇತನರು ಮತ್ತು ಅವಕಾಶ ವಂಚಿತರ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಸಮರ್ಥನಂ ಅಂಗವಿಕಲರ ಸಂಸ್ಥೆಯು ಮೈಸೂರು ವಿಭಾಗದಲ್ಲಿ ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ 2022–23ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿವೇತನ ನೀಡಲು ಅರ್ಜಿ ಆಹ್ವಾನಿಸಿದೆ. ಪಿಯುಸಿ ಪೂರ್ಣಗೊಳಿಸಿ ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ ಎಂದು ಸಂಸ್ಥೆಯ ಮೈಸೂರು ವಿಭಾಗದ ಸಂಯೋಜಕ ಶಿವರಾಜ್ ತಿಳಿಸಿದ್ದಾರೆ. ಆಸಕ್ತರು ಆಧಾರ್ ಕಾರ್ಡ್, ವಿಕಲಚೇತನ ಗುರುತಿನ ಚೀಟಿ ಅಥವಾ ಯುಡಿಐಡಿ ಕಾರ್ಡ್, ಪ್ರಸಕ್ತ ಸಾಲಿನ ಕಾಲೇಜು ಶುಲ್ಕ ಪಾವತಿಸಿದ ರಸೀದಿ, ವಿದ್ಯಾರ್ಥಿ ಬ್ಯಾಂಕ್ ಖಾತೆ ವಿವರ, ಪಾಸ್ ಬುಕ್ ದಾಖಲಾತಿಗಳೊಂದಿಗೆ ನ.30 ರೊಳಗಾಗಿ ನಂ.11211, ಆಲದಮರ ರಸ್ತೆ, ವಿಜಯನಗರ 4ನೇ ಹಂತ, 2ನೇ ಘಟ್ಟ, ಮೈಸೂರು–570032 ವಿಳಾಸಕ್ಕೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ– 6364867818, 8123725949 ಸಂಪರ್ಕಿಸಬಹುದು.

ಸುಜಾತಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಕೆ.ಎನ್.ಅಮೃತೇಶ್ ಮಾರ್ಗದರ್ಶನದಲ್ಲಿ ಹೆಚ್.ಎಸ್. ಸುಜಾತ, ಸಸ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ



ಅನಂತ

ಮೈಸೂರು, ನ. 22– ಮೈಸೂರಿನ ಅಮರದೀಪ ಗ್ಯಾಸ್ ಸರ್ವೀಸ್‌ನಲ್ಲಿ ಡೆಲಿವರಿ ಬಾಯ್ ಆಗಿದ್ದ ಅನಂತ (ಆನಂದ್–38) ಮಂಗಳವಾರ ನಿಧನರಾದರು. ಇವರು ಪತ್ನಿ, ಪುತ್ರ ಹಾಗೂ ಅಪಾರ ಬಂಧು ವರ್ಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಅಮರದೀಪ್ ಗ್ಯಾಸ್ ಸರ್ವೀಸ್‌ನ ಮಾಲೀಕರಾದ ಮೇಹುಲ್ ಪಟೇಲ್ ಅತೀವ ಸಂತಾಪ ವ್ಯಕ್ತಪಡಿಸಿದ್ದಾರೆ.

ಮೈಸೂರು ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ 'ಜನಪರ ಉತ್ಸವ'

ಕಲಾ ತಂಡಗಳ ಮೆರವಣಿಗೆಯಲ್ಲಿ ನರ್ತಿಸುತ್ತಾ ನಲಿದ ವಿದ್ಯಾರ್ಥಿನಿಯರು!





ಜನಪರ ಉತ್ಸವಕ್ಕೆ ಚಾಲನೆ ನೀಡಿದ ಡಾ.ಮಳವಳ್ಳಿ ಮಹದೇವಸ್ವಾಮಿ ನಂತರ ಮಲೆಯ ಮಹದೇಶ್ವರಸ್ವಾಮಿ ಕಾವ್ಯ ಗಾಯನ ನಡೆಸಿಕೊಟ್ಟರು. ಮಹಾರಾಣಿ ಮಹಿಳಾ ಕಾಲೇಜು ಪ್ರಾಂಶುಪಾಲ ಶ್ರೀನಿವಾಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಕಾಲೇಜು ಸಾಂಸ್ಕೃತಿಕ ವೇದಿಕೆ ಕಾರ್ಯದರ್ಶಿ ಡಾ.ಜಯರಾಮು, ವಿದ್ಯಾರ್ಥಿನಿಯರನ್ನು (ಬಲಚಿತ್ರದಲ್ಲಿ) ಕಾಣಬಹುದು.

ಮೈಸೂರು, ನ.22(ಆರ್‌ಕೆಬಿ)– ವಿಶೇಷ ಘಟಕ ಯೋಜನೆಯಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ 'ಜನಪರ ಉತ್ಸವ'ದಲ್ಲಿ ಕಲಾತಂಡಗಳ ಮೆರವಣಿಗೆಯಲ್ಲಿ ವಿದ್ಯಾರ್ಥಿನಿಯರು ನರ್ತಿಸುತ್ತಾ ನಲಿದರು.

ಕಾಲೇಜು ಆವರಣದಿಂದ ಹೊರಟ ಕಲಾ ತಂಡಗಳ ಮೆರವಣಿಗೆ ಶಿವರಾಂಪೇಟೆ ಮಾರ್ಗವಾಗಿ ಡಿ.ದೇವರಾಜ ಅರಸು ರಸ್ತೆ ಮೂಲಕ ಮತ್ತೆ ಕಾಲೇಜು ತಲುಪಿತು. ಮೆರವಣಿಯಲ್ಲಿ ಕಾಲೇಜಿನ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಲಾ ತಂಡಗಳ ಡೊಳ್ಳು ಕುಣಿತದ ತಾಳಕ್ಕೆ ತಕ್ಕಂತೆ ಕುಣಿದು ಸಂಭ್ರಮಿಸಿದರು.

ಮೆರವಣಿಗೆಯಲ್ಲಿ ವಿದ್ಯಾರ್ಥಿಗಳ ತಂಡದ ಮಹಿಳಾ ಕಂಸಾಳೆ, ಪೂಜಾ ಕುಣಿತ, ಕೀಲುಕುದುರೆ, ಪಟ ಕುಣಿತ ಭಾಗವಹಿಸಿದ್ದವು.

ನಂತರ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಡಾ.ಮಳವಳ್ಳಿ ಮಹದೇವಸ್ವಾಮಿ ಮತ್ತು ತಂಡದಿಂದ ಮಲೆಯ ಮಹದೇಶ್ವರಸ್ವಾಮಿ ಕಾವ್ಯ ಗಾಯನ, ಡಾ.ಮೈಸೂರು ಗುರುರಾಜ್ ಮತ್ತು ತಂಡದಿಂದ ಮಂಟೇಸ್ವಾಮಿ ಮತ್ತು ಸಿದ್ದಪ್ಪಾಜಿ ಗಾಯನ, ಬನ್ನೂರಿನ ದೊಡ್ಡರಾಚಪ್ಪ ಮತ್ತು ತಂಡದ ತಂಬೂರಿ ಪದ, ನಂಜನಗೂಡು ತಾಲೂಕಿನ ಕೆ.ಎನ್.ಅಶ್ವಿನಿ ಮತ್ತು ತಂಡದಿಂದ ಜಾನಪದ ಗೀತೆ, ತಲಕಾಡು ಪುಟ್ಟಮಾದಮ್ಮ ತಂಡ, ಮಾದಿಗಳ್ಳಿ ಚೆನ್ನಾಜಮ್ಮ ತಂಡ, ಚುಜ್ಜತಾಯಮ್ಮ ತಂಡ, ತಿ.ನರಸೀಪುರದ ಚಿಕ್ಕಮಂಜಮ್ಮ ತಂಡ, ಲಕ್ಷ್ಮಮ್ಮ ಮತ್ತು ತಂಡದಿಂದ ಸೋಬಾನೆ ಪದ, ಮೈಸೂರಿನ ವಿಶ್ವನಾಥ್ ಮತ್ತು ತಂಡದಿಂದ ಜಾನಪದ ನೃತ್ಯ ರೂಪಕ, ಕಲ್ಕುಂದ ಮಂಗಳಮ್ಮ ಮತ್ತು ತಂಡದ ಜಾನಪದ ಸಂಭ್ರಮ, ತಲಕಾಡು ಕೃಷ್ಣಮೂರ್ತಿ ತಂಡದಿಂದ ಡೊಳ್ಳು ಕುಣಿತ, ತೇಜೋವತಿ ಮತ್ತು ತಂಡದ ಮಹಿಳಾ ಕಂಸಾಳೆ, ಪುಟ್ಟಸ್ವಾಮಿ ತಂಡದ ಕೋಲಾಟ ನೃತ್ಯ, ಬನ್ನೂರಿನ ಕರಿಯಪ್ಪ ಮತ್ತು ತಂಡದ ಪೂಜಾ ಕುಣಿತ, ಮೈಸೂರಿನ ಶ್ರೀಧರ್ ತಂಡದ ಕೀಲು ಕುದುರೆ, ತಿ.ನರಸೀಪುರದ ಸಿದ್ದಯ್ಯ ಮತ್ತು ತಂಡದ ಪಟ ಕುಣಿತ, ಕಿರುಗಾವಲು ಬಿ.ಆರ್.ಗಾಯತ್ರಿ ಮತ್ತು ತಂದದ ಕಂಸಾಳೆ ನೃತ್ಯ, ಮೈಸೂರಿನ ಜವರಯ್ಯ ತಂಡದಿಂದ ಚಿಟ್ಟಿಮೇಳ, ಎಸ್.ಮಂಜೇಶ್‌ಬಾಬು ತಂಡದಿಂದ ರಂಗಕುಣಿತ ಗಮನ ಸೆಳೆಯಿತು.

ಇದಕ್ಕೂ ಮುನ್ನ ಕಾರ್ಯಕ್ರಮಕ್ಕೆ ಡಾ.ಮಳವಳ್ಳಿ ಮಹದೇವಸ್ವಾಮಿ ದೀಪ ಬೆಳಗಿಸಿ, ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಒಂದು ನಾಡಿನ ಪ್ರಗತಿ ಹಣ ಮತ್ತು ಸಂಪತ್ತನ್ನು ಮಾತ್ರ ಅವಲಂಬಿಸಿರುವುದಿಲ್ಲ. ಅಲ್ಲಿನ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಶ್ರೀಮಂತಿಕೆಯನ್ನು ಅವಲಂಬಿಸಿರುತ್ತದೆ ಎಂದರು.

ಯಾವುದೇ ಪುರುಷರ ಯಶಸ್ಸಿನ ಹಿಂದೆ ಮಹಿಳೆ ಇರುತ್ತಾಳೆ ಎನ್ನುವ ಬದಲಿಗೆ ಪುರುಷನ ಜೊತೆಯಲ್ಲಿರುತ್ತಾಳೆ ಎಂಬುದು ಸರಿಯಾದದ್ದು. ಅನೇಕ ಮಹಿಳೆಯರು ಬಹು ದೊಡ್ಡ ಸಾಧನೆಗಳನ್ನು ಮಾಡಿ ತೋರಿಸಿದ್ದಾರೆ. ಮಹಿಳೆಯರ ಸಾಧನೆಗೆ ಇಂತಹ ವೇದಿಕೆಗಳು ಸಹಾಯಕವಾಗುತ್ತವೆ. ಹಾಗಾಗಿ ವಿದ್ಯಾರ್ಥಿನಿಯರು ಕಲೆ, ಸಂಸ್ಕೃತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಕಲಾಪ್ರೌಢಿಮೆಯನ್ನು ಪ್ರದರ್ಶಿಸಲು ಅವಕಾಶವಾಗುತ್ತದೆ ಎಂದು ಹೇಳಿದರು.

ಕಾಲೇಜು ಪ್ರಾಂಶುಪಾಲ ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಕಾಲೇಜಿನ ಸಾಂಸ್ಕೃತಿಕ ವೇದಿಕೆ ಕಾರ್ಯದರ್ಶಿ ಡಾ.ಆರ್. ಜಯರಾಮು, ವಿದ್ಯಾರ್ಥಿ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷೆ ಪ್ರಿಯಾಂಕ, ಕಾರ್ಯದರ್ಶಿ ಜೈಬಾ, ಖಜಾಂಚಿ ಡಾ.ಸವಿತಾ ಇನ್ನಿತರರು ಉಪಸ್ಥಿತರಿದ್ದರು.



ಚಾಮುಂಡೇಶ್ವರಿ ರೈಲ್ವೆ ಬಡಾವಣೆ ಕ್ಷೇಮಾಭಿವೃದ್ಧಿ ಸಂಘವನ್ನು ಮಾಜಿ ಸಚಿವ, ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಎಂ.ಕೆ.ಶ್ರೀಧರ್, ಸದಸ್ಯ ಎಸ್.ಬಿ.ಎಂ.ಮಂಜು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಾನಸಗಂಗೋತ್ರಿ ಆವರಣದಲ್ಲಿ ಹಿರಿಯ ನಾಗರಿಕರ ವಾಯುವಿಹಾರಕ್ಕೆ ಅವಕಾಶ



ಮೈಸೂರು,ನ.22(ಆರ್‌ಕೆಬಿ)–ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿ ವಾಯುವಿಹಾರಿಗಳಿಗೆ ವಿಧಿಸಿದ್ದ ನಿರ್ಬಂಧವನ್ನು ಮೈಸೂರು ವಿವಿ ತೆರವುಗೊಳಿಸಿದೆ. ಇತ್ತೀಚೆಗೆ ಮಾನಸಗಂಗೋತ್ರಿ ಆವರಣದಲ್ಲಿ ಹಿರಿಯ ನಾಗರಿಕರೊಬ್ಬರ ಹತ್ಯೆಯಾಗಿದ್ದ ಹಿನ್ನೆಲೆಯಲ್ಲಿ ಮಾನಸಗಂಗೋತ್ರಿ ಆವರಣಕ್ಕೆ ಸಾರ್ವಜನಿಕರಿಗೆ ನಿರ್ಬಂಧ ವಿಧಿಸಲಾಗಿತ್ತು. ಇದರಿಂದ ಹಿರಿಯ ನಾಗರಿಕ ವಾಯುವಿಹಾರಿಗಳಿಗೆ ಬೆಳಗ್ಗೆ ಮತ್ತು ಸಂಜೆ ವಾಯುವಿಹಾರಕ್ಕೆ ತೊಂದರೆಯಾಗಿರುವ ಬಗ್ಗೆ ದೂರುಗಳಿದ್ದವು. ಈ ಹಿನ್ನೆಲೆಯಲ್ಲಿ ವಿವಿ ಅಧಿಕಾರಿಗಳೊಂದಿಗೆ ಹಿರಿಯ ನಾಗರಿಕರು ಚರ್ಚಿಸಿದ್ದರಿಂದ ಕೆಲವು ನಿಬಂಧನೆಗಳೊಂದಿಗೆ ವಾಯುವಿಹಾರಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

ಸಂಸದ ಪ್ರತಾಪ್ ಸಿಂಹ ವಿರುದ್ಧ ಸುಮೊಟೊ ಪ್ರಕರಣ ದಾಖಲಿಸಲು ಒತ್ತಾಯ

ಮೈಸೂರು, ನ.22(ಪಿಎಂ)– ಸ್ವತಃ ಜೆಸಿಬಿಯಿಂದ ಗುಂಬಜ್ ಮಾದರಿ ಪ್ರಯಾಣಿಕರ ತಂಗುದಾಣ ಒಡೆಯುತ್ತೇನೆಂಬ ಸಂಸದ ಪ್ರತಾಪ್‌ಸಿಂಹ ಹೇಳಿಕೆ ಖಂಡನೀಯ. ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಿರುವ ತಂಗುದಾಣದ ಬಗ್ಗೆ ಹೀಗೆ ಮಾತನಾಡಿರುವುದು ಸರಿಯಲ್ಲ. ಅವರ ವಿರುದ್ಧ ಸ್ವಯಂಪ್ರೇರಿತ (ಸುಮೊಟೊ) ಪ್ರಕರಣ ದಾಖಲಿಸಬೇಕು ಎಂದು ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ಒತ್ತಾಯಿಸಿದೆ.



ಪತ್ರಿಕಾಗೋಷ್ಠಿಗೂ ಮುನ್ನ ನಂಜನಗೂಡು ರಸ್ತೆಯ ವಿವಾದಿತ ಪ್ರಯಾಣಿಕರ ತಂಗುದಾಣದ (ಜೆಎಸ್‌ಎಸ್ ಕಾಲೇಜು ಪ್ರಯಾಣಿಕರ ತಂಗುದಾಣ) ಬಳಿ ಭೀಮಾ ಜನಜಾಗೃತಿ ಮಹಾಸಭಾ ಮತ್ತು ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ಜಂಟಿ ಆಶ್ರಯದಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿ, ಸಂಸದ ಪ್ರತಾಪ್ ಸಿಂಹ ವಿರುದ್ಧ ಪ್ರಕರಣ ದಾಖಲಿಸಲು ಆಗ್ರಹಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಗಿರೀಶ್ ಶಿವಾರ್ಚಕ, ಗುಂಬಜ್ ಮಾದರಿ ಇರುವ ಕಾರಣ ಸ್ವತಃ ತಂಗುದಾಣ ಒಡೆಯುತ್ತೇನೆ ಎಂಬುದು ಉದ್ಧಟತನದ ಹೇಳಿಕೆ. ಈ ಹೇಳಿಕೆಯಲ್ಲಿ ಕೋಮು ಸೌಹಾರ್ದತೆಗೆ ಧಕ್ಕೆ ಉಂಟುಮಾಡುವ ಉದ್ದೇಶವೂ ಇದೆ. ಇಂತಹ ಹೇಳಿಕೆಯನ್ನು ಜನಸಾಮಾನ್ಯರು ನೀಡಿದ್ದರೆ ಇಷ್ಟೊತ್ತಿಗೆ ಅವರ ಮೇಲೆ ಕಾನೂನು ಕ್ರಮ ಜರುಗುತ್ತಿತ್ತು. ಅಂತೆಯೇ ಇವರ ವಿರುದ್ಧವೂ ಕಾನೂನು ಕ್ರಮ ಆಗಲೇಬೇಕು ಎಂದು ಆಗ್ರಹಿಸಿದರು. ಎರಡು ದಿನಗಳ ಒಳಗೆ ಪ್ರಕರಣ ದಾಖಲಾಗದಿದ್ದರೆ, ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ವೇದಿಕೆ ಪದಾಧಿಕಾರಿಗಳಾದ ಕೆ.ಪ್ರಕಾಶ್, ಶಿವಕುಮಾರ್, ಶಂಕರ್, ರಾಚಪ್ಪ ಮತ್ತಿತರರು ಗೋಷ್ಠಿಯಲ್ಲಿದ್ದರು.

ಬೆಂಗಳೂರು–ವಿಶಾಖಪಟ್ಟಣಂ ವಿಶೇಷ ರೈಲುಗಳ ಸೇವೆ ವಿಸ್ತರಣೆ



ಮೈಸೂರು,ನ.22(ಆರ್‌ಕೆಬಿ)–ಪೂರ್ವ ಕರಾವಳಿ ರೈಲ್ವೆ ವಲಯವು ರೈಲು ಸಂಖ್ಯೆ 08543/08544 ವಿಶಾಖಪಟ್ಟಣಂ–ಬೆಂಗಳೂರು ಕಂಟೋನ್‌ಮೆಂಟ್–ವಿಶಾಖಪಟ್ಟಣಂ ಸಾಪ್ತಾಹಿಕ ಸೂಪರ್‌ಫಾಸ್ಟ್ ಸ್ಪೆಷಲ್ ರೈಲನ್ನು ಬೇಡಿಕೆ ಮೇರೆಗೆ (ಟಿಒಡಿ) ಸೇವೆಯನ್ನು ವಿಸ್ತರಿಸಿದೆ. ಪ್ರತಿ ಭಾನುವಾರ ವಿಶಾಖಪಟ್ಟಣದಿಂದ ಸಂಚರಿಸುವ ರೈಲು ಸಂಖ್ಯೆ 08543 ವಿಶಾಖಪಟ್ಟಣಂ–ಬೆಂಗಳೂರು ಕಂಟೋನ್‌ಮೆಂಟ್ ಸಾಪ್ತಾಹಿಕ ಸೂಪರ್‌ಫಾಸ್ಟ್ ಸ್ಪೆಷಲ್ ಎಕ್ಸ್‌ಪ್ರೆಸ್ ರೈಲಿನ ಸೇವೆಯನ್ನು ಡಿ.4ರಿಂದ 25ರವರೆಗೆ ವಿಸ್ತರಿಸಲಾಗಿದೆ (4 ಬಾರಿ ಸಂಚರಿಸಲಿದೆ) ಈ ಮೊದಲು ನ.27ರವರೆಗೆ ಓಡಿಸಲು ನಿರ್ಧರಿಸಲಾಗಿದೆ.

ಪ್ರತಿ ಸೋಮವಾರ ಬೆಂಗಳೂರು ಕಂಟೋನ್‌ಮೆಂಟ್‌ನಿಂದ ಸಂಚರಿಸುವ ರೈಲು ಸಂಖ್ಯೆ 08544 ಬೆಂಗಳೂರು ಕಂಟೋನ್‌ಮೆಂಟ್–ವಿಶಾಖಪಟ್ಟಣಂ ಸಾಪ್ತಾಹಿಕ ಸೂಪರ್‌ಫಾಸ್ಟ್ ಸ್ಪೆಷಲ್ ಎಕ್ಸ್‌ಪ್ರೆಸ್ ರೈಲು ಸೇವೆಯನ್ನು ಡಿ.5ರಿಂದ 26ರವರೆಗೆ ವಿಸ್ತರಿಸಲಾಗಿದೆ (4 ಬಾರಿ ಸಂಚರಿಸಲಿದೆ) ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.



ಎಪಿಎನ್ ಪ್ರಾಪರ್ಟೀಸ್ ಸಂಸ್ಥೆ ವತಿಯಿಂದ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹುಯಿಲಾಳು ರಾಮಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಸಂಸ್ಥೆ ವ್ಯವಸ್ಥಾಪಕ ನಾಗೇಶ್, ನಗರ ಕಾಂಗ್ರೆಸ್ ಉಪಾಧ್ಯಕ್ಷ ಎನ್.ಆರ್. ನಾಗೇಶ್, ಹರೀಶ್‌ರೆಡ್ಡಿ, ಗೋಪಾಲ್‌ಗೌಡ, ಜಯರಾಮು, ರಾಜುರೆಡ್ಡಿ, ಪ್ರದೀಪ್ ಇನ್ನಿತರರು ಉಪಸ್ಥಿತರಿದ್ದಾರೆ.

ನ.28ರಂದು ಪಾಲಿಕೆ ಸಾಮಾನ್ಯ ಕೌನ್ಸಿಲ್ ಸಭೆ

ಮೈಸೂರು,ನ.22–ಮೈಸೂರು ಮಹಾನಗರಪಾಲಿಕೆ ವತಿಯಿಂದ ನ.28ರಂದು ಸೋಮವಾರ ಪೂರ್ವಾಹ್ನ 11 ಗಂಟೆಗೆ ಮೈಸೂರು ಮಹಾನಗರ ಪಾಲಿಕೆಯ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ನವೆಂಬರ್ ಮಾಹೆಯ ಸಾಮಾನ್ಯ ಕೌನ್ಸಿಲ್ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಪಾಲಿಕೆ ಕೌನ್ಸಿಲ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ 4 ದಿನ ಭಾರತ್ ಜೋಡೋ ಯಾತ್ರೆಯಲ್ಲಿ ಪ್ರಿಯಾಂಕಾ ಗಾಂಧಿ ಭಾಗಿ



ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ಯಾತ್ರೆ ಈಗ ಮಧ್ಯಪ್ರದೇಶ ಪ್ರವೇಶಿಸಿದ್ದು, ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಬುಧವಾರ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಉತ್ತರಪ್ರದೇಶ ಕಾಂಗ್ರೆಸ್ ಉಸ್ತುವಾರಿ ಪ್ರಧಾನ ಕಾರ್ಯದರ್ಶಿಯಾಗಿರುವ ಪ್ರಿಯಾಂಕಾ ಗಾಂಧಿ ಇದೇ ಮೊದಲ ಬಾರಿಗೆ ಜೋಡೋ ಯಾತ್ರೆಯಲ್ಲಿ ಭಾಗವಹಿಸುತ್ತಿದ್ದು, ನಾಳೆಯಿಂದ 4 ದಿನಗಳ ಕಾಲ ತಮ್ಮ ಸಹೋದರ ರಾಹುಲ್ ಗಾಂಧಿಗೆ ಜೊತೆ ಹೆಜ್ಜೆ ಹಾಕಲಿದ್ದಾರೆ.

ಜೋಡೋ ಯಾತ್ರೆಗೆ ಇಂದು ವಿಶ್ರಾಂತಿ ದಿನವಾಗಿದೆ. ಯಾತ್ರೆ ನಾಳೆ ಮಧ್ಯ ಪ್ರದೇಶ ಪ್ರವೇಶಿಸುತ್ತಿದ್ದು, ಬುರ್ಹಾನ್‌ಪುರ ಬಳಿ ಪ್ರಿಯಾಂಕಾ ಗಾಂಧಿ ಭಾಗವಹಿಸುತ್ತಾರೆ ಮತ್ತು ಅವರು ನಾಲ್ಕು ದಿನಗಳ ಕಾಲ ಯಾತ್ರೆಯಲ್ಲಿ ಪಾಲ್ಗೊಳಲಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಟ್ವೀಟ್ ಮಾಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.11.2022 ಬುಧವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ : ವಿಶಾಖ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಮಹಾ ಗಣಪತಿ ಹೋಮ, ಉಪ ಪೂಜೆ, ಪಾಂಚಗವ್ಯ, ಪಾಂಚಕಂ, ಕಳಸ ಪೂಜಾ, ಶವೇಲಿ ವಾದ್ಯದೊಂದಿಗೆ ದೇವರಿಗೆ ಉತ್ಸವ, ಕಳಸಾಭಿಷೇಕ, ಉದಯಾಸ್ಥಮಾನ ಪೂಜೆ, ದೀಪಾರಾಧನೆ, ಅತ್ತಾಳ ಪೂಜೆ, ಶ್ರೀ ಭೂತ ಬಲಿ ವಿಳಕ್ಕು, ಬೆಳಗ್ಗೆ–ಸಂಜೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಜೆಎಸ್‌ಎಸ್ ರಂಗೋತ್ಸವ–2022, ಜೆಎಸ್‌ಎಸ್ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ಹಲಗಲಿಯ ಬೇಡರು ನಾಟಕ ಪ್ರದರ್ಶನ, ರಚನೆ: ಕ್ಯಾತನಹಳ್ಳಿ ರಾಮಣ್ಣ, ನಿರ್ದೇಶನ: ಮಂಜುನಾಥ ಕಾಚಕ್ಕಿ, ಸಹ ನಿರ್ದೇಶನ : ಪ್ರಶಾಂತ್ ಬಿ. ಹೆಗ್ಗೋಡು, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 11.30 ರಿಂದ.

■ **ಮೈಸೂರು ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ, ಆರೋಗ್ಯ ಭಾರತಿ, ಮೈಸೂರು :** ಧನ್ವಂತರಿ ಜಯಂತಿ ಪ್ರಯುಕ್ತ ಸ್ವಾಸ್ಥ್ಯಮಿತ್ರ ಪ್ರಶಸ್ತಿ ಪ್ರದಾನ ಸಮರಂಭ, ಸಾನ್ನಿಧ್ಯ : ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದಜೀ ಸ್ವಾಮೀಜಿ, ಅಧ್ಯಕ್ಷತೆ : ಆಯುರ್ವೇದ ವೈದ್ಯ ಸಂಘದ ಅಧ್ಯಕ್ಷ ಡಾ.ಬಿ.ಗುರು ಬಸವರಾಜ, ಮುಖ್ಯ ಅತಿಥಿಗಳು : ಮೈಸೂರು ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಗಜಾನನ ಹೆಗಡೆ, ಸ್ಥಳ: ಮೈಸೂರು ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ, ಮಧ್ಯಾಹ್ನ 3ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಕರ್ನಾಟಕ ರಾಜ್ಯೋತ್ಸವ ಆಚರಣೆ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಪ್ರಧಾನ ಭಾಷಣ : ಪ್ರಾಧ್ಯಾಪಕ ಡಾ. ಎ.ಆರ್. ಮದನ್ ಕುಮಾರ್, ಮುಖ್ಯ ಅತಿಥಿಗಳು : ಸಂಘದ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ :** ಹಿರಿಯ ಸಮಾಜವಾದಿ ಸ್ವಾತಂತ್ರ್ಯ ಹೋರಾಟಗಾರ ಶಾಂತವೇರಿ ಗೋಪಾಲಗೌಡ ಶತಮಾನೋತ್ಸವ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಕುವೆಂಪು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದಗೌಡ, ಪುಷ್ಪಾರ್ಚನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪುರಸ್ಕೃತರ ಕುರಿತು : ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ಮುಖ್ಯ ಅತಿಥಿಗಳು : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಸ್ಥಳ: ಶ್ರೀ ನಟರಾಜ ಸಭಾ ಭವನ, ಶಂಕರ ಮಠದ ರಸ್ತೆ, ಬೆಳಗ್ಗೆ 11ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ಕೃಷ್ಣ ಜನಮನ ತಂಡದಿಂದ 'ಯಾತ್ರೆ' ನಾಟಕ ಪ್ರದರ್ಶನ, ಚಾಲನೆ : ಚಿಂತಕ ನಾ. ದಿವಾಕರ್, ಮುಖ್ಯ ಅತಿಥಿಗಳು : ಸಮಾಜವಾದಿ ಎಂ.ಎಫ್. ಕಲೀಮ್, ಚಿಂತಕಿ ದಿನಮಣಿ ಬಿ.ಎಸ್., ಪ್ರಸಾಧನ : ನಾರಾಯಣ ಶೆಟ್ಟಿ ಕಿಕ್ಕೇರಿ, ಸಹ ನಿರ್ದೇಶನ : ಡಾ.ಬಿ.ಎಸ್. ದಿನಮಣಿ, ಸ್ಥಳ: ಕಲಾಮಂದಿರದ ಕಿರುರಂಗ ಮಂದಿರ, ಸಂಜೆ 6.30ಕ್ಕೆ.

ಎರಡು ದಿನಗಳ ದೃಷ್ಟಿ ವಿಕಲಚೇತನರ ರಾಜ್ಯಮಟ್ಟದ ಚೆಸ್ ಸ್ಪರ್ಧೆ ಸಮಾರೋಪ



ಮೈಸೂರು, ನ.22(ಜಿಎ)– ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ, ಕರ್ನಾಟಕ ರಾಜ್ಯ ದೃಷ್ಟಿ ವಿಕಲಚೇತನರ ಚೆಸ್ ಅಸೋಸಿಯೇಷನ್ ಹಾಗೂ ಲರ್ನಸ್ ಚೆಸ್ ಕ್ಲಬ್ ವತಿಯಿಂದ ದೃಷ್ಟಿ ವಿಕಲಚೇತನರಿಗಾಗಿ ಆಯೋಜಿಸಿದ್ದ ಎರಡು ದಿನದ ರಾಜ್ಯಮಟ್ಟದ ಚೆಸ್ ಚಾಂಪಿಯನ್‌ಶಿಪ್ ಮಂಗಳವಾರ ಸಮಾರೋಪಗೊಂಡಿತು.

ಮೈಸೂರಿನ ವಿನಾಯಕನಗರದ ಶ್ರೀ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಕಳೆದ ಎರಡು ದಿನ ನಡೆದ ರಾಜ್ಯಮಟ್ಟದ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಬೆಂಗಳೂರು, ಮೈಸೂರು, ವಿಜಯಪುರ, ಶಿವಮೊಗ್ಗ, ರಾಯಚೂರು, ಬೆಳಗಾವಿ, ಧಾರವಾಡ, ಕೊಪ್ಪಳ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಕಲ್ಬುರ್ಗಿ ಸೇರಿದಂತೆ 22ಕ್ಕೆ ಹೆಚ್ಚು ಜಿಲ್ಲೆಗಳಿಂದ ದೃಷ್ಟಿ ವಿಕಲಚೇತನರು ಭಾಗವಹಿಸಿ ವಿವಿಧ ವಿಭಾಗಗಳಲ್ಲಿ ನಗದು ಪ್ರಶಸ್ತಿ ಪಡೆದುಕೊಂಡರು.

ಮಹಿಳಾ ವಿಭಾಗದಲ್ಲಿ ರಾಯಚೂರಿನ ಶಾಹಿತ ಬೇಗಂ ಪ್ರಥಮ, ಬೆಂಗಳೂರಿನ ಕೆಎಸ್.ಶೀಲಾವತಿ ದ್ವಿತೀಯ, ಹಾಗೂ ರಾಯಚೂರಿನ ಶಿವಲಿಂಗಮ್ಮ ತೃತೀಯ ಸ್ಥಾನ ತಮ್ಮದಾಗಿಸಿಕೊಂಡರು. ಪುರುಷರ ವಿಭಾಗದಲ್ಲಿ ರಾಯಚೂರಿನ ಬಸವಲಿಂಗಪ್ಪ ಮರಡ್ಡಿ ಪ್ರಥಮ, ಕಲ್ಬುರ್ಗಿಯ ಕಿರಣ ಕುಮಾರ್ ಎ. ಸಂಪಗಿ ದ್ವಿತೀಯ ಹಾಗೂ ಧಾರವಾಡದ ಶಿವನಗೌಡ ತೃತೀಯ ಸ್ಥಾನ ಪಡೆದುಕೊಂಡರು.

ಜ್ಯೂನಿಯರ್ ವಿಭಾಗದಲ್ಲಿ ರಾಯಚೂರಿನ ಮಲ್ಲೇಶ್ ಪ್ರಥಮ, ವಿಜಯಪುರದ ಕುಶಾಲ್ ರಾಮಣ್ಣ ಜಗಲಿ ದ್ವಿತೀಯ ಹಾಗೂ ಬೀದರ್‌ನ ಪಿ.ಅವಿನಾಶ್ ತೃತೀಯ ಸ್ಥಾನ ತಮ್ಮದಾಗಿಸಿಕೊಂಡರು. ಇದೇ ವೇಳೆ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಪ್ರತಿಯೊಬ್ಬ ಸ್ಪರ್ಧಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ನಂತರ ಮೈಸೂರು–ಚಾಮರಾಜನಗರ ಒಕ್ಕಲಿಗ ಸಂಘದ ನಿರ್ದೇಶಕ ಹಾಗೂ ಮೈಸೂರು ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ. ರಾಮು ಮಾತನಾಡಿ, ಮೈಸೂರಿನಲ್ಲಿ ರಾಜ್ಯಮಟ್ಟದ ಚೆಸ್ ಪಂದ್ಯಾವಳಿ ಆಯೋಜಿಸಿರುವುದು ಸಂತಸವಾಗಿದೆ. ಅದರಲ್ಲೂ ದೃಷ್ಟಿ ವಿಕಲಚೇತನರಿಗಾಗಿ ಏರ್ಪಡಿಸಿರುವುದು ಶ್ಲಾಘನೀಯ ವಿಚಾರವಾಗಿದ್ದು, ಎಲ್ಲರೂ ಕ್ರಿಯಾಶೀಲರಾಗಿ ಪಾಲ್ಗೊಂಡಿದ್ದಾರೆ. ಇದೇ ರೀತಿ ಮುಂದಿನ ದಿನಗಳಲ್ಲಿ ಅಂತರರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಭಾಗವಹಿಸಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ ಚೆಸ್ ಪಟು, ತರಬೇತುದಾರ ಎಂ.ಪಿ. ಅಜಿತ್, ಕರ್ನಾಟಕ ರಾಜ್ಯ ದೃಷ್ಟಿ ವಿಕಲಚೇತನರ ಚೆಸ್ ಅಸೋಸಿಯೇಷನ್ ನಿರ್ದೇಶಕ ಕೆ.ಎಂ. ಶಶಿಧರ್, ಲರ್ನಸ್ ಸಂಸ್ಥಾಪಕ ಮನು ಕೀರ್ತಿ, ಮೈಸೂರು ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯ ಅಧ್ಯಕ್ಷೆ ಎಚ್.ಎಲ್. ಯಮುನಾ ಸೇರಿದಂತೆ ಮತ್ತಿತರರಿದ್ದರು.

ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ನೇತೃತ್ವದಲ್ಲಿ

ಸಿಂಗಾಪುರ್ ಅಧ್ಯಯನ ಪ್ರವಾಸ

ಮೈಸೂರು,ನ.22(ಪಿಎಂ)– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಸೇರಿದಂತೆ ಸರ್ಕಾರದ ಉನ್ನತ ಅಧಿಕಾರಿಗಳು ಮತ್ತು ಸಿಬ್ಬಂದಿ ತಂಡ ನ.23ರಿಂದ 27ರವರೆಗೆ ಸಿಂಗಾಪುರ್‌ಗೆ ಅಧ್ಯಯನ ಪ್ರವಾಸ ಕೈಗೊಂಡಿದೆ.

ಸಿಂಗಾಪುರ್ ದೇಶದ ಸ್ಯಾನಿಟೇಶನ್ ವ್ಯವಸ್ಥೆ ಹಾಗೂ ಅಲ್ಲಿನ ಕಾರ್ಮಿಕರ ಪ್ರಸ್ತುತ ಸ್ಥಿತಿಗತಿಗಳ ಕುರಿತು ಅಧ್ಯಯನ ನಡೆಸುವ ಉದ್ದೇಶದಿಂದ ಈ ಪ್ರವಾಸ ಕೈಗೊಳ್ಳಲಾಗುತ್ತಿದೆ. ಜೊತೆಗೆ ಸಿಂಗಾಪುರ್‌ನಲ್ಲಿ ಸಫಾಯಿ ಕರ್ಮಚಾರಿಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿ ಆಗಿರುವ ಬಗ್ಗೆ ಹಾಗೂ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಸ್ಮಾರ್ಟ್‌ಸಿಟಿ ಮತ್ತು ಸ್ವಚ್ಛತೆಗೆ ಹೆಸರುವಾಸಿಯಾಗಿರುವ ಸಂಬಂಧ ಅಧ್ಯಯನ ನಡೆಸಲು ಈ ಪ್ರವಾಸ ಹೊರಟಿದ್ದು, ಬಳಿಕ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಪ್ರವಾಸ ತಂಡ: ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ಪಿ.ವೆಂಟೇಶ್, ಅಧಿಕಾರಿಗಳಾದ ಜಿ.ಎಂ.ಗಂಗಾಧರ್, ಮಂಜುಶ್ರೀ, ಹೆಚ್.ಹೇಮಂತ್‌ಕುಮಾರ್, ಚಂದ್ರಕಲಾ, ರೇಣುಕಾ, ಪರಶುರಾಮ್ ಶಿನಲ್ಕರ್, ಬಿ.ಜಿ.ಪುರುಷೋತ್ತಮ್, ಸುವರ್ಣ ಬಾಗಿ, ಬಿ.ಎಸ್.ವಿಮಲಾ, ಡಿ.ಮಂಜುಳಾ, ಜಡಿಯಪ್ಪ ಗೆಡ್ಲಗಟ್ಟಿ, ಎನ್.ರಾಘವೇಂದ್ರ, ಕನ್ನಮೇಡಿ ಭೀಮಪ್ಪ ಓಬಳೇಶ್, ಬಿಬಿಎಂಪಿ ಪೌರಕಾರ್ಮಿಕ ಸುರೇಶ್, ಬಿಡಬ್ಲ್ಯೂಬಿಎಸ್‌ಎಸ್ ಸ್ವಚ್ಛತಾ ಸಿಬ್ಬಂದಿ ನರಸಿಂಹಮೂರ್ತಿ ಪ್ರವಾಸ ತಂಡದಲ್ಲಿದ್ದಾರೆ.

ಮೈಸೂರಲ್ಲಿ 3 ದಿನಗಳ ಜಿಲ್ಲಾ ಪೊಲೀಸ್ ಕ್ರೀಡಾಕೂಟಕ್ಕೆ ಚಾಲನೆ





ಮೈಸೂರು, ನ. 22(ಆರ್‌ಕೆ)– ಮೈಸೂರಿನ ಜ್ಯೋತಿನಗರದ ಡಿಎಆರ್ ಕವಾಯತು ಮೈದಾನದಲ್ಲಿ 3 ದಿನಗಳ ಜಿಲ್ಲಾ ಪೊಲೀಸ್ ಕ್ರೀಡಾಕೂಟವು ಇಂದಿನಿಂದ ಆರಂಭವಾಯಿತು.

ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಪಾರಿವಾಳ ಮತ್ತು ಬಲೂನ್‌ಗಳನ್ನು ಹಾರಿ ಬಿಡುವ ಮೂಲಕ ಕ್ರೀಡಾಕೂಟವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಕ್ರೀಡೆ, ವ್ಯಾಯಾಮ ಅತ್ಯವಶ್ಯವಾಗಿದ್ದು, ದಿನಕ್ಕೆ ಕನಿಷ್ಠ ಒಂದು ಗಂಟೆಯಾದರೂ ನಿಮಗಾಗಿ ಮೀಸಲಿಡಿ ಎಂದು ಪೊಲೀಸರಿಗೆ ಕಿವಿಮಾತು ಹೇಳಿದರು.

ನಿತ್ಯ ವ್ಯಾಯಾಮ ಮಾಡಿ ನಿಮ್ಮ ದೇಹವನ್ನು ಆರೋಗ್ಯವಾಗಿಟ್ಟುಕೊಳ್ಳಿ. ನನಗೆ ಪೊಲೀಸ್ ಪ್ರಿಯವಾದ ಇಲಾಖೆ ನಮ್ಮ ಪೋಷಕರು ಆರೋಗ್ಯ ಇಲಾಖೆಯಲ್ಲಿದ್ದರಿಂದ ಕ್ವಾರ್ಟರ್ಸ್‌ನಲ್ಲಿ ಬೆಳೆಯಬೇಕಾಯಿತು. ನನ್ನ ಸಹೋದರು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವುದರಿಂದ ನನಗೆ ಪೊಲೀಸ್ ಇಲಾಖೆ ಪ್ರಿಯವಾದದ್ದು ಎಂದ ಅವರು, ಆದರೆ ಕಂದಾಯ ಇಲಾಖೆನ್ನ ಮಾತೃ ಇಲಾಖೆಯಾಗಿದೆ ಎಂದು

ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುವವರು ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗಿರಬೇಕು. ಸದಾ ಒತ್ತಡದಿಂದ ಕರ್ತವ್ಯ ನಿರ್ವಹಿಸುವುದರಿಂದ ಕ್ರೀಡೆ, ವ್ಯಾಯಾಮವನ್ನು ನಿರಂತರ ಅಭ್ಯಾಸ ಮಾಡಿದಲ್ಲಿ ಒತ್ತಡ ಕಡಿಮೆಯಾಗಲಿದೆ. ನಿಮ್ಮ ಮನಸ್ಸು ಶಾಂತ ಚಿತ್ತದಿಂದಿದ್ದರೆ ಎಂತಹ ಕ್ಲಿಷ್ಟ ಪರಿಸ್ಥಿತಿಯನ್ನೂ ಸುಲಭವಾಗಿ ಎದುರಿಸಬಹುದು ಎಂದು ಪೂರ್ಣಿಮಾ ಇದೇ ವೇಳೆ ನುಡಿದರು.

ಎಸ್ಪಿ ಆರ್. ಚೇತನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಡಿಷನಲ್ ಎಸ್ಪಿ ಡಾ. ನಂದಿನಿ, ಡಿವೈಎಸ್ಪಿಗಳಾದ ಪೂರ್ಣಚಂದ್ರ ತೇಜಸ್ವಿ, ಗೋವಿಂದರಾಜು, ರವಿಪ್ರಸಾದ್, ಸುಮಿತ್ ಹಾಗೂ ಜಿಲ್ಲೆಯ ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳು, ಸಿಬ್ಬಂದಿ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದಾರೆ.

ರನ್ನಿಂಗ್, ಉದ್ದಜಿಗಿತ, ಎತ್ತರ ಜಿಗಿತ, ಶಾಟ್ ಪುಟ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, ಕಬಡ್ಡಿ, ಕ್ರಿಕೆಟ್, ವಾಲಿಬಾಲ್, ಫುಟ್ ಬಾಲ್, ಟಗ್ ಆಫ್ ವಾರ್, ರಿವಾಲ್ವರ್ ಶೂಟಿಂಗ್, ಬ್ಯಾಡ್ಮಿಂಟನ್, ಮ್ಯೂಸಿಕಲ್ ಛೇರ್, ಪಿಸ್ತೂಲ್ ಶೂಟಿಂಗ್, ಟೆನ್ನಿಸ್ ಬಾಲ್ ಸೇರಿದಂತೆ ಮೂರು ದಿನಗಳ ಕ್ರೀಡಾಕೂಟದಲ್ಲಿ ಹತ್ತು ಹಲವು ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ನವೆಂಬರ್ 24ರಂದು ಕ್ರೀಡಾಕೂಟದ ಸಮಾರೋಪ ಸಮಾರಂಭ ನಡೆಯಲಿದ್ದು, ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.



ಉತ್ತಮ ತಳಿ ಬಳಸಿ, ಅಧಿಕ ಇಳುವರಿ ಪಡೆಯಿರಿ

ಭತ್ತದ ಕ್ಷೇತ್ರೋತ್ಸವದಲ್ಲಿ ಕೃಷಿ ತಜ್ಞರ ಸಲಹೆ



ಮೈಸೂರು, ನ.22(ಎಂಕೆ)– ಮೈಸೂರಿನ ನಾಗನಹಳ್ಳಿ ಸಾವಯವ ಕೃಷಿ ಅಧ್ಯಯನ ಕೇಂದ್ರದಲ್ಲಿನ ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ಶಿಕ್ಷಣ ಘಟಕದ ವತಿಯಿಂದ ಟಿ.ನರಸೀಪುರ ತಾಲೂಕಿನ ಮುತ್ತತ್ತಿ ಗ್ರಾಮದಲ್ಲಿ ಭತ್ತದ ಬೆಳೆಯ ಕ್ಷೇತ್ರೋತ್ಸವ ಆಚರಿಸಲಾಯಿತು.

ಗ್ರಾಮದ ನಿವಾಸಿ ಕೃಷ್ಣ ಎಂಬುವರ ಜಮೀನಿನಲ್ಲಿ ಬೆಳೆದ ಕೆ.ಆರ್.ಹೆಚ್–4 ಮತ್ತು ಕೆ.ಎಂ.ಪಿ–220 ಭತ್ತದ ಬೆಳೆಯ ಕುರಿತು ಮಾಹಿತಿ ನೀಡಲಾಯಿತು. ವಿಸ್ತರಣಾ ಶಿಕ್ಷಣ ಘಟಕದ ಬೇಸಾಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಸಿ.ರಾಮಚಂದ್ರ ಮಾತನಾಡಿ, ವಿಸ್ತರಣಾ ಶಿಕ್ಷಣ ಘಟಕದ ವತಿಯಿಂದ ಹಮ್ಮಿಕೊಳ್ಳಲಾಗುವ ತರಬೇತಿ ಕಾರ್ಯಕ್ರಮಗಳಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ನೂತನ ತಾಂತ್ರಿಕತೆಗಳನ್ನು ಕೃಷಿಯಲ್ಲಿ ಅಳವಡಿಸಿಕೊಂಡು ಹೆಚ್ಚಿನ ಇಳುವರಿ ಪಡೆಯುವಂತೆ ತಿಳಿಸಿದರು.

ಕೃಷಿ ವಿಶ್ವವಿದ್ಯಾನಿಲಯದಿಂದ ಹೊಸದಾಗಿ ಅಭಿವೃದ್ಧಿಪಡಿಸಿರುವ ಕೆ.ಎಂ.ಪಿ–220 ತಳಿಯು(ಕೆಂಪು ಅಕ್ಕಿ) ಜ್ಯೋತಿ ತಳಿಗೆ ಪರ್ಯಾಯವಾಗಿದ್ದು, 125–130 ದಿನಗಳಲ್ಲಿ ಕಟಾವಿಗೆ ಬರುತ್ತದೆ ಹಾಗೂ ಎಕರೆಗೆ 24–26 ಕ್ವಿಂಟಾಲ್ ಕಾಳಿನ ಇಳುವರಿ ಪಡೆಯುವುದಲ್ಲದೆ ಬೆಂಕಿ ರೋಗಕ್ಕೆ ಸಾಧಾರಣ ನಿರೋಧಕತೆ ಹೊಂದಿದೆ. ಅಲ್ಲದೆ ಕೆ.ಆರ್. ಹೆಚ್–4 ಹೈಬ್ರಿಡ್ ಭತ್ತವು ಎಕರೆಗೆ 30–35 ಕ್ವಿಂಟಾಲ್ ಇಳುವರಿ ಬರುವುದರಿಂದ ರೈತರು ಉತ್ತಮವಾದ ತಳಿಗಳನ್ನು ಬಳಸಿ ಹೆಚ್ಚಿನ ಇಳುವರಿ ಪಡೆಯಬೇಕೆಂದು ಸಲಹೆ ನೀಡಿದರು.

ಮಣ್ಣು ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಹೆಚ್.ಆರ್.ಉಮೇಶ್ ಮಾತನಾಡಿ, ಯಾವುದೇ ಬೆಳೆಯು ಆರೋಗ್ಯವಾಗಿ ಬೆಳೆಯಲು ಸುಮಾರು ಬಗೆಯ 17 ಪೋಷಕಾಂಶಗಳು ಬೇಕು. ಭತ್ತದ ಬೆಳೆಯಲ್ಲಿ ಒಂದು ಎಕರೆಗೆ 4 ವಾರ ಮುಂಚೆ 3–4 ಟನ್ ಕೊಟ್ಟಿಗೆ ಗೊಬ್ಬರವನ್ನು ಬಳಕೆ ಮಾಡಬೇಕು. ಮಣ್ಣಿನ ಪೋಷಣೆಗೆ ಸಾವಯವ ಗೊಬ್ಬರದ ಬಳಕೆ ತುಂಬಾ ಮುಖ್ಯ. ಸಮತೋಲನ ಗೊಬ್ಬರ ಬಳಸುವುದರಿಂದ ಮಣ್ಣಿನ ಫಲವತ್ತತೆ ಹಾಗೂ ಹೆಚ್ಚಿನ ಇಳುವರಿಯನ್ನು ಪಡೆಯಬಹುದೆಂದು ತಿಳಿಸಿದರು.

ಸಸ್ಯ ಸಂರಕ್ಷಣೆ ಕುರಿತು ತಿಳಿಸಿದ ಪ್ರಾಧ್ಯಾಪಕ ಡಾ.ಸಿ.ಗೋವಿಂದರಾಜು, ಭತ್ತದ ಬೆಳೆಯ ಕುತ್ತಿಗೆ ಬೆಂಕಿರೋಗ ಬಂದರೆ, ಇಳುವರಿ ಕಡಿಮೆಯಾಗುತ್ತದೆ. ಎಲೆಗಳ ಮೇಲೆ ಇಬ್ಬನಿ ಇದ್ದರೆ ರೋಗಾಣು ಬೆಳೆಯುವಂತಹ ಅವಕಾಶವಿರುತ್ತದೆ. ಬೀಜೋಪಚಾರ ಮಾಡಿದರೆ ರೋಗಗಳನ್ನು ನಿರ್ವಹಣೆ ಮಾಡಬಹುದು. ಬೆಳೆ ಪರಿವರ್ತನೆ, ಹಸಿರೆಲೆ ಗೊಬ್ಬರದ ಬಳಕೆಯಿಂದ ಹೆಚ್ಚಿನ ಪೋಷಕಾಂಶಗಳು ಬೆಳೆಗೆ ದೊರೆಯುತ್ತವೆ ಎಂದರು. ಸಹಾಯಕ ಪ್ರಾಧ್ಯಾಪಕಿ ಡಾ.ಎ.ನಾಗಮಣಿ, ಗ್ರಾಪಂ ಸದಸ್ಯ ಕಂಬಯ್ಯ, ಗ್ರಾಮಸ್ಥರಾದ ಸತೀಶ್, ಎಸ್.ಸಂದೇಶ್, ಧರಣೇಶ್ ಮತ್ತಿತರರಿದ್ದರು.

ನ್ಯೂಜಿಲ್ಯಾಂಡ್ ವಿರುದ್ಧ ಟಿ20 ಸರಣಿ

ಮಳೆಯಿಂದಾಗಿ 3ನೇ ಪಂದ್ಯ ರದ್ದು; ಸರಣಿ ಭಾರತ ಕೈವಶ



ನೇಪಿಯರ್, ನ22– ಪ್ರವಾಸಿ ಭಾರತ ಮತ್ತು ನ್ಯೂಜಿಲ್ಯಾಂಡ್ ವಿರುದ್ಧದ 3ನೇ ಹಾಗೂ ಅಂತಿಮ ಟಿ20 ಪಂದ್ಯ ಮಳೆಯಿಂದ ರದ್ದಾಗಿದ್ದು ಭಾರತ ಸರಣಿಯನ್ನು ಕೈವಶ ಮಾಡಿಕೊಂಡಿದೆ.

ಮೊದಲು ಬ್ಯಾಟಿಂಗ್ ಮಾಡಿದ್ದ ನ್ಯೂಜಿಲೆಂಡ್ ತಂಡ 160 ರನ್‌ಗಳಿಗೆ ಆಲೌಟ್ ಆಗಿದ್ದು, ಭಾರತಕ್ಕೆ ಗೆಲ್ಲಲು 161 ರನ್‌ಗಳ ಸವಾಲಿನ ಗುರಿ ನೀಡಿತು. ಈ ರನ್ ಗುರಿ ಬೆನ್ನಟ್ಟಿದ ಭಾರತ 9 ಓವರ್‌ಗಳ ಮುಕ್ತಾಯಕ್ಕೆ 4 ವಿಕೆಟ್ ನಷ್ಟಕ್ಕೆ 75 ರನ್ ಪೇರಿಸಿದ್ದಾಗ ಮಳೆಯಿಂದ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು. ಮಳೆ ಮುಂದುವರೆದಿದ್ದರಿಂದ ಅಂತಿಮವಾಗಿ ಪಂದ್ಯವನ್ನು ರದ್ದು ಮಾಡಲಾಯಿತು.

ಡಕ್ವರ್ಥ್ ಲೂಯಿಸ್ ನಿಯಮದ ಪ್ರಕಾರ ಭಾರತಕ್ಕೆ 9 ಓವರ್‌ಗಳಲ್ಲಿ ಗೆಲ್ಲಲು 76 ರನ್‌ಗಳ ಗುರಿ ನೀಡಲಾಯಿತು. ಇನ್ನು ಭಾರತ 4 ವಿಕೆಟ್ ನಷ್ಟಕ್ಕೆ 75 ರನ್ ಗಳಿಸಿದ್ದರಿಂದ ಪಂದ್ಯ 'ಟೈ' ಎಂದು ಘೋಷಿಸಲಾಯಿತು. ಇನ್ನು ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ಮೊದಲ ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು. ಎರಡನೇ ಪಂದ್ಯದಲ್ಲಿ ಭಾರತ ಗೆಲುವು ಸಾಧಿಸಿದ್ದರಿಂದ ಸರಣಿ ಟೀಂ ಇಂಡಿಯಾದ ಕೈವಶವಾಗಿದೆ.

ಭಾರತದ ಪರ ಇಶಾನ್ ಕಿಶನ್ 10, ರಿಷಬ್ ಪಂತ್ 11, ಸೂರ್ಯಕುಮಾರ್ ಯಾದವ್ 13, ಹಾರ್ದಿಕ್ ಪಾಂಡ್ಯ ಅಜೇಯ 30 ಹಾಗೂ ದೀಪಕ್ ಹೂಡಾ ಅಜೇಯ 9 ರನ್ ಗಳಿಸಿದ್ದಾರೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡ ಡೆವಾನ್ ಕಾನ್ವೆ (59 ರನ್) ಮತ್ತು ಗ್ಲೇನ್ ಫಿಲಿಪ್ಸ್ (54) ಅಮೋಘ ಅರ್ಧಶತಕಗಳ ನೆರವಿನಿಂದ ಭಾರತಕ್ಕೆ ಸವಾಲಿನ ಗುರಿ ನೀಡಿತು. ಆರಂಭಿಕ ಆಘಾತದ ಹೊರತಾಗಿಯೂ ಡೆವಾನ್ ಕಾನ್ವೆ ಮತ್ತು ಗ್ಲೇನ್ ಫಿಲಿಪ್ಸ್ ನ್ಯೂಜಿಲೆಂಡ್‌ಗೆ ಉತ್ತಮ ಚೇತರಿಕೆ ನೀಡಿದರು. ಈ ಜೋಡಿ 3ನೇ ವಿಕೆಟ್ ಜೊತೆಯಾಟದಲ್ಲಿ ಬರೋಬ್ಬರಿ 86 ರನ್‌ಗಳ ಜೊತೆಯಾಟವಾಡಿತು.

ಆದರೆ ಈ ಹಂತದಲ್ಲಿ ದಾಳಿಗಿಳಿದ ಭಾರತದ ಮಹಮದ್ ಸಿರಾಜ್ ಕಿವೀಸ್ ಪಡೆಗೆ ಡಬಲ್ ಆಘಾತ ನೀಡಿದರು. ಅರ್ಧಶತಕ ಗಳಿಸಿ ಕ್ರೀಸ್‌ನಲ್ಲಿ ಭರ್ಜರಿ ಬ್ಯಾಟಿಂಗ್ ಮಾಡುತ್ತಿದ್ದ ಗ್ಲೇನ್ ಫಿಲಿಪ್ಸ್‌ರನ್ನು ಸಿರಾಜ್ ಪೆವಿಲಿಯನ್‌ಗೆ ಅಟ್ಟಿದರು. ಇವರ ಬೆನ್ನಲ್ಲೇ ಕಾನ್ವೆ ಅವರನ್ನೂ ಕೂಡ ಅರ್ಷ್‌ದೀಪ್ ಸಿಂಗ್ ಔಟ್ ಮಾಡಿದರು.

ಇವರಿಬ್ಬರು ಔಟಾದ ಬೆನ್ನಲ್ಲೇ ನ್ಯೂಜಿಲೆಂಡ್ ತಂಡ ದಿಢೀರ್ ಕುಸಿತಕಂಡಿತು. ಒಂದು ಹಂತದಲ್ಲಿ 130 ರನ್‌ಗಳಿಗೆ ಕೇವಲ 2 ವಿಕೆಟ್ ಕಳೆದುಕೊಂಡಿದ್ದ ಕಿವೀಸ್ ಪಡೆ ಮುಂದಿನ 30 ರನ್‌ಗಳ ಅಂತರದಲ್ಲಿ 8 ವಿಕೆಟ್ ಕಳೆದುಕೊಂಡಿತು. ಮಹಮದ್ ಸಿರಾಜ್ ಮತ್ತು ಅರ್ಷ್‌ದೀಪ್ ಸಿಂಗ್ ತಲಾ 4 ವಿಕೆಟ್ ಪಡೆದು ನ್ಯೂಜಿಲೆಂಡ್ ದಿಢೀಕ್ ಕುಸಿತಕ್ಕೆ ಕಾರಣರಾದರು. ಅಂತಿಮವಾಗಿ ಕಿವೀಸ್ ಪಡೆ 19.4 ಓವರ್‌ನಲ್ಲಿ 160 ರನ್ ಗಳಿಸಿ ಆಲೌಟ್ ಆಯಿತು.

ಲಡಾಖ್‌ನ ಕಾರ್ಗಿಲ್‌ನಲ್ಲಿ 4.2 ತೀವ್ರತೆಯ ಭೂಕಂಪ ಯಾವುದೇ ಪ್ರಾಣಹಾನಿ ಇಲ್ಲ

ಲೇಹ್/ಜಮ್ಮು, ನ.22– ಲಡಾಖ್‌ನ ಕಾರ್ಗಿಲ್ ಜಿಲ್ಲೆಯಲ್ಲಿ ಮಂಗಳವಾರ 4.3 ತೀವ್ರತೆಯ ಭೂಕಂಪ ಸಂಭವಿಸಿದೆ ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ತಿಳಿಸಿದೆ.

ಭೂಕಂಪನದಿಂದ ಯಾವುದೇ ಪ್ರಾಣಹಾನಿ ಅಥವಾ ಆಸ್ತಿಪಾಸ್ತಿ ಹಾನಿಯಾದ ಬಗ್ಗೆ ವರದಿಯಾಗಿಲ್ಲ.

ಇಂದು ಬೆಳಗ್ಗೆ 10.05ಕ್ಕೆ ಭೂಮಿ ಕಂಪಿಸಿದ್ದು, ಕಂಪನದ ಕೇಂದ್ರಬಿಂದು ಕಾರ್ಗಿಲ್‌ನಿಂದ ಉತ್ತರಕ್ಕೆ 191 ಕಿಲೋಮೀಟರ್ ದೂರದಲ್ಲಿದೆ.

ಯುವತಿ ಪತ್ತೆಗೆ ಮನವಿ

ಮೈಸೂರು, ನ22– ಮೈಸೂರಿನ 16 ವರ್ಷ 01 ತಿಂಗಳಿನ ವಿ.ಚೈತ್ರ ಎಂಬುವವರು 2022ರ ನ.21ರಂದು ಕಾಣೆಯಾದ ಬಗ್ಗೆ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಣೆಯಾಗಿರುವ ಯುವತಿ ಚಹರೆ: 16 ವರ್ಷ 01 ತಿಂಗಳಾಗಿದ್ದು, 5 ಅಡಿ 3 ಇಂಚು ಎತ್ತರ, ಎಣ್ಣೆಗೆಂಪು ಮೈಬಣ್ಣ, ಕನ್ನಡ ಹಾಗೂ ಇಂಗ್ಲೀಷ್ ಭಾಷೆ ಮಾತನಾಡುತ್ತಾರೆ, ಎಡ ಭಾಗದ ತುಟಿಯ ಕೆಳಗೆ ಒಂದು ಸಣ್ಣ ಕಾರೆ ಹರಳು ಹಾಗೂ ಎಡ ಹಸ್ತದ ಕಿರು ಬೆರಳಿನ ಕೆಳಗೆ ಸಣ್ಣ ಕಾರೆ ಹರಳು ಇರುತ್ತದೆ, ನೌಕೀಸ್ ಪಿ.ಯು.ಸಿ ಕಾಲೇಜಿನ ಪಿಂಕ್ ಕಲರ್ ಟಾಪ್, ಕಡು ನೀಲಿ ಬಣ್ಣದ ಪ್ಯಾಂಟ್ ಹಾಗೂ ಕೆಂಪು ಬಣ್ಣದ ಬ್ರೇಸರ್ ಹಾಗೂ ಒಂದು ಕಪ್ಪು ಹಾಗೂ ಬಿಳಿ ಗೆರೆಗಳುಳ್ಳ ಸ್ವೆಟರ್ ಧರಿಸಿರುತ್ತಾರೆ. ಕಾಣೆಯಾದ ಯುವತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಎಸ್ಪಿ ಅವರ ದೂ.ಸಂ: 2520040, ಮೈಸೂರು ನಗರ ನಿಸ್ತಂತು ಕೊಠಡಿ ದೂ.ಸಂ: 0821–2444800, ಹಾಗೂ ಮೈಸೂರು ಸೌತ್ ಪೊಲೀಸ್ ಠಾಣೆಯ ದೂ.ಸಂ:0821–2444955 ಸಂಪರ್ಕಿಸಿ ಎಂದು ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮೃತ್ ನಗರೋತ್ಥಾನ ಯೋಜನೆಯಡಿ ಅರ್ಜಿ ಆಹ್ವಾನ

ಮೈಸೂರು, ನ.22– ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ವತಿಯಿಂದ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕರಿಗೆ 2021–22 ಮತ್ತು 2022–23 ನೇ ಸಾಲಿನ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ, ಎಸ್‌ಎಫ್.ಸಿ ಮತ್ತು ಪಟ್ಟಣ ಪಂಚಾಯಿತಿ ನಿಧಿಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜನರ ಮತ್ತು ವಿಶೇಷಚೇತನರ ಕಲ್ಯಾಣಕ್ಕಾಗಿ ವಿವಿಧ ವೈಯಕ್ತಿಕ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಡಿಸೆಂಬರ್ 31 ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸುವವರು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ನಿವಾಸಿಯಾಗಿರಬೇಕು. ಅಗತ್ಯ ದಾಖಲೆಗಳೊಂದಿಗೆ ಕಚೇರಿಗೆ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಬಂಧಪಟ್ಟ ಸಿಬ್ಬಂದಿಯನ್ನು ಸಂಪರ್ಕಿಸಬಹುದು.

'ಟಿಪ್ಪು ನಿಜ ಕನಸುಗಳು' ಕೃತಿ ಮಾರಾಟ, ವಿತರಣೆಗೆ ತಾತ್ಕಾಲಿಕ ತಡೆ

ಮೈಸೂರು,ನ.22(ಪಿಎಂ)– ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿಸಿರುವ 'ಟಿಪ್ಪು ನಿಜ ಕನಸುಗಳು' ಕನ್ನಡ ನಾಟಕ ಕೃತಿ ಮಾರಾಟ ಮತ್ತು ವಿತರಣೆಗೆ (ಆನ್‌ಲೈನ್ ಒಳಗೊಂಡಂತೆ) ಕೋರ್ಟ್ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ. ಬೆಂಗಳೂರಿನ 14ನೇ ಎಸಿಸಿ ಮತ್ತು ಎಸ್‌ಜೆ ನ್ಯಾಯಾಲಯ (XIV ACC & SJ, B'luru.) ತಾತ್ಕಾಲಿಕ ತಡೆಯಾಜ್ಞೆ ನೀಡಿದೆ. ಅದಾಗ್ಯೂ ಪುಸ್ತಕದ ಕರ್ತೃ, ಪ್ರಕಾಶಕ ಮತ್ತು ಮುದ್ರಕರು ಈಗಾಗಲೇ ಮುದ್ರಿಸಿದ ಪುಸ್ತಕಗಳನ್ನು ಸಂಗ್ರಹಿಸಲು ಯಾವುದೇ ನಿರ್ಬಂಧವಿಲ್ಲ ಎಂದು ಕೋರ್ಟ್ ತನ್ನ ಆದೇಶದಲ್ಲಿ ಉಲ್ಲೇಖಿಸಿದೆ. ಈ ಮಧ್ಯೆ ತಮಗೆ ತಡೆ ಆದೇಶದ ಪ್ರತಿ ತಲುಪಿಲ್ಲ ಎಂದು ರಂಗಾಯಣ ನಿರ್ದೇಶಕರೂ ಆದ ಕೃತಿ ಕರ್ತೃ ಅಡ್ಡಂಡ ಸಿ. ಕಾರ್ಯಪ್ಪ ಸ್ಪಷ್ಟಪಡಿಸಿದ್ದಾರೆ.

ಯುವ ಜನರಿಗೆ ಪ್ರಥಮ ಚಿಕಿತ್ಸೆ ಸಂಬಂಧ ತರಬೇತಿ



ಮೈಸೂರು, ನ.22–ಎಂ.ಎಂ.ಕೆ. ಮತ್ತು ಎಸ್.ಡಿ.ಎಂ.ಮಹಿಳಾ ಮಹಾವಿದ್ಯಾಲಯದ ಯೂತ್ ರೆಡ್ ಕ್ರಾಸ್ ಘಟಕದ ವತಿಯಿಂದ ಯುವಜನರಿಗೆ ಪ್ರಥಮ ಚಿಕಿತ್ಸೆ ಮತ್ತು ಕಾರ್ಡಿಯೋ ಪಲ್ಮನರಿ ರಿಸಸಿಟೇಶನ್ ಕುರಿತ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ರವಿ ಮಹಾದೇವ ಸಂಸ್ಥಾಪಕರು ನೆಲೆ ಸಂಸ್ಥೆ ಮತ್ತು ಸಾಗರೋತ್ತರ ಕನ್ನಡಿಗರು ಯು.ಕೆ ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿ ಕಾರ್ಡಿಯೋಪಲ್ಮನರಿ ರಿಸ್ಯೂಸಿಯೇಶನ್ (Cardiopulmonary Resuscitation) ನ್ನು ಸಿಪಿಆರ್ ಎಂದು ಕರೆಯಲಾಗುತ್ತದೆ ವ್ಯಕ್ತಿಯು ಮೂರ್ಛೆ ಹೋದರೆ, ಹೃದಯ ಬಡಿತವು ನಿಂತುಹೋದರೆ ಅಥವಾ ನಾಡಿ ಮಿಡಿತ ನಿಂತಿದ್ದರೆ ಅಂತಹ ಪರಿಸ್ಥಿತಿಯಲ್ಲಿ ಸಿಪಿಆರ್ ನೀಡಲಾಗುತ್ತದೆ. ಇದು ರೋಗಿಗೆ ಉಸಿರಾಡಲು ನೆರವಾಗುತ್ತದೆ ಸಿಪಿಆರ್ ನೀಡುವಾಗ, ಇದು ಹೃದಯ ಮತ್ತು ಮೆದುಳಿನಲ್ಲಿ ರಕ್ತ ಪರಿಚಲನೆಗೆ ಸಹಾಯ ಮಾಡುತ್ತದೆ ಸಿಪಿಆರ್ ಸಹಾಯದಿಂದ, ಒಬ್ಬ ವ್ಯಕ್ತಿಗೆ ಹೊಸ ಜೀವ ಸಿಗಬಹುದು ಎಂದರು.

ಜಿಲ್ಲಾ ಆಸ್ಪತ್ರೆ ರಾಷ್ಟ್ರೀಯ ತರಬೇತುದಾರ ಮಂಜುನಾಥ ಮಾತನಾಡಿ, ಪ್ರಥಮ ಚಿಕಿತ್ಸೆಯ ಅರಿವು ಇಂದಿನ ಸಮಾಜದಲ್ಲಿ ಅನಿವಾರ್ಯವಾಗಿದ್ದು, ಮನುಷ್ಯನ ಜೀವ ಉಳಿಸುವ ಸಂಜೀವಿನಿಯಂತಹ ಚಿಕಿತ್ಸೆಯಾಗಿರುತ್ತದೆ. ಎಷ್ಟೋ ಬಾರಿ ಪ್ರಥಮ ಚಿಕಿತ್ಸೆಗಳು ಮನುಷ್ಯನ ಜೀವನದ ಅಳಿವು ಮತ್ತು ಉಳಿವನ್ನು ನಿರ್ಧರಿಸಿ ಬಿಡುತ್ತವೆ. ಇಂತಹ ಚಿಕಿತ್ಸೆಗಳ ಕುರಿತು ಎಲ್ಲರೂ ಕಡ್ಡಾಯವಾಗಿ ತಿಳಿದುಕೊಂಡಿರಬೇಕು.

ಪ್ರಥಮ ಚಿಕಿತ್ಸೆಯನ್ನು ಕೆಲವೊಮ್ಮೆ ಒಬ್ಬರು ಇನ್ನೊಬ್ಬರಿಗೆ ನೀಡಬಹುದು. ಇನ್ನೂ ಕೆಲವೊಮ್ಮೆ ನಾವೇ ಸ್ವತಃ ಮಾಡಿಕೊಳ್ಳಬಹುದು. ಭಾರತದಲ್ಲಿ ದಿನನಿತ್ಯ ಸಂಭವಿಸುವ ಮರಣದಲ್ಲಿ ಪ್ರಥಮ ಚಿಕಿತ್ಸೆಯ ಮೂಲಕ ಕಡಿಮೆಗೊಳಿಸಲು ಸಾಧ್ಯವಿದ್ದು ಇಂದಿನ ಯುವ ಜನರು ಪ್ರಥಮ ಚಿಕಿತ್ಸೆಯ ಮಾದರಿಗಳನ್ನು ತಿಳಿದುಕೊಳ್ಳಬೇಕು. ಹಾವು ಕಚ್ಚಿದಾಗ, ನೀರಿಗೆ ಬಿದ್ದಾಗ, ಬೆಂಕಿ ತಾಗಿದಾಗ ಮೊದಲಾದವುಗಳ ಜೊತೆಗೆ ರಾಷ್ಟ್ರೀಯ ವಿಪತ್ತುಗಳು ಸಂಭವಿಸಿದಾಗ ಪ್ರಥಮ ಚಿಕಿತ್ಸೆಯು ನೆರವಿಗೆ ಬರುತ್ತದೆ ಎಂದರು. ಕಾರ್ಯಕ್ರಮದಲ್ಲಿ ಕಾಲೇಜಿನ ಐ.ಕ್ಯೂ.ಎ.ಸಿ.ಸಂಚಾಲಕರಾದ ಪ್ರೊ.ಸುಕೃತ ವೈ.ಆರ್.ಸಿ.ಘಟಕದ ಸಂಯೋಜಕರಾದ ಪ್ರೊ.ಶಿವಬೀರಪ್ಪ ಉಪಸ್ಥಿತರಿದ್ದರು.

ಕಿತ್ತೂರು ರಾಣಿ ಚನ್ನಮ್ಮ ಸ್ಮಾರಕ ಸಮಿತಿಗೆ ಚುನಾವಣೆ: ಸುಪ್ರೀಂ ಸಮ್ಮತಿ

ನವದೆಹಲಿ, ನ.22– ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿರುವ ಕಿತ್ತೂರು ರಾಣಿ ಚನ್ನಮ್ಮ ಸ್ಮಾರಕ ಸಮಿತಿಯ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಸುಪ್ರೀಂಕೋರ್ಟ್ ಮಂಗಳವಾರ ಸಮ್ಮತಿಸಿದೆ. ಚುನಾವಣೆ ನಡೆಸುವುದಕ್ಕೆ ತಡೆ ನೀಡಿದ್ದ ಹೈಕೋರ್ಟ್‌ಆದೇಶ ಪ್ರಶ್ನಿಸಿ ಸಮಿತಿಯ ಸದಸ್ಯ ಡಿ.ಬಿ.ಇನಾಂದಾರ್‌ಅವರು ವಿಶೇಷ ಅನುಜ್ಞಾ ಅರ್ಜಿ ಸಲ್ಲಿಸಿದ್ದರು. ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್‌ಮತ್ತು ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಇದರ ವಿಚಾರಣೆ ನಡೆಸಿತು. ಸಮಿತಿಯ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಆಡಳಿತ ಮಂಡಳಿ ಸದಸ್ಯರ ಆಯ್ಕೆಗೆ ಚುನಾವಣೆ ನಡೆಸಲು ಹೈಕೋರ್ಟ್‌ತಡೆ ನೀಡಿರುವುದನ್ನು ಅರ್ಜಿದಾರರ ಪರ ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು. ಅವರ ವಾದ ಆಲಿಸಿದ ನ್ಯಾಯಪೀಠ ಇದೇ 27ರಂದು ಚುನಾವಣೆ ನಡೆಸುವಂತೆ ಆದೇಶಿಸಿತು.

ಮೈಸೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಸಿಎಆರ್ ತಂಡ ಚಾಂಪಿಯನ್

ಮೈಸೂರು, ನ.22(ಎಂಕೆ)– ಮೈಸೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟ–2022ರಲ್ಲಿ ಸಿಎಆರ್(ನಗರ ಸಶಸ್ತ್ರ ಮೀಸಲು ಪಡೆ) ತಂಡ ಚಾಂಪಿಯನ್ ಆಯಿತು.

ನಗರದ ಪೊಲೀಸ್ ಕವಾಯತು ಮೈದಾನ (ನಗರ ಸಶಸ್ತ್ರ ಮೀಸಲು ಪಡೆ)ದಲ್ಲಿ ಐದು ದಿನಗಳ ಕಾಲ ನಡೆದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಸಿಎಆರ್, ಎನ್.ಆರ್, ಕೆಆರ್, ದೇವರಾಜ, ಸಂಚಾರ ವಿಭಾಗ, ವಿಶೇಷ ಪಡೆ, ಮಹಿಳಾ ಪಡೆ ಹಾಗೂ ಕೆಎಆರ್‌ಪಿ ಮೌಂಟೆಡ್ ಪಡೆಗಳ ಪೈಕಿ ಸಿಎಆರ್ ತಂಡ ಸರ್ವೋತ್ತಮ ಪ್ರಶಸ್ತಿ ಪಡೆದುಕೊಂಡಿತು.

ಪುರುಷರ ವಿಭಾಗದಲ್ಲಿ ಸತತ 6ನೇ ಬಾರಿ ಸಿಎಆರ್ ವಿಭಾಗದ ವಿಜಯ್‌ಶಂಕರ್ (ಎಪಿಸಿ) ಹಾಗೂ ಮಹಿಳಾ ವಿಭಾಗದಲ್ಲಿ ಹೆಬ್ಬಾಳ ಪೊಲೀಸ್ ಠಾಣೆಯ ಕೆ.ಪಿ.ಉಷಾ (ಮಪಿಸಿ) ಸರ್ವೋತ್ತಮ ಪ್ರಶಸ್ತಿಗೆ ಭಾಜನರಾದರು. ಪುರುಷರ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಸಿಎಆರ್ ವಿಭಾಗದ ವಿಜಯ್‌ಶಂಕರ್(ಎಪಿಸಿ) ಪ್ರಥಮ, ಕೆ.ಆರ್.ವಿಭಾಗದ ಮೈಲಾರಿ(ಸಿಪಿಸಿ) ದ್ವಿತೀಯ ಹಾಗೂ ದೇವರಾಜ ವಿಭಾಗದ ಪ್ರವೀಣ್(ಸಿಪಿಸಿ) ತೃತೀಯ ಬಹುಮಾನ ತಮ್ಮದಾಗಿಸಿಕೊಂಡರು.



ಮೈಸೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟ–2022ರಲ್ಲಿ ಚಾಂಪಿಯನ್ ಆದ ಸಿಎಆರ್ ತಂಡಕ್ಕೆ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಬಹುಮಾನ ವಿತರಣೆ ಮಾಡಿದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ ಹಾಗೂ ಸಿಎಆರ್ ಡಿಸಿಪಿ ಶಿವರಾಜು ಮತ್ತಿತರರಿದ್ದರು.

ಹಗ್ಗಜಗ್ಗಾಟ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಸಿಎಆರ್ ತಂಡ ಪ್ರಥಮ ಹಾಗೂ ಸಂಚಾರ ವಿಭಾಗ ದ್ವಿತೀಯ ಬಹುಮಾನ ಗೆದ್ದರೆ, ಮಹಿಳಾ ವಿಭಾಗದಲ್ಲಿ ದೇವರಾಜ ವಿಭಾಗ ಪ್ರಥಮ ಹಾಗೂ ಎನ್‌ಆರ್ ವಿಭಾಗದ ತಂಡ ದ್ವಿತೀಯ ಬಹುಮಾನ ಗೆದ್ದುಕೊಂಡರು. ವಾಲಿಬಾಲ್ ಮತ್ತು ಕಬಡ್ಡಿ ಸ್ಪರ್ಧೆಯಲ್ಲಿ ಸಿಎಆರ್ ತಂಡ ವಿನ್ನರ್ ಆಗಿ ಹೊರಹೊಮ್ಮಿದರೆ ವಿಶೇಷ ಪಡೆ ರನ್ನರ್‌ಅಪ್ ಆಯಿತು.

123 ಪೊಲೀಸ್ ಕುಟುಂಬಸ್ಥರಿಗೆ ಉದ್ಯೋಗ: ವಿಜೇತರಿಗೆ ಬಹುಮಾನ ವಿತರಿಸಿ ಸಮಾರೋಪ ಭಾಷಣ ಮಾಡಿದ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್, ನಾನು ಮೈಸೂರು ವಿಭಾಗಕ್ಕೆ ಪ್ರಾದೇಶಿಕ ಆಯುಕ್ತರಾಗಿ ಬಂದಾಗಿನಿಂದ ಇಲ್ಲಿಯವರೆಗೆ ಕೊರೊನಾ ಹಾಗೂ ಇನ್ನಿತರೆ ಕಾರಣಗಳಿಗೆ ಮೃತಪಟ್ಟ 123 ಮಂದಿ ಪೊಲೀಸರ ಕುಟುಂಬಸ್ಥರಿಗೆ ಉದ್ಯೋಗ ನೀಡಲಾಗಿದೆ ಉದ್ಯೋಗ ನೀಡಲು ವಿದ್ಯಾರ್ಹತೆ ಮುಖ್ಯವಾಗಿದ್ದು, ಡಿ–ದರ್ಜೆಯ ಹುದ್ದೆ ನೀಡುವಾಗ ಬೇಸರವಾಗುತ್ತದೆ. ಆದ್ದರಿಂದ ಪದವಿ ಪಡೆದುಕೊಳ್ಳುವುದು ಮುಖ್ಯವಾಗಿದೆ. ಪೊಲೀಸರ ಕುಟುಂಬಸ್ಥರು ಮನೆಯಲ್ಲೇ ಇದ್ದರೂ ಮುಕ್ತ ವಿವಿಯಲ್ಲಿ ಪದವಿ ಪಡೆದುಕೊಳ್ಳಬಹುದಾಗಿದೆ ಎಂದು ಸಲಹೆ ನೀಡಿದರು.

ಪೊಲೀಸ್ ಕ್ರೀಡಾಕೂಟ ಸದಾ ಒತ್ತಡದಲ್ಲಿಯೇ ಇರುವ ಪೊಲೀಸರು ಎರಡ್ಮೂರು ದಿನಗಳ ಕಾಲ ಸಂತಸದಲ್ಲಿ ಕಳೆಯಲು ಅವಕಾಶ ನೀಡುತ್ತಿದೆ. ಇದುವರೆಗೂ 5ಕ್ಕೂ ಹೆಚ್ಚು ಪೊಲೀಸರ ಕ್ರೀಡಾಕೂಟದ ವೇದಿಕೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ರಿಲ್ಯಾಕ್ಸ್ ಮೂಡ್‌ನಲ್ಲಿರುವ ಪೊಲೀಸರನ್ನು ನೋಡುವುದೇ ವಿಶೇಷವಲ್ಲದೆ ಕ್ರೀಡಾಕೂಟದಲ್ಲಿ ಭಾಗವಹಿಸಿದ ಎಲ್ಲರಿಗೂ ಅಭಿನಂದನೆ ತಿಳಿಸಿದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ ಹಾಗೂ ಸಿಎಆರ್ ಡಿಸಿಪಿ ಶಿವರಾಜು ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ರೋಗಿ : ನನ್ನನ್ನು ಚುರುಕಾಗಿಸುವಂತಹ, ಒರಟಾಗಿಸುವಂತಹ ಕೋಪಿಷ್ಟನನ್ನಾಗಿಸುವ ಯಾವುದಾದರೂ ಔಷಧಿ ಇದೆಯೇ?'

ಡಾಕ್ಟರ್ : ಅದಕ್ಕೆ ಔಷಧಿಯೇನೂ ಬೇಕಾಗಿಲ್ಲ. ಆಗಾಗ ನನ್ನ ಬಿಲ್ ನೋಡ್ತಾ ಇರಿ

ಮೈಸೂರು ಮಿತ್ರ

ಬುಧವಾರ, 23 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಶ್ರೀಮಂತಿಕೆಯ ಸ್ವಾರ್ಥ ಎಂತಹದ್ದೆಂದರೆ ನಾವು ಹೆಚ್ಚು ಹೆಚ್ಚು ಸಂಪಾದಿಸುವುದಷ್ಟೇ ಅಲ್ಲ, ಇತರರು ಕಡಿಮೆ ಉಳ್ಳವರಾಗಿರುವಂತೆಯೂ ಯತ್ನಿಸುವುದು. –ಜಾನ್‌ರಸ್ಕಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಸಿದ್ದಾಗ ಹಬ್ಬ ಮಾಡು

ನಿಮ್ಮ ಪತ್ರಗಳು

ಗೋಮೂತ್ರದಿಂದ ಟ್ಯಾಂಕ್ ಶುದ್ಧೀಕರಣ ಘಟನೆ ಹೇಯಕೃತ್ಯ

ಮಾನ್ಯರೆ,

ಚಾಮರಾಜನಗರ ತಾಲೂಕು ಹೆಗ್ಗೊಠಾರ ಗ್ರಾಮದಲ್ಲಿ ದಲಿತ ಮಹಿಳೆಯೊಬ್ಬರು ತೊಂಬೆ ನಲ್ಲಿ ನೀರು ಕುಡಿದರೆಂಬ ಕಾರಣಕ್ಕೆ ಆ ಟ್ಯಾಂಕರ್‌ನಲ್ಲಿದ್ದ ನೀರನ್ನು ಸಂಪೂರ್ಣ ಹೊರಕ್ಕೆ ಚೆಲ್ಲಿ ಅನಂತರ ಗೋ ಮೂತ್ರದಿಂದ ಶುದ್ಧೀಕರಿಸಿರುವ ಘಟನೆ ಸಮ ಸಮಾಜವನ್ನು ನಾಚಿಸುವಂತೆ ಮಾಡಿದೆ.

ಲಿಂಗಾಯಿತರ ಬೀದಿಯಲ್ಲಿ ಈ ಘಟನೆ ನಡೆದಿದ್ದು ವಿಶ್ವ ಗುರು ಬಸವಣ್ಣನವರ ಅನುಯಾಯಿಗಳು ಅವರ ಆದರ್ಶಗಳನ್ನು ಚಾಚೂ ತಪ್ಪದೇ ಪಾಲಿಸುವುದು ಆದ್ಯ ಕರ್ತವ್ಯ ಎಂದರಿತಿರುವ ಈ ಸಮುದಾಯದವರು ಒಳಗೊಂದು ಹೊರಗೊಂದು ಎಂಬ ತಾರತಮ್ಯದ ಮನೋಭಾವನೆ ಉಳಿಸಿಕೊಂಡು ಸಾಧಿಸುವುದಾದರೂ ಏನು.? ಅರಿವೇ ಗುರು, ಕಾಯಕವೇ ಕೈಲಾಸ ಎಂಬುದು ಲಿಂಗಾಯಿತ ಧರ್ಮದ ಜನ ಬಳಕೆಯಲ್ಲಿನ ಪ್ರಚಲಿತ ಘೋಷವಾಕ್ಯ. ಲಿಂಗಾಯಿತ ಧರ್ಮದಲ್ಲಿ ನಡೆ ನುಡಿಯೇ ಸಿದ್ಧಾಂತವಾಗುತ್ತದೆ.

ಸಕಲರಿಗೂ ಒಳಿತನ್ನೇ ಬಯಸುತ್ತಾ ದಯವೇ ಧರ್ಮದ ಮೂಲವಾಗಬೇಕು ಹೊರತು ನವ ಬ್ರಾಹ್ಮಣ್ಯ ಹೊದಿಕೆ ಧರಿಸಿ ಮೇಲು ಕೀಳು ಎಂದು ಘೋಷಣೆ ಮಾಡಬಾರದು ಅಲ್ಲವೇ. ಮನುಷ್ಯ ತನ್ನ ಉದಾತ್ತ ಚಿಂತನೆಗಳು, ಆದರ್ಶನೀಯ ಮೌಲ್ಯಗಳಿಂದ ಇನ್ನಷ್ಟು ಎತ್ತರಕ್ಕೆ ಕೀರ್ತಿಯನ್ನು ಗಳಿಸಿಕೊಳ್ಳುತ್ತಾನೆ ಹೊರತು ತಾರತಮ್ಯದ ಕೀಳು ಗುಣಗಳಿಂದಲ್ಲ. ಅಂಗೈನಲ್ಲಿ ಆಕಾಶ ನೋಡುವ ವಿಜ್ಞಾನ–ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲೂ ಇಂತಹ ಘಟನೆ ತಲೆತಗ್ಗಿಸುವಂತಹದ್ದು. ರಾಜ್ಯದಲ್ಲಿ ಪದೇ ಪದೆ ನಡೆಯುವ ಇಂತಹ ಕೀಳು ಮಟ್ಟದ ಘಟನೆಗಳಿಂದ ಅಸ್ಪೃಶ್ಯತೆ ನಿವಾರಣೆಯಾಗದೆ ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆ ಮತ್ತು ಜಾಗತಿಕವಾಗಿ ದೇಶದ ಮಾನವು ಬಿಕರಿಯಾಗುತ್ತದೆ ಅಲ್ಲವೇ. ಪ್ರಕರಣ ಸಂಬಂಧ ಈಗಾಗಲೇ ತಪ್ಪಿತಸ್ಥರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು ಸರಿಯಷ್ಟೇ. ಸಮಾಜದ ಸ್ವಾಸ್ಥ್ಯ ಹದಗೆಡಿಸಿ ಭಂಗ ತಂದಿರುವ ಇವರುಗಳಿಗೆ ಕಠಿಣ ಕಾನೂನಿನ ಶಿಕ್ಷೆಯಾಗಬೇಕು. ಜೊತೆಗೆ "ಯಾರೇ ಒಬ್ಬ ಮನುಷ್ಯ ತನ್ನ ವ್ಯಕ್ತಿತ್ವ ಹಾಗೂ ಪ್ರತಿಭೆಯಿಂದ ಶ್ರೇಷ್ಠನಾಗುತ್ತಾನೆ ವಿನಃ ತನ್ನ ಜಾತಿಯಿಂದಲ್ಲ." ಅಂಬೇಡ್ಕರ್ ಹೇಳಿದ ಈ ಮಾತುಗಳನ್ನು ಹೃದಯ ವೈಶಾಲ್ಯದ ಮಾನವೀಯತೆಯ ಪಾಠವನ್ನು ಸೌಹಾರ್ದ ಸಾಮರಸ್ಯ ಸಾರುವ ನಿಟ್ಟಿನಲ್ಲಿ ಇದೇ ಗ್ರಾಮದಲ್ಲಿ ಈ ಕೋಮಿನ ಬಂಧುಗಳಿಗೆ ದಲಿತ ಸಮುದಾಯದವರ ಜೊತೆ ಅರಿವು ಮೂಡಿಸುತ್ತ ತಿಳಿ ಹೇಳುವ ನೈತಿಕ ಹೊಣೆ ಸ್ಥಳೀಯ ಆಡಳಿತ, ಜನಪ್ರತಿನಿಧಿಗಳು, ಸರ್ಕಾರದ ಮೇಲಿದೆ.

– ಅನಿಲ್ ಕುಮಾರ್, ನಂಜನಗೂಡು.

ಚಿಂತಕರೆ, ಪ್ರಗತಿಪರರೆ, ಬುದ್ಧಿಜೀವಿಗಳೇ ನೀವು ಏಕೆ ಹೀಗೆ?

ಮಾನ್ಯರೆ,

ಇತ್ತೀಚೆಗೆ ನಡೆದ 'ಸಿದ್ದರಾಮಯ್ಯ–75' ಕೃತಿ ಬಿಡುಗಡೆ ಸಮಾರಂಭದಲ್ಲಿ ಚಿಂತಕ ಪ. ಮಲ್ಲೇಶ್‌ರವರು ತಮ್ಮ ಮಾತಿನಲ್ಲಿ ಯಾವ ಕಾರಣಕ್ಕೂ ಬ್ರಾಹ್ಮಣರನ್ನು, ಬ್ರಾಹ್ಮಣಿಕೆಯನ್ನು ನಂಬಬೇಡಿ. ಈ ದೇಶವನ್ನು ವೇದಗಳು, ಉಪನಿಷತ್ತುಗಳು ಹಾಳು ಮಾಡಿವೆ ಎಂದು ಅಣಿಮುತ್ತುಗಳನ್ನು ಉದುರಿಸಿದ್ದಾರೆ.

ಗೌರವಾನ್ವಿತ ಪಿ. ಮಲ್ಲೇಶ್‌ರವರೇ ನೀವು ಹೋಗಿರುವುದು ನಮ್ಮ ಹೆಮ್ಮೆಯ ಮಾಜಿ ಮುಖ್ಯಮಂತ್ರಿ, ದಕ್ಷ ಆಡಳಿತಗಾರರೂ ಆಗಿದ್ದ ಸಿದ್ದರಾಮಯ್ಯನವರ ಕೃತಿ ಬಿಡುಗಡೆ ಮಾಡಲು ಅಲ್ಲವೇ, ಹಾಗಿದ್ದಲ್ಲಿ ಅಲ್ಲಿಗೆ ಸಂಬಂಧಪಟ್ಟಂತೆ ನಿಮ್ಮ ಅಣಿಮುತ್ತುಗಳು ಬರಬೇಕೇ ವಿನಃ ಎಲ್ಲಾ ಕಡೆ ಬ್ರಾಹ್ಮಣರನ್ನು ಏಕೆ ಸ್ವಾಮಿ ಎಳೆದುಕೊಂಡು ಬರುತ್ತೀರಿ. ಸರ್ವೇ ಜನಾಃ ಸುಖಿನೋ ಭವಂತು' ಎಂದು ತನ್ನ ಪಾಡಿಗೆ ತಾವಿರುವ ಬ್ರಾಹ್ಮಣ ವರ್ಗಕ್ಕೆ ಪದೇ ಪದೆ ಯಾಕೆ ಬೇಸರಿಸುವಂತೆ ಮಾತನಾಡುತ್ತೀರಿ. ಇತ್ತೀಚಿನ ಯಾವುದೇ ಪ್ರಕರಣದಲ್ಲಿ ಬ್ರಾಹ್ಮಣ ವರ್ಗ ಯಾವ ತಪ್ಪು ಮಾಡಿದೆ ಎಂದು ಒಂದೆರಡು ಉದಾಹರಣೆ ಕೊಡಿ. ಇತ್ತೀಚೆಗೆ ನಿಮಗೆ ಅಂದರೆ ಚಿಂತಕರಿಗೆ, ಬುದ್ಧಿಜೀವಿಗಳು ಅನಿಸಿಕೊಂಡವರಿಗೆ ಬ್ರಾಹ್ಮಣರನ್ನು ನೆನೆಸಿ ಒಂದೆರಡು ಮಾತಾಡದಿದ್ದರೆ ಇರಲಾಗುವುದಿಲ್ಲ ಎಂದು ಎನಿಸಿದೆ. ಬೇಡ ಸ್ವಾಮಿ ... ಸಾಕು ಮಾಡಿ... ಸಮಾಜವನ್ನು ಒಡೆಯಬೇಡಿ ಮಲ್ಲೇಶ್‌ರವರೇ. ಸಮಾಜವನ್ನು ಒಂದುಗೂಡಿಸುವ, ಬೆಸೆಯುವ ಕೆಲಸ ಮಾಡಿ.

–ಕೆ.ಗೋಪಾಲಕೃಷ್ಣ, ಜೆ.ಪಿ. ನಗರ, ಮೈಸೂರು.

ಯಾತ್ರೆಗಳ ಕಾಲವಿದು!?

ಮಾನ್ಯರೆ.

ಜನಮನದಲ್ಲಿ ಇಂದಿಗೂ ಯಾತ್ರೆ ಎಂದರೆ ಕಾಶಿ ಯಾತ್ರೆ, ಅಮರನಾಥ ಯಾತ್ರೆ, ಇನ್ನಿತರ ಧಾರ್ಮಿಕ ಸ್ಥಳಗಳ ಯಾತ್ರೆ, ಆಧ್ಯಾತ್ಮಿಕ ಸ್ಥಳಗಳಿಗೆ ಹೋಗುವುದೇ ಯಾತ್ರೆಗಳು ಎನ್ನುತ್ತಿರುವಾಗ ಇವುಗಳನ್ನು ಹಿಂದಿಕ್ಕಿ ಮುನ್ನುಗ್ಗಿ ಹೋಗುತ್ತಿರುವ ಪ್ರಸ್ತುತ ರಾಜಕೀಯ ಯಾತ್ರೆಗಳು–ಜೋಡೋ ಯಾತ್ರೆ, ಸಂಕಲ್ಪ ಯಾತ್ರೆ, ಪಂಚರತ್ನ ಯಾತ್ರೆಗಳ ಕಾಲದಲ್ಲಿ ಆಧ್ಯಾತ್ಮಿಕ ಯಾತ್ರೆಗಳನ್ನು ಜನರು ಮರೆಯದಿರಲಿ

– ಕಂಗಾಣಿ ಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು.


2023ರಲ್ಲಿ ಯಾವುದೇ ಪಕ್ಷ ಗೆದ್ದರೂ ದಲಿತರನ್ನು ಮುಖ್ಯಮಂತ್ರಿ ಮಾಡಿ

ಮಾನ್ಯರೆ,

ರಾಜ್ಯದಲ್ಲಿ ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಬಹುಮತದಿಂದ ಗೆದ್ದು ಯಾವ ಪಕ್ಷ ಅಧಿಕಾರಕ್ಕೆ ಬರುತ್ತೋ ಆ ಪಕ್ಷದವರು ದಲಿತರನ್ನು ಮುಖ್ಯಮಂತ್ರಿ ಮಾಡಿ. 75 ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಪ್ರಬಲ ಸಮುದಾಯಗಳು, ಹಿಂದುಳಿದ ವರ್ಗದವರು ಮುಖ್ಯಮಂತ್ರಿಯಾಗುತ್ತಾ ಬಂದಿದ್ದಾರೆ. ಆದರೆ ದಲಿತ ಸಮುದಾಯದವರು ಮುಖ್ಯಮಂತ್ರಿ ಆಗದಿರುವುದರಿಂದ ದಲಿತ ಸಮಾಜಕ್ಕೆ ಅನ್ಯಾಯವಾಗಿದೆ. ಏಳು ದಶಕಗಳಿಂದ ನಮ್ಮ ರಾಜ್ಯದಲ್ಲಿ ರಾಜಕೀಯ ಪಕ್ಷಗಳು ದಲಿತರಿಗೆ (ಸಿಎಂ) ಹುದ್ದೆ ನೀಡದೆ ಅನ್ಯಾಯ ಮಾಡುತ್ತಾ ಮೋಸ ಮಾಡಿವೆ. ದಲಿತರನ್ನು ಸಿಎಂ ಅಭ್ಯರ್ಥಿಯೆಂದು ಘೋಷಣೆ ಮಾಡಿದಾಗ ಕೆಲವರು ಸ್ವಾರ್ಥ ರಾಜಕಾರಣಕ್ಕಾಗಿ ಅವರು ನಿಲ್ಲುವ ಕ್ಷೇತ್ರಗಳಲ್ಲಿ ಸೋಲಿಸುವ ಮೂಲಕ ಸಿಎಂ ಹುದ್ದೆಯಿಂದ ವಂಚಿಸುತ್ತಾ ಬಂದಿದ್ದಾರೆ.

ದಲಿತ ರಾಜಕೀಯ ಹಿರಿಯ ಮುಖಂಡರುಗಳಾದ ಎನ್. ರಾಚಯ್ಯ, ಬಸವಲಿಂಗಪ್ಪ, ಡಿ. ಮಂಜುನಾಥ್, ಮಲ್ಲಿಕಾರ್ಜುನ ಖರ್ಗೆ, ರಮೇಶ್ ಜಿಗಜಿಣಗಿ, ರಂಗನಾಥ್, ಬಿ. ರಾಚಯ್ಯ, ವಿ. ಶ್ರೀನಿವಾಸ ಪ್ರಸಾದ್, ಕೆ.ಎಚ್. ಮುನಿಯಪ್ಪ, ಡಾ. ಪರಮೇಶ್ವರ್, ಎಚ್. ಆಂಜನೇಯ, ಡಾ. ಹೆಚ್.ಸಿ. ಮಹದೇವಪ್ಪ, ಗೋವಿಂದ ಕಾರಜೋಳ, ಎ. ನಾರಾಯಣ ಇನ್ನು ಮುಂತಾದವರು ದಲಿತ ರಾಜಕಾರಣದ ಪ್ರಮುಖ ರಾಜಕೀಯ ನಾಯಕರುಗಳು ಮುಖ್ಯಮಂತ್ರಿ ಹುದ್ದೆಯಿಂದ ವಂಚಿತರಾಗಿರುತ್ತಾರೆ. ಮುಂಬರುವ 2023ಕ್ಕೆ ಯಾವ ಪಕ್ಷ ಅಧಿಕಾರಕ್ಕೆ ಬರುತ್ತೋ ಆ ಪಕ್ಷದವರು ದಲಿತರನ್ನು ಮುಖ್ಯಮಂತ್ರಿ ಮಾಡಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಿರಿ. ದಲಿತರ ಕನಸನ್ನು ನನಸು ಮಾಡಿ ಎಂದು ಮನವಿ.

–ಹೆಚ್. ಮಣಿಕಂಠ, ಜಟ್ಟಿಹುಂಡಿ,ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಉಪನಿಷದ್ ಜ್ಞಾನಸಾಗರ

ನಮ್ಮ ದೇಶದ ಅತ್ಯಂತ ಪ್ರಾಚೀನ ಸಾಹಿತ್ಯವೆಂದರೆ ವೇದ ಸಾಹಿತ್ಯ. ಮನುಷ್ಯ ಕುಲವು ಯಾವಾಗ ಮಾತನಾಡಲು ಆರಂಭಿಸಿತೋ ತಿಳಿಯದು. ಆಗಲೇ ಜ್ಞಾನದ, ಅರಿವಿನ ಆರಂಭವೂ ಆಗಿರಬೇಕು. ಅದರ ಅಭಿವ್ಯಕ್ತಿಗಾಗಿ ಭಾಷೆಗಳು ನಿಯತ ಸ್ವರೂಪವನ್ನು ಪಡೆದಿರಬಹುದು. ಅವುಗಳಲ್ಲಿ ಸಾಹಿತ್ಯವೂ ಹುಟ್ಟಿರಬಹುದು. ಅದು ಉಳಿಯಲಿಲ್ಲವೇನೋ. ಯಾವುದನ್ನು ಉತ್ತಮ, ಮೌಲ್ಯವುಳ್ಳದ್ದು, ರಕ್ಷಿಸಬೇಕಾದದ್ದು ಎಂದು ಜನರು ಭಾವಿಸಿದರೋ ಅದನ್ನು ಮುಂದಿನ ಸಂತತಿಗಾಗಿ ಉಳಿಸಲು ಪ್ರಯತ್ನಗಳು ನಡೆದುವು. ಹಾಗೆ ಗುರು ಶಿಷ್ಯ ಪರಂಪರೆ ಆರಂಭ ಗೊಂಡಿತು. ಆಗ ಇನ್ನೂ ಲಿಪಿಯನ್ನು ಮಾನವರು ಕಂಡು ಕೊಂಡಿರಲಿಲ್ಲ. ಸ್ಮರಣೆಯಿಂದಲೇ ಜ್ಞಾನವನ್ನು ಉಳಿಸಬೇಕು ಎಂಬ ಉದ್ದೇಶದಿಂದ ಗುರು ಹೇಳಿದುದನ್ನು ಶಿಷ್ಯನು ಗಮನವಿಟ್ಟು ಕೇಳಿ ಮತ್ತೆ ಮತ್ತೆ ಅದನ್ನು ಹೇಳಿ ದೃಢಪಡಿಸಿಕೊಳ್ಳುವ ಸಂಪ್ರದಾಯ ಹುಟ್ಟಿತು. ಹೀಗೆ ಸಹಸ್ರಾರು ವರ್ಷಗಳಿಂದ ಉಳಿದು ಬಂದಿರುವುದೇ ವೇದ ಸಾಹಿತ್ಯ. ವೇದ ಎಂದರೆ ಜ್ಞಾನ. ಆ ಜ್ಞಾನವನ್ನು ಹೇಳುವ ಶಬ್ದರಾಶಿ, ಅದನ್ನು ದಾಖಲಿಸಿರುವ ಗ್ರಂಥ ಎಂದು ಅರ್ಥವನ್ನು ಹೇಳಬಹುದು. ಅಧ್ಯಯನದ ಅನುಕೂಲಕ್ಕಾಗಿ ನಾಲ್ಕು ವೇದಗಳನ್ನು ವ್ಯವಸ್ಥಿತವಾಗಿ ವಿಭಾಗಿಸಿದ್ದಾರೆ. ಋಕ್, ಯಜುಸ್, ಸಾಮ, ಅಥರ್ವ ಎಂದು ಅವುಗಳ ಹೆಸರುಗಳು ಒಂದೊಂದು ವೇದದಲ್ಲೂ ಸಂಹಿತಾ, ಬ್ರಾಹ್ಮಣ ಆರಣ್ಯಕ, ಉಪನಿಷತ್ ಎಂಬ ಭಾಗಗಳನ್ನೂ ಕಾಣಬಹುದು. ಹೀಗೆ ವೇದಗಳ ಕೊನೆಯ ಭಾಗವಾಗಿರುವುದು ಉಪನಿಷತ್ತು. ಈ ಕಾರಣದಿಂದ ಉಪನಿಷತ್ತಿಗೆ ವೇದಾಂತ ಎಂಬ ಹೆಸರೂ ಇದೆ. ಉಪನಿಷತ್ತುಗಳ ಆಧಾರದಿಂದ ಅಧ್ಯಾತ್ಮ ಜ್ಞಾನವನ್ನು ತಿಳಿಸಿಕೊಡುವ ಶಾಸ್ತ್ರವನ್ನು ವೇದಾಂತ ಶಾಸ್ತ್ರವೆಂದು ಕರೆಯುತ್ತಾರೆ.

ಉಪನಿಷತ್ತುಗಳ ಸಂಖ್ಯೆ : ವೇದಗಳು ನಾಲ್ಕೆ ಇದ್ದರೂ ಉಪನಿಷತ್ತು ಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಕಾರಣವೇನೆಂದರೆ ಒಂದೊಂದು ವೇದದಲ್ಲೂ ಅನೇಕ ಶಾಖೆಗಳಿದ್ದುವು. ಋಗ್ವೇದದಲ್ಲಿ ಇಪ್ಪತ್ತೊಂದು ಶಾಖೆಗಳು, ಯಜುರ್ವೇದದಲ್ಲಿ ನೂರೊಂದು ಶಾಖೆಗಳು, ಸಾಮವೇದದಲ್ಲಿ ಸಹಸ್ರ ಶಾಖೆಗಳು, ಅಥರ್ವ ವೇದದಲ್ಲಿ ಒಂಬತ್ತು ಶಾಖೆಗಳು ಇದ್ದುವೆಂದು ಪತಂಜಲಿ ಮಹರ್ಷಿಗಳು ವ್ಯಾಕರಣ ಮಹಾಭಾಷ್ಯದಲ್ಲಿ ಹೇಳಿದ್ದಾರೆ. ಅಂದರೆ ಒಟ್ಟು ಒಂದು ಸಾವಿರದ ಒಂದು ನೂರ ಮೂವತ್ತೊಂದು ವೇದ ಶಾಖೆಗಳು. ಆದ್ದರಿಂದ ಅನೇಕ ಉಪನಿಷತ್ತುಗಳು ಇದ್ದುವೆಂದು ಊಹಿಸಬಹುದು. ಮುಕ್ತಿಕೋಪನಿಷತ್ತಿನಲ್ಲಿ ಒಂದು ನೂರೆಂಟು ಉಪನಿಷತ್ತುಗಳನ್ನು ಹೆಸರಿಸಿ, ಅವುಗಳ ವೈಶಿಷ್ಟ್ಯವನ್ನು ಹೇಳಿದ್ದಾರೆ. ಈಗ ಮುದ್ರಿತವಾಗಿರುವ ಉಪನಿಷತ್ತುಗಳ ಸಂಖ್ಯೆ ಇನ್ನೂರಕ್ಕಿಂತ ಹೆಚ್ಚು ಎಂದು ಅಂದಾಜು.

ದಶೋಪನಿಷತ್ತುಗಳು

ಆದಿಶಂಕರಾಚಾರ್ಯರು ಮತ್ತು ಇತರ ಮತಾಚಾರ್ಯರು ಅವಿರೋಧವಾಗಿ ಪ್ರಮಾಣವೆಂದು ಪರಿಗ್ರಹಿಸಿರುವ ಹತ್ತು ಉಪನಿಷತ್ತುಗಳಿವೆ.

ಈಶಕೇನಕಠಪ್ರಶ್ನ ಮುಂಡಮಾಂಡೂಕ್ಯತಿತ್ತಿರಿ।
ಐತರೇಯಂ ಚ ಛಾಂದೋಗ್ಯ ಬೃಹದಾರಣ್ಯಕಂ ದಶ ॥

ಎಂಬ ಶ್ಲೋಕದಲ್ಲಿ ಈ ಹತ್ತು ಉಪನಿಷತ್ತುಗಳ ಹೆಸರುಗಳನ್ನೂ ಸೂಚಿಸಲಾಗಿದೆ. ಈಶಾವಾಸ್ಯೋಪನಿಷತ್ತು, ಕೇನೋಪ ನಿಷತ್ತು, ಕಠೋಪನಿಷತ್ತು, ಪ್ರಶ್ನೋಪನಿಷತ್ತು, ಮುಂಡಕೋಪನಿಷತ್ತು, ಮಾಂಡೂಕ್ಯೋಪನಿಷತ್ತು, ತೈತ್ತಿರೀಯೋಪನಿಷತ್ತು, ಐತರೇಯೋಪನಿಷತ್ತು, ಛಾಂದೋಗ್ಯೋಪನಿಷತ್ತು, ಬೃಹದಾರಣ್ಯಕೋಪನಿಷತ್ತು ಎಂಬ ಈ ಹತ್ತು ಉಪನಿಷತ್ತುಗಳು ಅತ್ಯಂತ ಮುಖ್ಯವಾದವು. ಇವುಗಳಲ್ಲದೆ ಆಯಾ ದೇವತೆಗಳಿಗೆ ಸಂಬಂಧಿಸಿದ ಮಹಾನಾರಾಯಣೋ ಪನಿಷತ್, ಗುಣಪತ್ಯಥರ್ವ ಶೀರ್ಷೋಪನಿಷತ್ ಮುಂತಾದ ಉಪನಿಷತ್ತುಗಳೂ ಇವೆ. ಎಲ್ಲ ಉಪನಿಷತ್ತುಗಳು ಜಗತ್ತು, ಜೀವಾತ್ಮ, ಪರಮಾತ್ಮ ಎಂಬ ಮೂರು ತತ್ತ್ವಗಳನ್ನು ವಿವರಿಸಲು ಹೊರಟಿವೆಯೆನ್ನಬಹುದು.

ಉಪನಿಷತ್ ಎಂಬ ಶಬ್ದ ಅರ್ಥ

ಉಪ ಎಂದರೆ ಹತ್ತಿರದಲ್ಲಿ, ನಿಷದ್ ಎಂದರೆ ಕುಳಿತಿರುವುದು ಎಂದು ಅರ್ಥ. ಗುರುವಿನ ಬಳಿ ಕುಳಿತುಕೊಂಡು ಶಿಷ್ಯನು ಕಲಿಯುವ ಅಧ್ಯಾತ್ಮ ವಿದ್ಯೆಯೇ ಉಪನಿಷತ್–ಎಂದು ಒಂದು ಅರ್ಥ.

ಷದ್ ಧಾತುವಿಗೆ ವಿಶಕರಣ (ನಾಶಪಡಿಸುವುದು ಎಂಬ ಅರ್ಥವೂ ಇದೆ.) ಜನನ ಮರಣಗಳ ಕ್ಲೇಶವು ತುಂಬಿರುವ ಸಂಸರಣವನ್ನು ನಾಶಪಡಿಸಲು ಯಾವ ವಿದ್ಯೆಯನ್ನು ಆಶ್ರಯಿಸಬೇಕೋ ಅದು ಉಪನಿಷತ್ತು– ಎಂದು ಇನ್ನೊಂದು ಅರ್ಥ.

ಷದ್‌ಧಾತುವಿಗೆ ಗತಿ, ಗಮನ ಎಂಬ ಅರ್ಥವೂ ಇರುವುದರಿಂದ, ಜೀವಾತ್ಮನನ್ನು ಪರಮಾತ್ಮನ ಕಡೆಗೆ ಒಯ್ಯುವ ವಿದ್ಯೆ ಉಪನಿಷತ್ ಎಂಬ ಅರ್ಥವನ್ನೂ ಹೇಳಬಹುದು. ವೇದಗಳ ಕೊನೆಯ ಭಾಗದಲ್ಲಿ ಈ ವಿಚಾರಗಳು ಅಡಕಗೊಂಡಿವೆ. ಅದನ್ನು ಉಪನಿಷತ್ತೆಂದು ಕರೆದಿರುವುದು ಯುಕ್ತವಾಗಿದೆ.

ಈಶಾವಾಸ್ಯೋಪನಿಷತ್ತು : ಇದು ಹದಿನೆಂಟು ಮಂತ್ರಗಳನ್ನು ಮಾತ್ರ ಹೊಂದಿರುವ ಚಿಕ್ಕ ಉಪನಿಷತ್ತು. ಇದರಲ್ಲಿ ಯಾವುದೇ ಕಥೆಯಾಗಲಿ, ಸಂವಾದವಾಗಲಿ ಇಲ್ಲ. ಉಪನಿಷತ್ತು ನೇರವಾಗಿ ಜಿಜ್ಞಾಸುವನ್ನು ಉದ್ದೇಶಿಸಿ ಉಪದೇಶವನ್ನು ನೀಡುತ್ತದೆ. ಇದರ ಆದಿಯಲ್ಲಿ ಬರುವ ಎರಡು ಮಂತ್ರಗಳು ಅತ್ಯಂತ ಮುಖ್ಯವಾಗಿವೆ.

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ ಧನಮ್ ॥

ಎಂಬುದು ಮೊದಲನೆಯ ಮಂತ್ರ. ಈ ಜಗತ್ತಿನಲ್ಲಿ ಚಲನಶೀಲ ವಾದುದು ಸಜೀವವೇ ಆಗಲಿ, ನಿರ್ಜೀವವೇ ಆಗಲಿ, ಅದೆಲ್ಲ ಭಗವಂತನಿಂದ ಆವರಿಸಲ್ಪಟ್ಟಿದೆ ಅಥವಾ ಅದೆಲ್ಲವೂ ಭಗವಂತನ ಆವಾಸಸ್ಥಾನ. ಆ ಕಾರಣದಿಂದ, ತ್ಯಾಗಪೂರ್ವಕವಾಗಿ ಅದನ್ನು ನೀನು ಅನುಭವಿಸು– ಎಂದೂ ದುರಾಸೆ ಪಡಬೇಡ. ಈ ಧನವೆಂಬುದು ಯಾರದೋ ಎಂದು ಇದರ ಭಾವಾರ್ಥ. ಈ ಒಂದು ಪದ್ಯವನ್ನು ಅರ್ಥ ಮಾಡಿಕೊಂಡು ಜೀವನದಲ್ಲಿ ಅದರ ಅರ್ಥವನ್ನು ಅಳವಡಿಸಿಕೊಂಡರೆ ಸಾಕು, ಬದುಕು ಸಾರ್ಥಕವಾಗುತ್ತದೆ. ನಾವು ಕಾಣುವುದೆಲ್ಲವೂ ಭಗವಂತನ ನೆಲೆ ಎಂಬ ಭಾವನೆ ನಮ್ಮಲ್ಲಿ ಮೂಡಬೇಕು. ಮನುಷ್ಯರು ಮಾತ್ರವಲ್ಲ, ಪ್ರಾಣಿ, ಪಕ್ಷಿ, ಪತಂಗ, ಕೀಟ, ಪರ್ವತ, ಕಾಡು, ನದಿ ಇವೆಲ್ಲ ಪರಮಾತ್ಮನು ವಾಸಿಸುವ ಮನೆ ಎಂಬುದು ಅರಿವಿಗೆ ಬರಬೇಕು. ಆಗ ಪ್ರಕೃತಿಯ ಮೇಲೆ ಮನುಷ್ಯ ಮಾಡುತ್ತಿರುವ ದಾಳಿ. ಅದರಿಂದ ಹಾವಳಿ ಕಡಿಮೆ ಆದೀತು.

ತ್ಯಾಗಪೂರ್ವಕವಾಗಿ ಅನುಭವಿಸು ಎಂಬ ಮಾತಿನಲ್ಲಿ ಎಷ್ಟು ಅರ್ಥವಿದೆ. ಇದು ನನ್ನದೇ, ನನ್ನೊಬ್ಬನದೇ ಎಂಬ ಭಾವನೆ ಬೇಡ. ಇದು ಎಲ್ಲರಿಗೂ ಸೇರಿದ್ದು, ಇತರರು ತೆಗೆದುಕೊಂಡ ಮೇಲೆ ಉಳಿದದ್ದು ಮಾತ್ರ ನನ್ನದು ಎಂಬ ಭಾವನೆಯನ್ನು ಇಲ್ಲಿ ಉಪನಿಷತ್ತು ಬಿತ್ತುತ್ತಿದೆ. ಇದನ್ನೇ ಸಂವಿಭಾಗ ಎನ್ನುವುದು.

"ನ ಕರ್ಮಣಾ ನ ಪ್ರಜಯಾ ಧನೇನ
ತ್ಯಾಗೇನೈಕೇ ಅಮೃತತ್ವ ಮಾನಶುಃ"

ಕೆಲಸಗಳಿಂದಲ್ಲ, ಮಕ್ಕಳಿಂದಲ್ಲ, ತ್ಯಾಗದಿಂದ ಅಮೃತತ್ವವನ್ನು ಪಡೆದರು ಎಂಬುದು ಇಲ್ಲಿ ಪ್ರತಿಫಲಿತವಾಗಿದೆ. ಮಾ ಗೃಧಃ ಎಂಬುದಂತೂ ಮಾನವರಿಗೆ ಇಂದು ಅನ್ವಯಿಸುವ ಸೂತ್ರ. ಅತಿ ಆಸೆ ಸಲ್ಲದು. ಲೋಭವೇ ಪತನಕ್ಕೆ ಮುಖ್ಯ ಕಾರಣ. ಲೋಭವೇ ನರಕದ ಹೆಬ್ಬಾಗಿಲು. ಅದನ್ನು ತ್ಯಜಿಸು ಎಂದು ಈ ಉಪನಿಷತ್ತು ಒತ್ತಿ ಹೇಳುತ್ತಿದೆ. ಕಸ್ಯ ಸ್ವಿದ್ ಧನಮ್? ಈ ಹಣವೆಲ್ಲ ಯಾರದು? ಯಾರದೂ ಅಲ್ಲ. ನಿನ್ನದೆಂದುಕೊಳ್ಳುವುದು ಭ್ರಾಂತಿ ಮಾತ್ರ. ಈಗ ನಮ್ಮದಾಗಿರು ವುದು, ನಾವೆಷ್ಟೇ ಭದ್ರತೆಯ ಕ್ರಮಗಳನ್ನು ಕೈಗೊಂಡರೂ, ನಾಳೆ ಇನ್ನು ಯಾರದೋ ಆಗಿ ಬಿಟ್ಟಿರುತ್ತದೆ. ಆದ್ದರಿಂದ ಅದರಲ್ಲಿ ಮಮತ್ವ ಬೇಡ. ಇದೆಲ್ಲ ಮೊದಲನೆಯ ಮಂತ್ರದ ಸಾರಾಂಶ. ಎರಡನೆಯ ಮಂತ್ರವನ್ನು ನೋಡೋಣ.

'ಕುರ್ವನ್ನೇ ವೇಹ ಕರ್ಮಾಣಿ ಜಿಜೀವಿಷೇತ್ ಶತ್ಂ ಸಮಾಃ।
ಏವಂ ತ್ವಯಿ ನಾನ್ಯಥೇತೋಸ್ತಿ ನ ಕರ್ಮ ಲಿಪ್ಯತೇ ನರೇ ॥

ಶತಂ ಸಮಾ ಜಿಜೀವಿಷೇತ್ ನೂರು ವರ್ಷ ಬದುಕಬೇಕು ಎಂಬ ಆಶೆಯಿರಲಿ. ಹತಾಶವಾದ ಬದುಕು ಬೇಡ. ಚೆನ್ನಾಗಿ ಬದುಕುವೆ, ಚೆನ್ನಾಗಿ ಬಾಳುವೆ ಎಂಬ ಬಯಕೆ ಇರಬೇಕು. ಹೇಡಿಗಳಾಗಿ ತಮ್ಮನ್ನೇ ಬಲಿಕೊಟ್ಟು ಕೊಳ್ಳುವ ಮೂರ್ಖರಾಗುವುದು ಬೇಡ. ಆದರೆ ಹೇಗೆ ಬದುಕಲು ಆಸೆ ಪಡಬೇಕು? 'ಕುರ್ವನ್ನೇವೇಹ ಕರ್ಮಾಣಿ: ಈ ಪ್ರಪಂಚದಲ್ಲಿ ನಿನಗೆ ವಹಿಸಿಕೊಳ್ಳಲಾಗುವ ಕಾಯಕಗಳನ್ನೆಲ್ಲ ಮಾಡುತ್ತಾ ನೂರು ವರ್ಷ ಬದುಕಿರಲು ನೀನು ಇಷ್ಟ ಪಡು – ಕರ್ಮಗಳ ಫಲ ಗಳನ್ನು ಅನುಭವಿಸಬೇಕು. ಆದರೆ ಮೇಲೆ ಹೇಳಿದಂತೆ ತ್ಯಾಗಪೂರ್ವಕ ವಾಗಿ ಕಾಯಕವನ್ನು ಮಾಡಿದರೆ ಕರ್ಮದ ಲೇಪವಿರುವುದಿಲ್ಲ. ಸ್ವಾರ್ಥಕ್ಕಾಗಿ ಕರ್ಮವನ್ನು ಮಾಡಿದಾಗ ಅದು ಬಂಧಕ. ಅದಿಲ್ಲದೆ ಜಗತ್ತಿನ ಪ್ರತಿಯೊಂದು ಅಣುವೂ ಭಗವಂತನ ನಿವಾಸವೆಂದು ಭಾವಿಸುವ ಜೀವಿಗೆ ಕರ್ಮಲೇಪವಿಲ್ಲ. ತನ್ನ ಕರ್ತವ್ಯವನ್ನು ಶಕ್ತ್ಯನುಸಾರವಾಗಿ ಮಾಡುವ, ಕೃಷ್ಣಾರ್ಪಣವೆಂಬ ಭಾವನೆಯನ್ನು ಹೊಂದಿರುವ ನರನಿಗೆ ಕರ್ಮವು ಬಂಧಕವಾಗು ವುದಿಲ್ಲ. ಇದು ಕರ್ಮಯೋಗದ ರಹಸ್ಯವೆಂದು ಉಪನಿಷತ್ತು ಸೂಚಿಸುತ್ತಿದೆ.

ಈ ಉಪನಿಷತ್ತು ಕೊಡುವ ಇನ್ನೊಂದು ಮುಖ್ಯ ಉಪದೇಶವೇನೆಂದರೆ, ಯಾವನೂ ತನ್ನನ್ನು ತಾನೇ ಕೊಂದುಕೊಳ್ಳಬಾರದು. ಹಾಗೆ ಆತ್ಮವನ್ನೇ ಕಳೆದುಕೊಳ್ಳುವ ಜನರು ಕತ್ತಲೆ ತುಂಬಿದ ಲೋಕಗಳಿಗೆ ಹೋಗಬೇಕಾಗಬಹುದು ಎಂಬ ಎಚ್ಚರಿಕೆಯನ್ನೂ ಈಶಾವಾಸ್ಯೋಪನಿಷತ್ತು ಕೊಡುತ್ತಿದೆ.

ಅಸುರ್ಯಾ ನಾಮ ತೇ ಲೋಕಾ ಅಂಧೇನ ತಮಸಾ ವೃತಾಃ ।
ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇಚಾತ್ಮ ಹನೋ ಜನಾಃ॥

ಅಂಧತಮಸ್ಸು ಎಂದರೆ ಕಣ್ಣನ್ನು ಕುರುಡು ಮಾಡುವ ಕಾರ್ಗತ್ತಲೆ. ಅದರಿಂದ ಆವರಿಸಲ್ಪಟ್ಟ ಲೋಕಗಳು ಅಸುರ್ಯಲೋಕಗಳು. ಅವುಗಳಿಗೆ ಹೋಗುವವರು ಆತ್ಮವನ್ನೇ ಕೊಂದುಕೊಳ್ಳುವ ಜನರು. ಸರಿಯಾದ ಕರ್ತವ್ಯಗಳನ್ನು ಮಾಡುವವರು ಬೆಳಕಿನ ಲೋಕಕ್ಕೆ ಹೋಗುವರು. ಬೆಳಕನ್ನು ಕಾಣಬೇಕೋ ಕತ್ತಲೆಯೊಳಗೆ ಧುಮಿಕಿ ಇಲ್ಲವಾಗಬೇಕೋ ಎಂದು ನಿರ್ಧರಿಸುವುದು ಪ್ರತಿಯೊಬ್ಬರ ಕೈಯಲ್ಲಿದೆ. ಆತ್ಮವನ್ನೇ ನಿರಾಕರಿಸುವವರನ್ನು ಉಪನಿಷತ್ತು ಆತ್ಮಹನಃ ಎಂದು ಕರೆದಿದೆ.

ಬದರಿಪ್ರಸಾದ್‌ಜಿ ಕಾಲೇಜಲ್ಲಿ ಗೀತಾ ಸಂಭ್ರಮ ಅಂತರ ಶಾಲಾ ಸ್ಪರ್ಧೆ

ಮೈಸೂರು, ನ.22– ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಗೀತಾ ಶಿಶು ಶಿಕ್ಷಣ ಸಂಘದ ಆಶ್ರಯದಲ್ಲಿರುವ ಬದರಿ ಪ್ರಸಾದ್‌ಜಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಅಂತರ ಶಾಲಾ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು 'ಗೀತಾ ಸಂಭ್ರಮ' ಶೀರ್ಷಿಕೆಯಡಿ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್ ಭಾಗವಹಿಸಿದ್ದರು.

ಅಧ್ಯಕ್ಷತೆಯನ್ನು ಸಂಘದ ಗೌರವ ಕಾರ್ಯದರ್ಶಿ ಶ್ರೀಮತಿ ವನಜ ಬಿ. ಪಂಡಿತ್ ವಹಿಸಿದ್ದರು.

ನಂತರ ನಾಗಮಲ್ಲೇಶ್ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಪ್ರೇರಣಾತ್ಮಕ ಸಲಹೆಗಳನ್ನು ನೀಡುತ್ತಾ, ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಹೊರ ಹಾಕುವಲ್ಲಿ ಇಂತಹ ವೇದಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ವಿದ್ಯಾರ್ಥಿಗಳು ಪಠ್ಯದ ಜೊತೆಜೊತೆಗೆ ಇತರೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಅವರ ವ್ಯಕ್ತಿತ್ವ ವಿಕಸನಕ್ಕೆ ಅನುವು ಮಾಡಿಕೊಡುತ್ತದೆ ಎಂದರು.

ಕಾರ್ಯಕ್ರಮಕ್ಕೆ ಮೈಸೂರು ನಗರದ ವಿವಿಧ ಶಾಲೆಗಳಿಂದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಥ್ರೋ ಬಾಲ್, ವಾಲಿ ಬಾಲ್, ಖೋ–ಖೋ, ಚೆಸ್, ಭರತ ನಾಟ್ಯ, ಒಗಟು ಪದ, ಪಿಪಿಟಿ ಮತ್ತು ಟ್ರೆಷರ್ ಹಂಟ್ ಹೀಗೆ 8 ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದರು.



ಬದರಿಪ್ರಸಾದ್‌ಜಿ ಪದವಿ ಪೂರ್ವ ಕಾಲೇಜಿನಲ್ಲಿ ಅಂತರ ಶಾಲಾ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು 'ಗೀತಾ ಸಂಭ್ರಮ' ಶೀರ್ಷಿಕೆಯಡಿ ಆಚರಿಸಲಾಯಿತು.

ಇದರ ಜೊತೆಗೆ ಗೀತಾ ಶಿಶು ಶಿಕ್ಷಣ ಸಂಘದ ಶಾಲಾ ಕಾಲೇಜು ವಿದ್ಯಾರ್ಥಿಗಳು ವಿವಿಧ ಒಳಾಂಗಣ ಕ್ರೀಡೆಗಳು, ವಿಭಿನ್ನ ತಿನಿಸುಗಳ ಹೊಂದಿರುವ 50 ಸ್ಟಾಲ್‌ಗಳೊಂದಿಗೆ ವಿವಿಧ ಶಾಲೆಗಳಿಂದ ಆಗಮಿಸಿದ ವಿದ್ಯಾರ್ಥಿಗಳಿಗೆ ಮನ ರಂಜನೆಯನ್ನೂ ನೀಡಿದರು.

ಕಾರ್ಯಕ್ರಮದಲ್ಲಿ ಸಂಘದ ಸದಸ್ಯರಾದ ಬಿ.ಕೆ. ನಟರಾಜ್, ಆಡಳಿತಾಧಿಕಾರಿಗಳಾದ ಶ್ರೀಮತಿ ಅನುಪಮ ಬಿ. ಪಂಡಿತ್, ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಶಾಹಿದಾ ಬಾನು, ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಹೇಮಲತಾ ಎಸ್.ಆರ್., ಶೈಕ್ಷಣಿಕ ಮುಖ್ಯಸ್ಥರಾದ ಶ್ರೀಮತಿ ಸುಮನ, ಕಾರ್ಯಕ್ರಮದ ಸಂಚಾಲಕಿ ಶ್ರೀಮತಿ ಸವಿತಾ ಎಂ.ಆರ್. ಹಾಗೂ ಕಾಲೇಜಿನ ಬೋಧಕ – ಬೋಧಕೇತರ ವರ್ಗದವರು ಹಾಜರಿದ್ದರು.

ನ.25ರಂದು ಮಾಂಸ ಮಾರಾಟ ನಿಷೇಧ

ಮೈಸೂರು,ನ.22–ನಗರದಲ್ಲಿ ಸೈಂಟ್ ಟಿ.ಎಲ್.ವಾಸವಾನಿ ಜಯಂತಿ ಪ್ರಯುಕ್ತ ನ.25ರಂದು ಪಾಲಿಕೆ ವ್ಯಾಪ್ತಿ ಪ್ರದೇಶದಲ್ಲಿ ಕುರಿ, ಮೇಕೆ, ಕೋಳಿ,ಹಂದಿ ಮಾಂಸ ಮತ್ತು ಮೀನು ವ್ಯಾಪಾರವನ್ನು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಿದ್ದು, ಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶ ನೀಡಲಾಗಿದೆ.

ನಾಳೆ ವಿಶೇಷ ಉಪನ್ಯಾಸ

ಮೈಸೂರು, ನ.22– ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ವಿಶ್ವ ಪರಂಪರೆ ಸಪ್ತಾಹದ ಅಂಗವಾಗಿ ನ.24ರಂದು ಬೆಳಗ್ಗೆ 10.30 ಗಂಟೆಗೆ ಪುರಾತತ್ವ ಇಲಾಖೆಯ ಸಭಾಂಗಣದಲ್ಲಿ ಮೂರ್ತ, ಅಮೂರ್ತ ಹಾಗೂ ನೈಸರ್ಗಿಕ ಪರಂಪರೆ ಕುರಿತು ನುರಿತ ತಜ್ಞರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜೆಎಸ್‌ಎಸ್ ಸಂಗೀತ ಸಮ್ಮೇಳನಾಧ್ಯಕ್ಷರಾಗಿ ವಿದ್ವಾನ್ ವಿ.ನಂಜುಂಡಸ್ವಾಮಿ ಆಯ್ಕೆ

ಮೈಸೂರಿನ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಪ್ರತಿ ವರ್ಷ ಡಿಸೆಂಬರ್ 2ರಿಂದ 6ರವರೆಗೆ ನಡೆಸುವ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 27ನೇ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಮೈಸೂರಿನ ಹಿರಿಯ ಸಂಗೀತ ಶಾಸ್ತ್ರಜ್ಞ, ವಿದ್ವಾನ್ ವಿ.ನಂಜುಂಡಸ್ವಾಮಿ ಆಯ್ಕೆಯಾಗಿದ್ದಾರೆ ಎಂದು ಸಂಗೀತ ಸಭಾದ ಟ್ರಸ್ಟಿ ಪ್ರೊ.ಕೆ.ರಾಮಮೂರ್ತಿರಾವ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರು ಪರಿಚಯ: ಸಂಗೀತ ಮನೆತನದ ಸುಬ್ಬಲಕ್ಷ್ಮಮ್ಮ ಹಾಗೂ ವಿಶ್ವೇಶ್ವರಯ್ಯ ದಂಪತಿಯ ಪುತ್ರರಾದ ಇವರು ತಮ್ಮ ಸೋದರ ಮಾವ ಪ್ರಖ್ಯಾತ ಸಂಗೀತಜ್ಞ ಗಾನಕಲಾಭೂಷಣ ಎಂ.ಚೆಲುವರಾಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ವೀಣಾವಾದನ, ಸಂಗೀತಶಾಸ್ತ್ರ ಹಾಗೂ ಶ್ರೀವಿದ್ಯೆಯನ್ನು ನಂಜುಂಡಸ್ವಾಮಿಯವರು ಕರಗತ ಮಾಡಿಕೊಂಡವರು. ಸುಮಾರು 50ಕ್ಕೂ ಮೇಲ್ಪಟ್ಟ ಇವರ ಅತ್ಯಾಕರ್ಷಕ ಹಾಗೂ ಪ್ರಭಾವಶಾಲಿ ಸಂಗೀತ ರೂಪಕಗಳು ಆಕಾಶವಾಣಿ, ದೂರದರ್ಶನ ಮಾತ್ರವಲ್ಲದೆ, ಪ್ರತಿಷ್ಠಿತ ಸಂಘ–ಸಂಸ್ಥೆಗಳ ವೇದಿಕೆಗಳಲ್ಲಿ ಪ್ರಸ್ತುತಪಡಿಸಲ್ಪಟ್ಟಿದ್ದು, ಇವರಿಗೆ 'ರೂಪಕಗಳ ರಾಜ' ಬಿರುದು ಸಂದಿದೆ.

ಇವರು ಬರೆದಿರುವ 'ಶ್ರೀಚಕ್ರ ದರ್ಶನ', 'ಕಂಪೋಸರ್ಸ್ ಆಫ್ ಕರ್ನಾಟಕ ಮ್ಯೂಸಿಕ್', 'ಸಂಗೀತ ಸಂಕಾಶ', 'ಸಂಗೀತ ನೃತ್ಯ ರಸಾಯನ', 'ಗಣೇಶ ನಮನ', 'ಯೋಗ ಶಿಕ್ಷಣ ದರ್ಪಣ' ಪ್ರಕಟವಾಗಿ ಜನ ಮನ್ನಣೆ ಗಳಿಸಿವೆ. ಅಲ್ಲದೆ 'ಈಸಬೇಕು ಇದ್ದು ಜಯಿಸಬೇಕು' ಎಂಬ ಶೀರ್ಷಿಕೆಯ 'ದಶರೂಪಕಗಳ ಗ್ರಂಥ' ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ 'ಟಿ.ಚೌಡಯ್ಯ ಪ್ರಶಸ್ತಿ'ಗೆ ಭಾಜನವಾಗಿದೆ.



ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರ್ ಜನ್ಮ ಶತಾಬ್ಧಿಯ ಸಂದರ್ಭದಲ್ಲಿ ಅವರ 94ರ ರಚನೆಗಳಿಗೆ ಇಂಗ್ಲೀಷ್ ಭಾಷೆಯಲ್ಲಿ ವ್ಯಾಖ್ಯಾನವಿರುವ 468 ಪುಟಗಳ ಬೃಹತ್ ಗ್ರಂಥವನ್ನು ನಂಜುಂಡಸ್ವಾಮಿಯವರು ಹೊರತಂದಿದ್ದು, ಅದೀಗ ಕನ್ನಡ ಭಾಷೆಯಲ್ಲಿಯೂ ಲೋಕಾರ್ಪಣೆಗೊಳ್ಳಲು ಸಿದ್ಧವಾಗಿದೆ. ಇವರ ಗ್ರಂಥಗಳೆಲ್ಲ 185 ದೇಶಗಳಲ್ಲಿ ಅಮೆಜಾನ್ ಸಂಸ್ಥೆಯಿಂದ 'e' ಪುಸ್ತಕಗಳಾಗಿ ಹೊರ ಬಂದಿದ್ದು, ಹಲವಾರು ಆಸಕ್ತರು, ಸಂಶೋಧಕರು, ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಇವರ ಬಹುಮುಖ ಪ್ರತಿಭೆ ಹಾಗೂ ಸೇವೆಯನ್ನು ಗುರುತಿಸಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 'ಕರ್ನಾಟಕ ಕಲಾಶ್ರೀ ಪ್ರಶಸ್ತಿ' ನೀಡಿ ಗೌರವಿಸಿದೆ. ವಿವಿಧ ಸಂಘ–ಸಂಸ್ಥೆಗಳಿಂದ 'ಶಾಸ್ತ್ರ ಸೌರಭ', 'ಲಲಿತ ಕಲಾಸುಮ', 'ಕಲಾದೀಪ್ತಿ', 'ಸಂಗೀತ ವಿದ್ಯಾವಾರಿಧಿ' ಮುಂತಾದ ಪ್ರಶಸ್ತಿ ಪುರಸ್ಕಾರಗಳು ಇವರಿಗೆ ಲಭಿಸಿವೆ. ಡಿಸೆಂಬರ್ 2ರಿಂದ ಐದು ದಿನಗಳ ಕಾಲ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ನಡೆಯಲಿರುವ ರಾಷ್ಟ್ರೀಯ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಡಿಸೆಂಬರ್ 6ರ ಸಂಜೆ ಸಮ್ಮೇಳನಾಧ್ಯಕ್ಷ ವಿದ್ವಾನ್ ವಿ.ನಂಜುಂಡಸ್ವಾಮಿ ಅವರಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಯೊಂದಿಗೆ ಚಿನ್ನದ ಪದಕ ನೀಡಿ ಗೌರವಿಸಲಾಗುವುದು.

ಆಕಾಶವಾಣಿಯಲ್ಲಿ ಇವರ ಸುಮಾರು 185ಕ್ಕೂ ಹೆಚ್ಚು ಸಂಖ್ಯೆಯ 'ಚಿಂತನಗಳು' ಪ್ರಸಾರವಾಗಿದ್ದು, ಅವುಗಳೆಲ್ಲಾ 'ಚಿಂತನ ಕಾರಂಜಿ' ಶೀರ್ಷಿಕೆಯಲ್ಲಿ ಪ್ರಕಟವಾಗಿದೆ. 'ಲಲಿತಾ ತ್ರಿಶತೀ', 'ಲಲಿತಾ ಸಹಸ್ರನಾಮ', 'ದೇವೀ ಖಡ್ಗಮಾಲಾ' ಮುಂತಾದವುಗಳಿಗೆ ರಾಗ ಸಂಯೋಜಿಸಿ ವೀಣೆಯಲ್ಲಿ ನುಡಿಸಿ, ಹಾಡಿ ಲೌಕಿಕ ಉದಾಹರಣೆಗಳ ಮೂಲಕ ಅರ್ಥೈಸಿ, ಅನೇಕ ಸುಪ್ರಸಿದ್ಧ ಸಂಗೀತಗಾರರು ಹಾಗೂ ನೃತ್ಯ ಪಟುಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಅಲ್ಲದೆ ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ ತಮ್ಮ ಎಲ್ಲಾ ವಿದ್ವತ್ ಚಿಂತನ–ಮಂಥನಗಳನ್ನು ಸುಮಾರು 200ಕ್ಕೂ ಹೆಚ್ಚು ವೀಡಿಯೋಗಳಲ್ಲಿ ಯೂಟ್ಯೂಬ್ ಮೂಲಕ ಪ್ರಸಾರ ಮಾಡಿ ಆಸಕ್ತರ ಮನಸೆಳೆದಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಬುಧವಾರ 23 ನವೆಂಬರ್ 2022

ಬ್ರಾಹ್ಮಣ ಸಮುದಾಯ ಕುರಿತ ಹೇಳಿಕೆ ವಿಚಾರ

ಚಿಂತಕ ಪ.ಮಲ್ಲೇಶ್ ವಿರುದ್ಧ ಹೋರಾಟ ಮುಂದುವರೆಸಬೇಡಿ

ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಮನವಿ



ಮೈಸೂರು,ನ.22(ಪಿಎಂ)– ಚಿಂತಕ ಪ.ಮಲ್ಲೇಶ್ ಬ್ರಾಹ್ಮಣ ಸಮುದಾಯ ಕುರಿತ ತಮ್ಮ ಹೇಳಿಕೆ ಸಂಬಂಧ ಈಗಾಗಲೇ ವಿಷಾದ ವ್ಯಕ್ತಪಡಿಸಿದ್ದು, ತಮ್ಮ ಹೇಳಿಕೆಯನ್ನು ಅವರು ಸಮರ್ಥಿಸಿಕೊಂಡಿಲ್ಲ. ಹಾಗಾಗಿ ಅವರ ವಿರುದ್ಧದ ಹೋರಾಟ ಮುಂದುವರೆಸದಂತೆ ಬ್ರಾಹ್ಮಣ ಸಮುದಾಯದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ.ಮಲ್ಲೇಶ್ ಉದ್ದೇಶಪೂರ್ವವಾಗಿ ಆ ರೀತಿ ಹೇಳಿಕೆ ನೀಡಿಲ್ಲ. ತಪ್ಪು ಮನುಷ್ಯನ ಸಹಜ ಗುಣ. ಹಾಗಾಗಿ ಅವರ ವಿರುದ್ಧದ ಹೋರಾಟ ಕೈಬಿಟ್ಟು ಸೌಹಾರ್ದ ಸಮಾಜ ಕಟ್ಟಲು ಕೈಜೋಡಿಸುವಂತೆ ಮನವಿ ಮಾಡಿದರು.

ಹಿಂದೂ ಧರ್ಮದ ಬಗ್ಗೆ ನಮಗೂ ಕೀಳರಿಮೆ ಇಲ್ಲ. ಆದರೆ ಅಲ್ಲಿರುವ ಅಸಮಾನತೆ ಹೋಗಲಾಡಿಸಬೇಕಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಅಸ್ಪೃಶ್ಯತೆ ಆಚರಣೆ ಇನ್ನೂ ಜೀವಂತವಾಗಿದೆ. ಚಾಮರಾಜನಗರ ತಾಲೂಕು ಹೆಗ್ಗೋಠಾರ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮಹಿಳೆ ನೀರು ಕುಡಿದ ಕಾರಣಕ್ಕೆ ಟ್ಯಾಂಕ್ ಶುದ್ಧೀಕರಿಸಿರುವುದು ಇದಕ್ಕೆ ತಾಜಾ ಉದಾಹರಣೆ. ಬ್ರಾಹ್ಮಣ್ಯದಲ್ಲಿರುವ ಅಸಮಾನತೆ ವಿರುದ್ಧ ನಮ್ಮ ಹೋರಾಟ ಹೊರತು ಬ್ರಾಹ್ಮಣ ಸಮುದಾಯದ ವಿರುದ್ಧವಲ್ಲ ಎಂದು ಸ್ಪಷ್ಟಪಡಿಸಿದರು.

ಶತ ಶತಮಾನದಿಂದ ಶೋಷಿತರು ಅನುಭವಿಸಿರುವ ಅಸ್ಪೃಶ್ಯತೆ ನೋವನ್ನು ಬ್ರಾಹ್ಮಣ ಸಮುದಾಯ ಅರ್ಥ ಮಾಡಿಕೊಳ್ಳಬೇಕು. ನನ್ನ ಈ ಮಾತು ಇಡೀ ಬ್ರಾಹ್ಮಣ ಸಮುದಾಯಕ್ಕೆ ಅನ್ವಯಿಸುವುದಿಲ್ಲ. ಕಾರಣ ಅಲ್ಲಿಯೂ ಪ್ರಗತಿಪರವಾಗಿ ಆಲೋಚಿಸುವ, ಅಸ್ಪೃಶ್ಯತೆ ಖಂಡಿಸುವ ಮನಸ್ಸುಗಳಿವೆ. ಆದರೆ ಅಲ್ಲಿನ ಕೆಲ ಪಟ್ಟಭದ್ರ ಹಿತಾಸಕ್ತಿಗಳು ಶೋಷಣೆಯನ್ನು ಪೋಷಣೆ ಮಾಡುತ್ತಿವೆ. ಇಂತಹ ಶಕ್ತಿಗಳ ವಿರುದ್ಧ ನಮ್ಮ ಹೋರಾಟ. ಪ್ರಸ್ತುತ ನಮಗೆ ಬೇಕಿರುವುದು ಶಾಂತಿ–ಸೌಹಾರ್ದತೆಯ ಸಮಾಜ. ಇಂದಿಗೂ ಜೀವಂತವಾಗಿರುವ ಅಸ್ಪೃಶ್ಯತೆ ಆಚರಣೆಯನ್ನು ಎಷ್ಟು ಜನ ಮೇಲ್ವರ್ಗದವರು ಖಂಡಿಸಿದ್ದಾರೆ ಎಂದು ಪ್ರಶ್ನಿಸಿದರು.

ಮಾಜಿ ಸಿಎಂ ಸಿದ್ದರಾಮಯ್ಯನವರೂ ಯಾವುದೇ ಸಮುದಾಯ ಬಗ್ಗೆ ದೂಷಣೆ ಮಾಡುವುದನ್ನು ಒಪ್ಪುವುದಿಲ್ಲ. ಆದರೆ ಎಲ್ಲದಕ್ಕೂ ಸಿದ್ದರಾಮಯ್ಯ ಅವರನ್ನು ಹೊಣೆ ಮಾಡುವ ಹುನ್ನಾರ ನಡೆಯುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮುಖಂಡರಾದ ಸತ್ಯನಾರಾಯಣ, ಮಹೇಂದ್ರ ಕಾಗಿನೆಲೆ, ನಾಗೇಶ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.



ಮೈಸೂರಿನ ಗಾಂಧಿಚೌಕ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಕರ್ನಾಟಕ ಸರ್ಕಾರದ "ಸಹಕಾರ ರತ್ನ" ಪ್ರಶಸ್ತಿ ಪುರಸ್ಕೃತರಾದ ಬ್ಯಾಂಕಿನ ನಿರ್ದೇಶಕ ಕೆ.ಉಮಾಶಂಕರ್ ಅವರನ್ನು ಆಡಳಿತ ಮಂಡಳಿ ನಿರ್ದೇಶಕರು ಹಾಗೂ ನಗರ ಪಾಲಿಕೆ ಸದಸ್ಯರಾದ ಎಸ್.ಬಿ.ಎಂ.ಮಂಜು ಅವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಸಿ.ರೇವಣ್ಣ, ಆಡಳಿತ ಮಂಡಳಿ ನಿರ್ದೇಶಕ ಆರ್.ರವಿಕುಮಾರ್(ರಾಜಕೀಯ), ಹೆಚ್.ಹರೀಶ್‌ಕುಮಾರ್, ಎಸ್.ಅರವಿಂದ ಎ.ಮಂಚಪ್ಪ, ಆರ್.ರವಿಕುಮಾರ್, ಶ್ರೀಮತಿ ಪಿ.ರಾಜೇಶ್ವರಿ, ಶ್ರೀಮತಿ ಸವಿತಾ.ಪಿ, ವೃತ್ತಿಪರ ನಿರ್ದೇಶಕರಾದ ಎಂ.ವೈ.ರಮೇಶ್‌ಗೌಡ, ಸಿ.ಎಸ್.ರಾಮಕೃಷ್ಣಯ್ಯ ಮತ್ತು ಬ್ಯಾಂಕಿನ ಸಹಾಯಕ ಕಾರ್ಯದರ್ಶಿ ಶ್ರೀಮತಿ ಎಸ್.ಗಾಯತ್ರಿ ಉಪಸ್ಥಿತರಿದ್ದರು.

ವಿವಿಸಿಇಯಲ್ಲಿ ಐದು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು, ನ.22– ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪದ್ಮಶ್ರೀ ಪುರಸ್ಕೃತರಾದ ವೃಕ್ಷಮಾತೆ ತುಳಸಿಗೌಡ ಹಾಗೂ ವಿದುಷಿ ಕೆ.ಎಸ್.ಜಯಲಕ್ಷ್ಮಿ ಅವರಿಗೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಬಿ.ಸದಾಶಿವೇಗೌಡ ಮಾತನಾಡಿ, ಕನ್ನಡ ರಾಜ್ಯೋತ್ಸವವನ್ನು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಹಮ್ಮಿಕೊಳ್ಳಲಾಗಿದೆ. ರಾಜ್ಯದ ವಿವಿಧ ಮೂಲಗಳಿಂದ ಸುಮಾರು 70 ಕಲಾ ತಂಡಗಳ ಪ್ರದರ್ಶನ ಇರಲಿದೆ. ವಿದ್ಯಾರ್ಥಿಗಳಲ್ಲಿ ಕನ್ನಡದ ಸದಭಿರುಚಿಯನ್ನು ಹೆಚ್ಚಿಸುವುದಕ್ಕೆ ಆದ್ಯತೆ ಕೊಟ್ಟಿದ್ದೇವೆ ಎಂದರು. ಸಂಸ್ಥೆಯ ಗೌರವ ಅಧ್ಯಕ ಗುಂಡಪ್ಪಗೌಡ, ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್, ಸಂಚಾಲಕ ಪ್ರೊ.ಎನ್ಎಸ್.ಲಿಂಗೇಗೌಡ ಹಾಗೂ ಸ್ವಯಂ ಸೇವಾ ಸಂಘದ ಯೂತ್ ಫಾರ್ ಸೇವಾದ ಬಿ.ಬಿ.ಗಣೇಶ್ ಇದ್ದರು.



ಫಾರಂ 7 ಅರ್ಜಿ ಇಲ್ಲದೆಯೇ ಮತದಾರರ ಪಟ್ಟಿಯಿಂದ 27 ಲಕ್ಷ ಹೆಸರು ಕೈಬಿಟ್ಟಿದ್ದಾದರೂ ಹೇಗೆ?

ಬೆಂಗಳೂರು, ನ.22(ಕೆಎಂಶಿ)–ಮತದಾರರ ಪಟ್ಟಿಯಲ್ಲಿ ಹೆಸರು ತೆಗೆಯಲು ಅಥವಾ ಸೇರಿಸಲು ಫಾರಂ 7 ಅತ್ಯಗತ್ಯ. ಈ ಅರ್ಜಿಗಳು ಇಲ್ಲದೆ 27 ಲಕ್ಷ ಹೆಸರು ತೆಗೆದಿದ್ದು ಹೇಗೆ, ಇವುಗಳಿಗೆ ಸಹಿ ಹಾಕಿದವರು ಯಾರು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೇರೆ ಸಮಯದಲ್ಲಿ ಚಿಲುಮೆ ಸಂಸ್ಥೆಗೆ ಬೇರೆ ಕೆಲಸವನ್ನು ಸರ್ಕಾರ ನೀಡಿರಬಹುದು. ಆದರೆ ಅವುಗಳಿಗೂ ಈ ಚುನಾವಣಾ ಪ್ರಕ್ರಿಯೆಗೂ ಬಹಳ ವ್ಯತ್ಯಾಸವಿದೆ ಮತದಾರರ ಪಟ್ಟಿ ಕದಿಯುವ ಕೆಲಸದಲ್ಲಿ ಚಿಲುಮೆ ಸಂಸ್ಥೆಗಳು ಮಾತ್ರವಲ್ಲ, ಅವುಗಳ ದಾಖಲೆಗಳನ್ನು ಆಯೋಗಕ್ಕೆ ನೀಡಿ, ನಂತರ ಬಿಡುಗಡೆ ಮಾಡುವುದಾಗಿ ತಿಳಿಸಿದರು.

ಚುನಾವಣಾ ಆಯೋಗದ ಅಧಿಕಾರಿಗಳ ಭೇಟಿಗೆ ನಾಳೆ ಸಮಯ ನೀಡಿದ್ದಾರೆ. ಅವರನ್ನು ಭೇಟಿ ಮಾಡಿ ನಮ್ಮ ದೂರು ನೀಡುತ್ತೇವೆ. ಈ ಪ್ರಕರಣದಲ್ಲಿ ಸಾಕಷ್ಟು ಕಾನೂನು ಅಂಶಗಳಿವೆ. ಮತದಾರರ ಮಾಹಿತಿ ತೆಗೆದುಕೊಳ್ಳುವ ಅವಕಾಶ ಯಾರಿಗೂ ಇಲ್ಲ.

ರಾಜ್ಯದಲ್ಲಿ 8250 ಬೂತ್‌ಗಳಿವೆ. ಪ್ರತಿ ಬೂತ್‌ಗೆ ಒಬ್ಬರನ್ನು ನೇಮಕ ಮಾಡಬೇಕು. ಕೇವಲ ಚಿಲುಮೆ ಸಂಸ್ಥೆ ಮಾತ್ರವಲ್ಲ, 7 ಸಾವಿರಕ್ಕೂ ಹೆಚ್ಚು ಜನರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿದೆ. ಎಲ್ಲಾ 28 ಕ್ಷೇತ್ರ ಚುನಾವಣಾಧಿಕಾರಿ ಮೇಲೂ ಪ್ರಕರಣ ದಾಖಲಿಸಬೇಕು. ಒತ್ತಡದ ಮೇಲೆ ಈ ಕೆಲಸ ಮಾಡಿದ್ದೇವೆ ಎಂದು ಕೆಲವು ಬಂಧಿತ ಆರೋಪಿಗಳು ಹೇಳಿಕೆ ನೀಡಿರುವ ಸುದ್ದಿ ಬಗ್ಗೆ ಕೇಳಿದಾಗ, ಈ ವಿಚಾರ ನನಗೆ ಗೊತ್ತಿಲ್ಲ. ಆತ ಕಳ್ಳತನ ಮಾಡಿದ್ದರೆ, ಅದನ್ನು ಮಾಡಿಸಿದವರು ಯಾರು, ಹೀಗೆ ಮಾಡಬೇಕು ಎಂದು ಹೇಳಿಕೊಟ್ಟವರು ಯಾರು, ಅಧಿಕಾರಿಯೊಬ್ಬರು ಮೇಲಾಧಿಕಾರಿಗಳ ಆದೇಶದ ಮೇರೆಗೆ ನಾವು ಈ ಕೆಲಸ ಮಾಡಿದ್ದೇವೆ ಎಂದು ಹೇಳಿದ್ದು, ಈ ಮೇಲಾಧಿಕಾರಿಗಳು ಯಾರು ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ನಾನಾ, ಸಿದ್ದರಾಮಯ್ಯ, ಯಡಿಯೂರಪ್ಪ ಇಲ್ಲವೇ ಬೊಮ್ಮಾಯಿ ಅವರೇ ಹೇಳಿದ್ದಾರಾ ಎಂಬುದರ ಬಗ್ಗೆ ತನಿಖೆಯಾಗಬೇಕು. ಆದರೆ ಇವರಿಂದ ಸಾಧ್ಯವಿಲ್ಲ. ನಾವು ಎಲ್ಲವನ್ನೂ ಈಗಲೇ ಬಹಿರಂಗ ಮಾಡುವುದಿಲ್ಲ. ದೂರು ಕೊಟ್ಟ ನಂತರ ಏನು ದೂರು ಕೊಟ್ಟಿದ್ದೇವೆ ಎಂದು ತಿಳಿಸುತ್ತೇವೆ ಎಂದು ಹೇಳಿದರು.

ಮಹಾರಾಷ್ಟ್ರಕ್ಕೆ ರಾಜ್ಯದಿಂದ ಸೌಹಾರ್ದತೆ ಪಾಠ

ಬೆಂಗಳೂರು, ನ.22(ಕೆಎಂಶಿ)– ರಾಜ್ಯ ರಾಜ್ಯಗಳ ನಡುವೆ ಜಗಳ ಹಚ್ಚುವ ಕೆಲಸವನ್ನು ಮಹಾರಾಷ್ಟ್ರ ಸರ್ಕಾರ ಮಾಡಬಾರದೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡು ರಾಜ್ಯಗಳ ನಡುವೆ ಸೌಹಾರ್ದತೆ, ಎಲ್ಲಾ ಭಾಷಿಕರನ್ನು ಸಹೋದರರಂತೆ ನೋಡಿಕೊಳ್ಳುವಾಗ, ಇಂತಹ ಕಿರಿಕಿರಿ ಬೇಡ.

ಮಹಾರಾಷ್ಟ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಕನ್ನಡಿಗರು ಇದ್ದು, ಅವರ ಹಿತರಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಅದನ್ನು ನಾವು ಮಾಡುತ್ತೇವೆ ಎಂದರು.


ಜತ್ ತಾಲೂಕಿನಲ್ಲಿ ತೀವ್ರ ಬರಗಾಲವಿದ್ದು ಕುಡಿಯುವ ನೀರಿನ ಸಮಸ್ಯೆ ಇತ್ತು. ನಾವು ನೀರು ಕೊಟ್ಟು ಸಹಾಯ ಮಾಡಬೇಕೆಂದು ಯೋಜನೆಗಳನ್ನು ರೂಪಿಸಿದ್ದೇವೆ. ಜತ್ ತಾಲೂಕು ಕರ್ನಾಟಕಕ್ಕೆ ಸೇರಬೇಕೆಂದು ಎಲ್ಲಾ ಗ್ರಾಮ ಪಂಚಾಯಿತಿಗಳು ನಿರ್ಧರಿಸಿದ್ದವು. ನಾವು ಅದನ್ನು ಗಂಭೀರವಾಗಿ ಪರಿಗಣಿಸುತ್ತಿದ್ದೇವೆ ಎಂದರು.

ಸಿಟ್ಟಿನ ಭರದಲ್ಲಿ ಶ್ರದ್ಧಾ ಹತ್ಯೆ ಮಾಡಿದೆ

ಕೋರ್ಟ್‌ನಲ್ಲಿ ತಪ್ಪೊಪ್ಪಿಕೊಂಡ ಆಫ್ತಾಬ್

ನವದೆಹಲಿ, ನ.22– ತನ್ನ ಸಹಜೀವನದ ಸಂಗಾತಿ ಶ್ರದ್ಧಾ ವಾಲಕರ್ ಅವರನ್ನು ಹತ್ಯೆ ಮಾಡಿರುವ ಆರೋಪ ಎದುರಿಸುತ್ತಿರುವ ಆಫ್ತಾಬ್ ಅಮೀನ್ ಪೂನಾವಾಲಾ ಮಂಗಳವಾರ ದೆಹಲಿ ನ್ಯಾಯಾಲಯವೊಂದರ ಮುಂದೆ ಹೇಳಿಕೆ ನೀಡಿದ್ದು, ಸಿಟ್ಟಿನ ಭರದಲ್ಲಿ ಅಪರಾಧ ಎಸಗಿದೆ ಎಂದು ಹೇಳಿದ್ದಾನೆ.

ಆಫ್ತಾಬ್ ಪೊಲೀಸ್ ಕಸ್ಟಡಿಯ 5 ದಿನಗಳ ಅವಧಿಯು ಮಂಗಳವಾರ ಮುಗಿದಿದ್ದು, ಆತನನ್ನು ಇಲ್ಲಿನ ಮೆಟ್ರೊ ಪಾಲಿಟನ್ ಮ್ಯಾಜಿಸ್ಟ್ರೇಟ್ ಅವಿರಲ್ ಶುಕ್ಲಾ ಅವರ ಎದುರು ಹಾಜರುಪಡಿಸಲಾಯಿತು. ಆಫ್ತಾಬ್‌ನ ಕಸ್ಟಡಿ ಅವಧಿಯನ್ನು ನಾಲ್ಕು ದಿನಗಳ ಕಾಲ ವಿಸ್ತರಿಸಿದ ನ್ಯಾಯಾಧೀಶರು, ಸುಳ್ಳು ಪತ್ತೆ ಪರೀಕ್ಷೆ ನಡೆಸಲು ಪೊಲೀಸರಿಗೆ ಅನುಮತಿ ನೀಡಿದರು.



ಆಫ್ತಾಬ್ ಅಮೀನ್

ಸಿಟ್ಟಿನ ಭರದಲ್ಲಿ ಅಪರಾಧ ಎಸಗಿದ್ದಾಗಿ ಆಫ್ತಾಬ್ ನ್ಯಾಯಾಲಯಕ್ಕೆ ಹೇಳಿದ್ದು, ಪೊಲೀಸರಿಗೆ ಸಹಕಾರ ನೀಡುತ್ತಿರುವುದಾಗಿಯೂ ತಿಳಿಸಿದ್ದಾನೆ ಎಂದು ಆರೋಪಿ ಆಫ್ತಾಬ್ ಪರ ವಕೀಲರು ತಿಳಿಸಿದ್ದಾರೆ.

ಕತ್ತರಿಸಿದ ದೇಹದ ಭಾಗಗಳನ್ನು ಎಸೆದ ಸ್ಥಳಗಳನ್ನು ನಿಖರವಾಗಿ ಗುರುತಿಸುವಲ್ಲಿ ತೊಂದರೆ ಎದುರಿಸುತ್ತಿದ್ದೇನೆ. ನನಗೆ ನಗರದ ಭಾಗಗಳು ಅಷ್ಟಾಗಿ ಪರಿಚಯವಿಲ್ಲ ಎಂದು ಆಫ್ತಾಬ್ ಹೇಳಿದ್ದಾನೆ. ದೇಹದ ಭಾಗಗಳ ಹುಡುಕಾಟಕ್ಕಾಗಿ ಆತನನ್ನು ಮಹ್ರೌಲಿ ಅರಣ್ಯ ಹಾಗೂ ಮೈದಾನ್ ಗಡಿ ಕೊಳದ ಪ್ರದೇಶಗಳಿಗೆ ಪೊಲೀಸರು ಕರೆದೊಯ್ಯಲಿದ್ದಾರೆ ಎಂದೂ ವಕೀಲರು ಮಾಹಿತಿ ನೀಡಿದ್ದಾರೆ.

ಅರ್ಜಿ ವಜಾ: ಈ ನಡುವೆ, ಹತ್ಯೆ ಪ್ರಕರಣದ ತನಿಖೆಯನ್ನು ದೆಹಲಿ ಪೊಲೀಸರಿಂದ ಸಿಬಿಐಗೆ ವರ್ಗಾಯಿಸಬೇಕೆಂದು ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದೆಹಲಿ ಹೈಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಬೆನ್ನೆಲುಬು

ಸಾಧನಾ ಸಮಾವೇಶ ಉದ್ಘಾಟಿಸಿ ಶಾಸಕ ಜಿ.ಟಿ.ದೇವೇಗೌಡ ಪ್ರಶಂಸೆ

ಮೈಸೂರು,ನ.22(ಪಿಎಂ)– ಮಹಿಳೆಯರನ್ನು ಜಾಗೃತಿಗೊಳಿಸಿ ಅವರಲ್ಲಿ ಆರ್ಥಿಕ ಪ್ರಜ್ಞಾವಂತಿಕೆ ಬೆಳೆಸುವ ಮಹತ್ತರ ಕೆಲಸದೊಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಬೆನ್ನೆಲುಬಾಗಿ ನಿಂತಿದೆ ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ. ದೇವೇಗೌಡ ಪ್ರಶಂಸೆ ವ್ಯಕ್ತಪಡಿಸಿದರು.

ಮೈಸೂರು ತಾಲೂಕು ಜಯಪುರ ಹೋಬಳಿ ದಾರಿಪುರ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮಂಗಳವಾರ ಏರ್ಪಡಿಸಿದ್ದ ಪ್ರಗತಿಬಂಧು ಸ್ವ–ಸಹಾಯ ಸಂಘಗಳ ಸಾಧನಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.



ಮೈಸೂರು ತಾಲೂಕು ದಾರಿಪುರ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮಂಗಳವಾರ ಏರ್ಪಡಿಸಿದ್ದ ಪ್ರಗತಿಬಂಧು ಸ್ವ–ಸಹಾಯ ಸಂಘಗಳ ಸಾಧನಾ ಸಮಾವೇಶವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಸಮಾಜ ಮತ್ತು ಕುಟುಂಬ ಸುಧಾರಣೆಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ಮಹಿಳೆಯರಲ್ಲಿ ಆತ್ಮವಿಶ್ವಾಸ ಮೂಡಿಸಿದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯವೆಂಬ ನಂಬಿಕೆಯಡಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯನಿರ್ವಹಿಸುತ್ತಿದೆ. ಇದರಡಿ ಕಳೆದ 12 ವರ್ಷಗಳಲ್ಲಿ ಮೈಸೂರು ಜಿಲ್ಲೆಯಲ್ಲಿ 17,610 ಸ್ವ–ಸ್ವಹಾಯ ಸಂಘಗಳ ಮೂಲಕ 1.58 ಲಕ್ಷ ಮಹಿಳೆಯರು ಸ್ವಾವಲಂಬಿ ಬದುಕು ಕಂಡುಕೊಂಡು, ಕುಟುಂಬದ ಆರ್ಥಿಕತೆಗೆ ಹೆಗಲೊಡ್ಡಿದ್ದಾರೆ ಎಂದು ಜಿಟಿಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆಯವರ ನೇತೃತ್ವದ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಜಿಲ್ಲೆಯಲ್ಲಿ ಕಾರ್ಯಾರಂಭಿಸಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪೂಜ್ಯರ ಮಾರ್ಗದರ್ಶನದಲ್ಲಿ ಸ್ವ–ಸಹಾಯ ಸಂಘಗಳ ಮೂಲಕ ಹಲವು ಮಂದಿ ಉತ್ತಮ ಬದುಕನ್ನು ಕಟ್ಟಿಕೊಂಡು ಆರ್ಥಿಕವಾಗಿ ಸದೃಢರಾಗಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಸದಸ್ಯರಿಗೆ ಆರ್ಥಿಕ ಸಹಕಾರ ನೀಡುವುದರ ಜೊತೆಗೆ ವ್ಯವಹಾರದ ಶಿಸ್ತು, ಜೀವನ ಮೌಲ್ಯಗಳನ್ನು ಕಲಿಸಿಕೊಡುತ್ತಿರುವುದು ಸಮಾಜದ ದುರ್ಬಲ ವರ್ಗದವರಿಗೆ ಆಶಾಕಿರಣವಾಗಿದೆ ಎಂದು ತಿಳಿಸಿದರು.

ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ಹೆಚ್ಚಿನ ದಾಖಲೆಗಳ ಜಂಜಾಟವಿಲ್ಲದೇ ಕಡಿಮೆ ಬಡ್ಡಿ ದರದಲ್ಲಿ ಸ್ವ–ಸಹಾಯ ಸಂಘದ ಮೂಲಕ ಮಹಿಳೆಯರು ಸಾಲ ಪಡೆಯಬಹುದು. ಹೀಗಾಗಿ ಸಣ್ಣ–ಪುಟ್ಟ ವ್ಯಾಪಾರ ಆರಂಭಿಸಿ, ಕುಟುಂಬದ ಆರ್ಥಿಕ ಸ್ಥಿತಿ ಉತ್ತಮಗೊಳಿಸಬೇಕೆಂಬ ಕನಸು ಕಾಣುವ ಬಡ ಮಹಿಳೆಯರಿಗೆ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಭರವಸೆ ಬೆಳಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಾದೇಶಿಕ ನಿರ್ದೇಶಕ ಜಯರಾಮ ನೆಲ್ಲಿತ್ತಾಯ, ದಾರಿಪುರ ಗ್ರಾಮದ ಮುಖಂಡ ಬಸವಣ್ಣ, ಜಯಪುರ ಗ್ರಾಪಂ ಅಧ್ಯಕ್ಷೆ ಮಹಾದೇವಿ, ಮುಖಂಡ ಬರಡನಪುರ ಬಸವಣ್ಣ ಮತ್ತಿತರರು ಹಾಜರಿದ್ದರು.

ಸುತ್ತೂರು ಶ್ರೀ ಕ್ಷೇತ್ರ ಸರ್ವಜನಾಂಗದ ಶಾಂತಿಯ ತೋಟ; ಇಲ್ಲಿ ಶಿಕ್ಷಣ ಪಡೆದವರು ಪುಣ್ಯವಂತರು

ಇನ್ಫೋಸಿಸ್ ಪ್ರತಿಷ್ಠಾನದ ನಾರಾಯಣಮೂರ್ತಿ ಅಭಿಮತ



ಸುತ್ತೂರು, ನ.22– ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಪುಣ್ಯವಂತರು ಎಂದು ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕ ನಾರಾಯಣಮೂರ್ತಿ ಹೇಳಿದರು.

ಸುತ್ತೂರು ಕ್ಷೇತ್ರದಲ್ಲಿ ನಿನ್ನೆ ನಡೆದ ಪ್ರಾರ್ಥನಾ ಸಭೆಯಲ್ಲಿ ಜೆಎಸ್ಎಸ್ ವಸತಿ ಶಾಲೆಯ ಸಹಸ್ರಾರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಸುತ್ತೂರು ಶಿಕ್ಷಣ ಸಂಸ್ಥೆಯು ಜಾತಿ, ಮತ, ಭೇದವಿಲ್ಲದ ಸರ್ವಜನಾಂಗದ ಶಾಂತಿಯ ತೋಟದಂತಿದೆ. ವಿವಿಧ ಜಿಲ್ಲೆ ಹಾಗೂ ಹೊರರಾಜ್ಯಗಳ ಬಡ ಮಕ್ಕಳಿಗೆ ವಸತಿ, ಶಿಕ್ಷಣದೊಂದಿಗೆ ಸಂಸ್ಕಾರವನ್ನೂ ಕಲಿಸಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುತ್ತಿದೆ. ದೇಶ ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಗುಣಾತ್ಮಕ ಶಿಕ್ಷಣ ನೀಡುವ ಮೂಲಕ ಶ್ರೀ ಸುತ್ತೂರು ಮಠವು ಸಮಾಜಕ್ಕೆ ಅನನ್ಯ ಕೊಡುಗೆ ನೀಡುತ್ತಿದೆ ಎಂದು ಬಣ್ಣಿಸಿದರು.

ಇನ್ಫೋಸಿಸ್ ಪ್ರತಿಷ್ಠಾನದ ಸುಧಾಮೂರ್ತಿ ಮಾತನಾಡಿ, 'ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ, ಸುತ್ತಿ ಸುಳಿದು ನೋಡದಂತೆ ಅಂದಕನ ಮಾಡಯ್ಯ ತಂದೆ' ಎಂಬಂತೆ ವಿದ್ಯಾರ್ಥಿಗಳು ಗುರಿ ಮತ್ತು ಉದ್ದೇಶ ಈಡೇರಿಸಿಕೊಳ್ಳಬೇಕಾದರೆ ಏಕಾಗ್ರತೆ ಸಹಿತ ನಿರಂತರ ಓದು ಬಹಳ ಮುಖ್ಯ. ಗುರು–ಹಿರಿಯರನ್ನು ಪ್ರೀತಿ ಗೌರವದಿಂದ ಕಾಣಬೇಕು. ಇಂದಿನ ಸಮಾಜಕ್ಕೆ ಅವರ ಸಲಹೆ ಮತ್ತು ಮಾರ್ಗದರ್ಶನ ಅತ್ಯವಶ್ಯಕವಾಗಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ನಾರಾಯಣ ಮೂರ್ತಿ ಹಾಗೂ ಶ್ರೀಮತಿ ಸುಧಾಮೂರ್ತಿ ದಂಪತಿ ಸರಳ ಸಜ್ಜನಿಕೆಯ ವ್ಯಕ್ತಿತ್ವವುಳ್ಳವರು. ಸಮಾಜದಲ್ಲಿ ಎಷ್ಟೇ ಎತ್ತರಕ್ಕೆ ಬೆಳೆದರೂ ಸಾಮಾನ್ಯರಂತೆ ಜೀವನ ನಡೆಸುತ್ತಿದ್ದಾರೆ. ಚಿನ್ನದ ಒಡವೆಗಳನ್ನು ಮಾರಿ ಸಣ್ಣದಾಗಿ ಕಟ್ಟಿದ ಇನ್ಫೋಸಿಸ್ ಸಂಸ್ಥೆ ಇಂದು ಬೃಹದಾಕಾರವಾಗಿ ಬೆಳೆದಿದೆ. ಪ್ರಪಂಚದ ಪ್ರತಿಷ್ಠಿತ ಕಂಪೆನಿಗಳಲ್ಲಿ ಒಂದಾಗಿ 3 ಲಕ್ಷ ಜನರಿಗೆ ಉದ್ಯೋಗ ನೀಡಿರುವುದಲ್ಲದೆ ಅವರನ್ನೆಲ್ಲಾ ಒಂದೇ ಕುಟುಂಬದ ಸದಸ್ಯರಂತೆ ಕಾಣುತ್ತಿದೆ. ಭಾರತವನ್ನಾಳಿದ ಬ್ರಿಟಿಷರ ನಾಡು ಬ್ರಿಟನ್‌ಗೆ ಇವರ ಅಳಿಯ ರಿಷಿ ಸುನಕ್ ಪ್ರಧಾನಿಯಾಗಿರುವುದು ಹೆಮ್ಮೆ ಹಾಗೂ ಸಂತೋಷದ ಸಂಗತಿ ಎಂದರು.

ಸಂಸ್ಥೆಗಳ ಮುಖ್ಯಸ್ಥರು, ಮತ್ತಿತರ ಗಣ್ಯರು ಉಪಸ್ಥಿತರಿದ್ದರು. ಸಂಯೋಜನಾಧಿಕಾರಿ ಜಿ.ಎಲ್.ತ್ರಿಪುರಾಂತಕ ಕಾರ್ಯಕ್ರಮ ನಿರೂಪಿಸಿದರು.

ಇಂದು ಶ್ರೀ ಮಹದೇಶ್ವರರ ಪೂಜೆ

ಮೈಸೂರು,ನ.22–ಚಾಮುಂಡಿಬೆಟ್ಟ–ಉತ್ತನಹಳ್ಳಿ ರಸ್ತೆಯ ಮಹದೇಶ್ವರ ಹಳ್ಳದಲ್ಲಿ ಇಂದು ರಾತ್ರಿಯಿಂದ ಭಜನಾ ಕಾರ್ಯಕ್ರಮ ಆರಂಭವಾಗಿದ್ದು, ನಾಳೆ(ನ.23) 18ನೇ ವರ್ಷದ ಶ್ರೀ ಮಹದೇಶ್ವರರ ಪೂಜೆ ನೆರವೇರಲಿದೆ. ಬೆಳಗ್ಗೆ 10.30ಕ್ಕೆ ಮಹಾಮಂಗಳಾರತಿ ನಂತರ ಭಕ್ತಾಧಿಗಳಿಗೆ ಅನ್ನದಾಸೋಹ ಏರ್ಪಡಿಸಲಾಗಿದೆ ಎಂದು ನಾಯಕರ ಸಂಘದ ಆರ್ ಶಂಭುಲಿಂಗು ಹಾಗೂ ನಾಗೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳಗಾವಿ ಗಡಿ ವಿವಾದ

ಇಂದು ವಿಚಾರಣೆ

ಸರ್ವಪಕ್ಷ ಸಭೆ ಕರೆಯಲು ಸಿದ್ದರಾಮಯ್ಯ ಒತ್ತಾಯ

ಬೆಂಗಳೂರು, ನ.22– ಬೆಳಗಾವಿ ಗಡಿ ವಿವಾದದ ಬಗ್ಗೆ ಮಹಾರಾಷ್ಟ್ರ ಸರ್ಕಾರ ವಿಶೇಷ ಆಸಕ್ತಿ ತೋರಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ತಕ್ಷಣ ಸರ್ವಪಕ್ಷಗಳ ಸಭೆ ಕರೆದು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಬೇಕು ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಸಿದ್ದರಾಮಯ್ಯ, ಬೆಳಗಾವಿ ಗಡಿ ವಿವಾದದ ಬಗ್ಗೆ ನ.23ರಂದು ಸುಪ್ರೀಂ ಕೋರ್ಟ್ ನಡೆಸಲಿರುವ ವಿಚಾರಣೆಯನ್ನು ಎದುರಿಸಲು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಭರದಿಂದ ಸಿದ್ಧತೆ ನಡೆಸಿದ್ದಾರೆ. ಸುಪ್ರೀಂಕೋರ್ಟ್‌ನಲ್ಲಿ ತಮ್ಮ ರಾಜ್ಯ ಮಂಡಿಸಬೇಕಾದ ವಾದದ ಬಗ್ಗೆ ಸಮಾಲೋಚನೆ ನಡೆಸಲು ವಿರೋಧ ಪಕ್ಷಗಳ ಸದಸ್ಯರನ್ನೊಳಗೊಂಡ ಸಮಿತಿ ರಚಿಸಿರುವುದು ಆ ರಾಜ್ಯ ಗಡಿವಿವಾದವನ್ನು ಎಷ್ಟೊಂದು ಗಂಭೀರವಾಗಿ ಸ್ವೀಕರಿಸಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ ಎಂದಿದ್ದಾರೆ.

ನೆಲ–ಜಲ–ಭಾಷೆಯ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿಗೆ ಬದ್ಧವಾಗಿ ರಾಜ್ಯ ಬಿಜೆಪಿ ಸರ್ಕಾರ ಸರ್ಕಾರ ಕೈಗೊಳ್ಳುವ ಕ್ರಮಗಳನ್ನು ಕಾಂಗ್ರೆಸ್ ಬೆಂಬಲಿಸುತ್ತದೆ. ಕಾಲವ್ಯಯ ಮಾಡದೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರೋಧ ಪಕ್ಷಗಳ ಸಭೆ ಕರೆದು, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸಮಾಡಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ವಿಶೇಷಚೇತನರಿಗೆ ವಿಶಿಷ್ಟ ಗುರುತಿನ ಚೀಟಿ ನೀಡುವಲ್ಲಿ ರಾಜ್ಯದ ಸಾಧನೆ

ಇದುವರೆಗೆ 5.86 ಲಕ್ಷ ಕಾರ್ಡ್ ವಿತರಣೆ

ಬೆಂಗಳೂರು, ನ.22(ಕೆಎಂಶಿ)–ಸರ್ಕಾರದಿಂದ ವಿಶೇಷಚೇತನರಿಗೆ ನೀಡುವ ವಿಶಿಷ್ಟ ಗುರುತಿನ ಚೀಟಿಯ ವಿತರಣೆಯಲ್ಲಿ ರಾಜ್ಯದಲ್ಲಿ ಗಮನಾರ್ಹ ಸಾಧನೆಯಾಗಿದ್ದು, ಈವರೆಗೆ 5.86 ಲಕ್ಷ ವಿಶೇಷಚೇತನರಿಗೆ ಕಾರ್ಡ್ ವಿತರಣೆ ಮಾಡಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.



ಯುಡಿಐಡಿ ಕಾರ್ಡ್ ವಿತರಣೆ ಪ್ರಕ್ರಿಯೆಯ ಪ್ರಗತಿ ಪರಿಶೀಲನೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಬಲೀಕರಣ ಇಲಾಖೆಯ ಸಹಯೋಗದೊಂದಿಗೆ, ವಿಶೇಷಚೇತನರಿಗೆ ನೀಡುವ ಯೂನಿವರ್ಸಲ್ ಗುರುತು ಚೀಟಿ–ಯುಡಿಐಡಿಯಲ್ಲಿ ಕರ್ನಾಟಕ ಉತ್ತಮ ಸಾಧನೆ ತೋರಿದೆ. ರಾಮನಗರ ಜಿಲ್ಲೆಯಲ್ಲಿ ಅತೀ ಹೆಚ್ಚು ಕಾರ್ಡ್‌ಗಳು ವಿತರಣೆಯಾಗಿವೆ. ಚಿಕ್ಕಮಗಳೂರು 2ನೇ ಸ್ಥಾನದಲ್ಲಿದ್ದು, ಬಾಗಲಕೋಟೆ, ಹಾವೇರಿ, ಉತ್ತರಕನ್ನಡ, ಬೆಳಗಾವಿ ಹಾಗೂ ಮಂಡ್ಯ ಜಿಲ್ಲೆಗಳು ನಂತರದ ಸ್ಥಾನಗಳಲ್ಲಿವೆ ಎಂದರು. ಜೊತೆಗೆ ಜೊತೆಗೆ ಉತ್ತಮ ಸಾಧನೆ ಮಾಡಿದ ಜಿಲ್ಲೆಗಳ ಆರೋಗ್ಯಾಧಿಕಾರಿಗಳನ್ನು ಅಭಿನಂದಿಸಿದರು.

ವಿಶೇಷಚೇತನರು ಕಡ್ಡಾಯವಾಗಿ ಯುಡಿಐಡಿ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಒಮ್ಮೆ ಲಾಗಿನ್ ಆದ ನಂತರ ಯುಡಿಐಡಿ ಕಾರ್ಡ್ ಪಡೆಯುವುದು ಸುಲಭವಾಗಿದೆ. ಇದರ ಮೂಲಕ ಸರ್ಕಾರದಿಂದ ಹಲವಾರು ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಲಿದೆ. ಯುಡಿಐಡಿ ಕಾರ್ಡ್‌ನಿಂದ ಬ್ಲಾಕ್ ಮತ್ತು ಜಿಲ್ಲಾ ಹಂತ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಎಲ್ಲಾ ಹಂತದ ಅನುಷ್ಠಾನ ಶ್ರೇಣಿಯಲ್ಲಿ ಫಲಾನುಭವಿಯ ಸೌಲಭ್ಯಗಳನ್ನು ಟ್ರ್ಯಾಕ್ ಮಾಡಲಾಗುವುದು. ಕಟ್ಟ ಕಡೆಯ ವಿಶೇಷ ಚೇತನರಿಗೂ ಯುಡಿಐಡಿ ಕಾರ್ಡ್‌ಗಳನ್ನು ವಿತರಿಸುವುದು ಸರ್ಕಾರದ ಗುರಿಯಾಗಿದ್ದು, ಇದಕ್ಕಾಗಿ ಎಲ್ಲಾ ವಲಯಗಳಲ್ಲಿ ವಿಶೇಷ ವ್ಯವಸ್ಥೆ ಮಾಡಲಾಗಿದೆ ಎಂದರು.



ಅಂಗವೈಕಲ್ಯದಲ್ಲಿ ಈ ಹಿಂದೆ 7 ಬಗೆಯ ನ್ಯೂನತೆಗಳನ್ನು ಮಾತ್ರ ಪರಿಗಣಿಸಲಾಗುತ್ತಿತ್ತು. ಆದರೆ 2016ರ ಆರ್.ಪಿ.ಡಬ್ಲ್ಯೂ.ಡಿ. ಕಾಯ್ದೆಗೆ ತಿದ್ದುಪಡಿ ತಂದ ನಂತರ 21 ರೀತಿಯ ನ್ಯೂನತೆಗಳನ್ನು ಗುರುತಿಸಲಾಗಿದೆ. ವಿಶೇಷಚೇತನರ ವೈಯಕ್ತಿಕ ಮತ್ತು ದೈಹಿಕ ನ್ಯೂನತೆಗಳ ಬಗ್ಗೆ ದತ್ತಾಂಶ ಸಂಗ್ರಹಿಸಲಾಗುತ್ತಿದೆ. ಶೈಕ್ಷಣಿಕ, ಉದ್ಯೋಗ ವಿವರಗಳನ್ನು ಸಹ ಇದು ಒಳಗೊಂಡಿದೆ. ಶೇ.40ರ ದೈಹಿಕ ನ್ಯೂನತೆ ಹೊಂದಿರುವವರನ್ನು ವಿಶೇಷ ಚೇತನರು ಎಂದು ಗುರುತಿಸಲಾಗುತ್ತಿದೆ. ಇವರಿಗೆ ಸೌಲಭ್ಯಗಳನ್ನು ದೊರಕಿಸಿ ಕೊಡಲು ವಿಶೇಷ ಒತ್ತು ನೀಡಲಾಗಿದೆ ಎಂದರು.

ಕೋವಿಡ್ ಸಂದರ್ಭದಲ್ಲಿ ದೇಶದ ಆರ್ಥಿಕ ಸಮತೋಲನ ಸಾಧಿಸಿದ ಸಹಕಾರ ಕ್ಷೇತ್ರ: ಶಾಸಕ ಎಸ್.ಎ.ರಾಮದಾಸ್

ಮೈಸೂರು, ನ.22(ಆರ್‌ಕೆಬಿ)– ಜನಸಾಮಾನ್ಯರ ಕಾಮಧೇನುವಾದ ಸಹಕಾರ ಕ್ಷೇತ್ರವು ಕೋವಿಡ್ ಸಂದರ್ಭದಲ್ಲಿ ದೇಶದ ಆರ್ಥಿಕ ಸಮತೋಲನ ಹೊಂದಲು ಕಾರಣವಾಗಿದೆ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ಮೈಸೂರಿನ ಕುವೆಂಪುನಗರ ಆದಿಚುಂಚನಗಿರಿ ರಸ್ತೆಯಲ್ಲಿರುವ ಗಾನಭಾರತಿ ಸಂಗೀತ ಸಭಾಂಗಣದಲ್ಲಿ ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಆಯೋಜಿಸಿದ್ದ 69ನೇ ಅಖಿಲ ಭಾರತ ಸಹಕಾರ ಸಪ್ತಾಹ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಗೌರವಿಸಿ ಅವರು ಮಾತನಾಡಿದರು.



ಸಹಕಾರ ಕ್ಷೇತ್ರದಲ್ಲಿ ಪ್ರಾಮಾಣಿಕ ಕೈಗಳ ಕೊರತೆಯಿಂದ ಕೆಲವು ಸಮಸ್ಯೆಗಳು ಕಾಣುತ್ತಿವೆ. ಪ್ರಾಮಾಣಿಕವಾಗಿ ಕೆಲಸ ಮಾಡಿದಾಗ ಎತ್ತರಕ್ಕೆ ಬೆಳೆಯಲು ಅವಕಾಶವಿದೆ. ಸಹಕಾರ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಸಂಕಲ್ಪ ಮಾಡಬೇಕು. ಸಹಕಾರಿ ಬಂಧುಗಳು ನೆಮ್ಮದಿಯಿಂದ ಜೀವನ ನಡೆಸಲು ಅವಕಾಶ ಕಲ್ಪಿಸಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಎಸ್ಎಸ್ಎಲ್‌ಸಿ, ದ್ವಿತೀಯ ಪಿಯುಸಿ ಮತ್ತು ಸಂಗೀತ, ನೃತ್ಯ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಸಂಘದ ಹಿರಿಯ ನಾಗರಿಕರಿಗೆ, ವೈದ್ಯರಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ವಿಕ್ರಮ್ ಐಯ್ಯಂಗಾರ್ (ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ), ಆನಂದ್ (ಉತ್ತಮ ಶಿಕ್ಷಕ), ಶಶಿಶೇಖರ ದೀಕ್ಷಿತ್ (ಧಾರ್ಮಿಕ ಕ್ಷೇತ್ರ), ಆರ್.ಅನಂತ ರಾಮನ್ (ಸಹಕಾರ ಕ್ಷೇತ್ರ) ಎಚ್.ವಿ. ಎಲ್.ಎನ್. ಐಯ್ಯಂಗಾರ್, ಎಸ್.ಸುದರ್ಶನ್ (ಸಹಕಾರ ಕ್ಷೇತ್ರ) ಅವರನ್ನು ಗೌರವಿಸಲಾಯಿತು.

ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಸಿ.ವಿ.ಪಾರ್ಥಸಾರಥಿ, ಉಪಾಧ್ಯಕ್ಷ ಎಚ್.ಎಸ್.ಪ್ರಶಾಂತ್ ತಾತಾಚಾರ್, ಖಜಾಂಚಿ ಎಂ.ಡಿ.ಗೋಪಿನಾಥ್, ಕೆ.ನಾಗರಾಜ್, ಎಂ.ಆರ್.ಪ್ರೀತಮ್, ಎನ್. ಫಣಿರಾಜ್, ಎಸ್.ಎನ್.ನಾಗಶಂಕರ, ಎಂ.ಆರ್,ಬಾಲಕೃಷ್ಣ, ಕೆ.ಎನ್.ಅರುಣ್, ನಾಗೇಂದ್ರ ಯಾದವ್, ಎನ್.ಎಸ್.ರಂಗನಾಥ್, ರೇಖಾ, ಎಂ.ಎನ್,ಸೌಮ್ಯ, ಎಸ್.ರಾಜಮ್ಮ, ಜಿ.ಎನ್.ಸತೀಶ್, ಪ್ರಭಾರ ಕಾರ್ಯದರ್ಶಿ ವೀಣಾ ನಾಗಸುಂದರ್ ಇನ್ನಿತರರು ಉಪಸ್ಥಿತರಿದ್ದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ

ಅರಕೆರೆ ಅಧಿಪತಿಗಳ ಅಖಾಡದಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ...?

ವಿಧಾನಸಭಾ ಚುನಾವಣೆ –2023 ಒಂದು ಚಿತ್ರಣ

✍... ಎಂ.ಕೆ.ಮೋಹನ್‌ರಾಜ್


ರವೀಂದ್ರ ಶ್ರೀಕಂಠಯ್ಯ


ರಮೇಶ್‌ಬಾಬು


ಸಚ್ಚಿದಾನಂದ


ತಗ್ಗಹಳ್ಳಿ ವೆಂಕಟೇಶ್

ಮಂಡ್ಯ, ನ.22– ಕಳೆದ 3 ದಶಕಗಳಿಂದ ಎರಡೇ ಕುಟುಂಬಕ್ಕೆ ಅಧಿಕಾರ ಮೀಸಲಾಗಿರುವ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿಯೂ ಎ.ಸಿ.ಶ್ರೀಕಂಠಯ್ಯ ಹಾಗೂ ಎ.ಎಸ್.ಬಂಡಿಸಿದ್ದೇಗೌಡ ಕುಟುಂಬಗಳ ನಡುವೆ ಸಾಂಪ್ರದಾಯಿಕ ಹಣಾಹಣಿ ನಡೆಯಲಿದ್ದು, ಅರಕೆರೆಯ ಈ 2 ಪ್ರತಿಷ್ಠಿತ ಕುಟುಂಬದ ನಡುವಿನ ಪೈಪೋಟಿ ನಡುವೆ ಬಿಜೆಪಿಯಿಂದ ಹೊಸ ಮುಖ ಇಂಡುವಾಳು ಸಚ್ಚಿದಾನಂದ ಸ್ಪರ್ಧಿಸಲು ಸಜ್ಜಾಗಿದ್ದು, ಈ ಬಾರಿ ಶ್ರೀರಂಗಪಟ್ಟಣದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಡುವ ಸಾಧ್ಯತೆ ಬಲವಾಗಿದೆ.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ಮಂಡ್ಯ ಜಿಲ್ಲೆಯಲ್ಲೇ ಅತ್ಯಂತ ವೈಶಿಷ್ಟ್ಯಪೂರ್ಣ ಕ್ಷೇತ್ರವಾಗಿದ್ದು, ಈಗಾಗಲೇ ಹೇಳಿದಂತೆ ತಾಲೂಕಿನ ಅರಕೆರೆ ಎಂಬ ಬೃಹತ್ ಗ್ರಾಮದ 2 ಪ್ರತಿಷ್ಠಿತ ಕುಟುಂಬಗಳ ನಡುವೆ ನಾಲ್ಕೈದು ದಶಕಗಳಿಂದ ಅಧಿಕಾರಕ್ಕಾಗಿ ಪೈಪೋಟಿ ನಡೆಯುತ್ತಿದ್ದು, ಅವರಿಗೊಮ್ಮೆ, ಇವರಿಗೊಮ್ಮೆ ಅಧಿಕಾರ ಹಂಚಿ ಹೋಗಿದೆ.

ಕ್ಷೇತ್ರವನ್ನು ಅತೀ ಹೆಚ್ಚು ಬಾರಿ ಆಳಿದವರು ಎ.ಬಿ.ಬಂಡಿಸಿದ್ದೇಗೌಡ ಕುಟುಂಬ. ಬಂಡಿಸಿದ್ದೇಗೌಡರು 2 ಬಾರಿ ಕ್ಷೇತ್ರದ ಶಾಸಕರಾಗಿ, ಉಗ್ರಾಣ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದರೆ, ಇವರ ಅಕಾಲಿಕ ಮರಣದ ಬಳಿಕ ನಡೆದ ಉಪಚುನಾವಣೆ ಸೇರಿ ಇವರ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ 3 ಬಾರಿ ಶಾಸಕರಾಗಿ ಆಯ್ಕೆಯಾಗಿ, 2 ಬಾರಿ ನಿಗಮ ಮಂಡಳಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಜೊತೆಗೆ ಈ ದಂಪತಿ ಪುತ್ರ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ ಸಹ ಜೆಡಿಎಸ್‌ನಿಂದ 2 ಬಾರಿ ಶಾಸಕರಾಗಿದ್ದವರು. ಸದ್ಯ ಕಾಂಗ್ರೆಸ್‌ನಲ್ಲಿದ್ದಾರೆ.

ಇನ್ನು ಎ.ಸಿ.ಶ್ರೀಕಂಠಯ್ಯ ಕುಟುಂಬ ಸಹ ಬಂಡಿಸಿದ್ದೇಗೌಡರ ಕುಟುಂಬಕ್ಕೆ ರಾಜಕೀಯವಾಗಿ ತೀವ್ರ ಪೈಪೋಟಿ ನೀಡುತ್ತಾ ಬಂದಿದ್ದು, ಶ್ರೀಕಂಠಯ್ಯನವರ ತಂದೆ ಚುಂಚೇಗೌಡರು 1957ರಲ್ಲಿ ಕಾಂಗ್ರೆಸ್‌ನಿಂದ ಶಾಸಕರಾದರೆ, ಅವರ ಪುತ್ರ ಶ್ರೀಕಂಠಯ್ಯ ಕಾಂಗ್ರೆಸ್ ಸೇರಿದಂತೆ ಪಕ್ಷೇತರರಾಗಿ 8 ಬಾರಿ ಸ್ಪರ್ಧಿಸಿದ್ದರೂ ಅವರಿಗೆ ಗೆಲುವು ಸಿಗಲಿಲ್ಲ.

ಆದರೆ ಇವರ ಪತ್ನಿ ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ 1999 ರಲ್ಲಿ ಕಾಂಗ್ರೆಸ್‌ನಿಂದ ಶಾಸಕರಾದರೆ, ಈ ದಂಪತಿ ಪುತ್ರ ರವೀಂದ್ರ ಶ್ರೀಕಂಠಯ್ಯ 2018ರಲ್ಲಿ ಜೆಡಿಎಸ್‌ನಿಂದ ಶಾಸಕರಾಗಿದ್ದಾರೆ.

ಹೀಗೆ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಬಂಡಿಸಿದ್ದೇಗೌಡ ಹಾಗೂ ಶ್ರೀಕಂಠಯ್ಯ ಕುಟುಂಬದ ನಡುವೆ ರಾಜಕೀಯ ಪೈಪೋಟಿ ಏರ್ಪಟ್ಟಿದ್ದು, ಈ ಬಾರಿಯೂ ಅದು ಈ ಮುತ್ಸದ್ದಿ ನಾಯಕರ ಪುತ್ರರ ಮೂಲಕ ಮುಂದುವರೆಯಲಿದೆ. 2023ರ ವಿಧಾನಸಭಾ ಚುನಾವಣೆಗೆ ಜೆಡಿಎಸ್‌ನಿಂದ ಮತ್ತೊಮ್ಮೆ ಹಾಲಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಕಾಂಗ್ರೆಸ್‌ನಿಂದ ಮಾಜಿ ಶಾಸಕ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ ಕಣಕ್ಕಿಳಿಯುವುದು ಬಹುತೇಕ ಪಕ್ಕಾ ಆಗಿದೆ.

ಆದರೆ 2 ಪಾರ್ಟಿಯಲ್ಲೂ ಟಿಕೆಟ್ ಆಕಾಂಕ್ಷಿಗಳಿದ್ದು, ಜೆಡಿಎಸ್‌ನಲ್ಲಿ ಜಿಪಂ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ಟಿಕೆಟ್ ಕೇಳುತ್ತಿದ್ದರೆ, ಇತ್ತ ಕಾಂಗ್ರೆಸ್‌ನಲ್ಲಿ ರಮೇಶ್‌ಬಾಬು ಜೊತೆಗೆ ಹಿರಿಯ ವಕೀಲ ಪುಟ್ಟೇಗೌಡ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಪಾಲಹಳ್ಳಿ ಚಂದ್ರಶೇಖರ್ ರೇಸ್‌ನಲ್ಲಿದ್ದಾರೆ.

ಮುಂದುವರೆಯುತ್ತಾ ರವೀಂದ್ರ ವರ್ಚಸ್ಸು: ಬದಲಾದ ರಾಜಕೀಯ ಬೆಳವಣಿಗೆಯಲ್ಲಿ ಜೆಡಿಎಸ್ ನಲ್ಲಿದ್ದ ರಮೇಶ್ ಬಾಬು ಕಾಂಗ್ರೆಸ್‌ಗೆ ಜಿಗಿದ ಪರಿಣಾಮ ರವೀಂದ್ರ ಶ್ರೀಕಂಠಯ್ಯ ಜೆಡಿಎಸ್‌ಗೆ ಬಂದು ದಾಖಲೆಯ 45 ಸಾವಿರಕ್ಕೂ ಅಧಿಕ ಮತಗಳಿಂದ ಜಯ ಸಾಧಿಸಿದರು. ಶಾಸಕರಾದ ಬಳಿಕ ಕ್ಷೇತ್ರದಲ್ಲಿ ಸಾಕಷ್ಟು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕೊರೊನಾ ವೇಳೆ ಫುಡ್‌ಕಿಟ್, ಬೆಡ್, ಆಂಬುಲೆನ್ಸ್ ಒದಗಿಸುವ ಮೂಲಕ ಜನರ ಸಮಸ್ಯೆಗೆ ಸ್ಪಂದಿಸಿದ್ದಾರೆ ಎಂಬ ಒಳ್ಳೆ ಮಾತಿದೆ. ಕ್ಷೇತ್ರದೊಂದಿಗೆ ಒಡನಾಟದ ಜೊತೆಗೆ ವೈಯಕ್ತಿಕ ವರ್ಚಸ್ಸು ಹೊಂದಿರುವ ರವೀಂದ್ರ ಶ್ರೀಕಂಠಯ್ಯ ಈ ಬಾರಿ ವತ್ತೆ ಗೆಲ್ಲುತ್ತಾರಾ ಕಾದು ನೋಡಬೇಕಿದೆ.

ರಮೇಶ್‌ಬಾಬು ಮೇಲಿನ ಅನುಕಂಪ ವರದಾನವಾಗುತ್ತಾ: ಕಳೆದ ಚುನಾವಣೆ ಹೊಸ್ತಿಲಲ್ಲಿ ಮಾಜಿ ಶಾಸಕ ರವೇಶ್‌ಬಾಬು ಬಂಡಿಸಿದ್ದೇಗೌಡ ಕಾಂಗ್ರೆಸ್ ಸೇರಿ ಸೋಲುವ ಮೂಲಕ ಹ್ಯಾಟ್ರಿಕ್ ಗೆಲುವನ್ನು ತಪ್ಪಿಸಿಕೊಂಡರು. ಕಳೆದ ಚುನಾವಣೆಯ ಸೋಲಿನ ಅನುಕಂಪ ಇವರ ಮೇಲಿದೆ. ಜೊತೆಗೆ ಸರಳ ವ್ಯಕ್ತಿತ್ವ, ಜನರಿಗೆ ಸುಲಭವಾಗಿ ಸಿಗುತ್ತಾರೆ. ಕ್ಷೇತ್ರದ ಮತದಾರರು ಕರೆಯುವ ಪ್ರತಿ ಕಾರ್ಯಕ್ರಮಕ್ಕೆ ಇವರು ಮತ್ತು ಇವರ ಕುಟುಂಬ ಭಾಗಿಯಾಗುತ್ತಾರೆ. ಜನರ ಸಮಸ್ಯೆಗೆ ಸ್ಪಂದಿಸುತ್ತಾರೆ ಎಂಬ ಹೆಸರಿದೆ. ಬಂಡಿಸಿದ್ದೇಗೌಡ ಕುಟುಂಬ ಹಳೆಯ ಗೆಲುವಿನ ಗತವೈಭವವನ್ನು ಪುನರ್ ಸ್ಥಾಪಿಸುತ್ತಾ ಎಂಬುದಕ್ಕೆ 2023ರ ಚುನಾವಣಾ ಫಲಿತಾಂಶ ಸಾಕ್ಷಿಯಾಗಲಿದೆ.

ತಗ್ಗಹಳ್ಳಿ ವೆಂಕಟೇಶ್ ನಡೆ ಕುತೂಹಲ!

ಇನ್ನು ಕೊತ್ತತ್ತಿ ಭಾಗದ ಪ್ರಭಾವಿ ಜೆಡಿಎಸ್ ಮುಖಂಡ, ಪಕ್ಷದ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ನಡೆ ಕುತೂಹಲ ಮೂಡಿಸಿದ್ದು, ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿ ನಾನು ಸಹ ಪ್ರಬಲ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದು, ಹಾಲಿ ಶಾಸಕ ರವೀಂದ್ರಗೆ ಸಂಸತ್ ಟಿಕೆಟ್ ನೀಡಿ, ನನಗೆ ಶ್ರೀರಂಗಪಟ್ಟಣ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಮಾಡಿ ಕೊಡುವಂತೆ ಕೇಳಿದ್ದರು. ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ವಿರುದ್ಧ ಮುನಿಸಿಕೊಂಡು ಬೆಂಬಲಿಗರ ಸಭೆ ಕರೆದು ಪಕ್ಷದ ವಿರುದ್ಧವೇ ಅಸಮಾಧಾನ ಹೊರ ಹಾಕಿ ಕಾರ್ಯಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ, ಜಿಪಂ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ರಾಜೀನಾಮೆಯನ್ನು ಪಕ್ಷ ಅಂಗೀಕರಿಸಿಲ್ಲ. ಆದರೆ ಜೆಡಿಎಸ್ ಮನವೊಲಿಸಿ, ಇವರನ್ನು ಪಕ್ಷದಲ್ಲೇ ಉಳಿಸಿಕೊಳ್ಳುತ್ತಾ ಅಥವಾ ಕಾಂಗ್ರೆಸ್ ಇವರನ್ನು ತಮ್ಮತ್ತ ಸೆಳೆದುಕೊಳ್ಳುತ್ತಾ ಕಾದು ನೋಡಬೇಕು.

ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕರ ಪರಂಪರೆ

ವರ್ಷ	ಹೆಸರು	ಪಕ್ಷ
1952	ಕೆ.ಪುಟ್ಟಸ್ವಾಮಿ	ಕಾಂಗ್ರೆಸ್
1957	ಚುಂಚೇಗೌಡ	ಕಾಂಗ್ರೆಸ್
1962	ಎ.ಜಿ.ಬಂದೀಗೌಡ	ಕಾಂಗ್ರೆಸ್
1967	ಬಿ.ದೊಡ್ಡಬೋರೇಗೌಡ	ಪಕ್ಷೇತರ
1972	ದಮಯಂತಿ ಬೋರೇಗೌಡ	ಕಾಂಗ್ರೆಸ್
1978	ಎಂ.ಶ್ರೀನಿವಾಸ್	ಜನತಾ ಪಕ್ಷ
1983	ಎ.ಎಸ್.ಬಂಡಿಸಿದ್ದೇಗೌಡ	ಕ್ರಾಂತಿರಂಗ
1985	ಎ.ಎಸ್.ಬಂಡಿಸಿದ್ದೇಗೌಡ	ಜನತಾ ಪಕ್ಷ
1986	ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ	ಜನತಾ ಪಕ್ಷ (ಉಪಚುನಾವಣೆ)
1989	ದಮಯಂತಿ ಬೋರೇಗೌಡ	ಕಾಂಗ್ರೆಸ್
1994	ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ	ಜನತಾದಳ
1999	ಪಾರ್ವತಮ್ಮ ಶ್ರೀಕಂಠಯ್ಯ	ಕಾಂಗ್ರೆಸ್
2004	ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ	ಜೆಡಿಎಸ್
2008	ರಮೇಶ್‌ಬಾಬು ಬಂಡಿಸಿದ್ದೇಗೌಡ	ಜೆಡಿಎಸ್
2013	ರಮೇಶ್‌ಬಾಬು ಬಂಡಿಸಿದ್ದೇಗೌಡ	ಜೆಡಿಎಸ್
2018	ರವೀಂದ್ರ ಶ್ರೀಕಂಠಯ್ಯ	ಜೆಡಿಎಸ್

ಶ್ರೀರಂಗಪಟ್ಟಣ ಕ್ಷೇತ್ರದ ವಿಶೇಷ



ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ, ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳ ಪೈಕಿ ಅತಿ ಹೆಚ್ಚು ಮಹಿಳೆಯರೇ ಆಳ್ವಿಕೆ ನಡೆಸಿದ ಕ್ಷೇತ್ರ. ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ 3 ಬಾರಿ, ದಮಯಂತಿ ಬೋರೇಗೌಡ 2 ಬಾರಿ ಹಾಗೂ ಪಾರ್ವತಮ್ಮ ಶ್ರೀಕಂಠಯ್ಯ ಒಮ್ಮೆ ಈ ಕ್ಷೇತ್ರದ ಶಾಸಕರಾಗುವ ಮೂಲಕ 6 ಬಾರಿ ಮಹಿಳಾ ಶಾಸಕರು ಇಲ್ಲಿ ಗೆದ್ದಿರುವುದು ವಿಶೇಷ.

ಶ್ರೀರಂಗಪಟ್ಟಣ ತಾಲೂಕಿನಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಬೇಕಾಗಿರುವಷ್ಟು ಮತದಾರರು ಇಲ್ಲದ ಕಾರಣ ಅರ್ಧದಷ್ಟು ಮಂಡ್ಯ ತಾಲೂಕು ಸಹ ಶ್ರೀರಂಗಪಟ್ಟಣ ಕ್ಷೇತ್ರಕ್ಕೆ ಸೇರಲಿದ್ದು, ಶ್ರೀರಂಗಪಟ್ಟಣ ತಾಲೂಕಿನಿಂದ 50ರಷ್ಟು ಮತದಾರರಿದ್ದು, ಮಂಡ್ಯ ತಾಲೂಕಿನ ಕೆತ್ತೆದ್ದ ಭಾಗದ 2 ಹೋಬಳಿಗಳು ಸೇರಿದಂತೆ ಉಳಿದ 50 ರಷ್ಟು ಮತದಾರರು ಮಂಡ್ಯ ತಾಲೂಕಿನ ಗ್ರಾಮಾಂತರ ಭಾಗದ ಮತದಾರರಾಗಿದ್ದಾರೆ ಇಲ್ಲಿ ಆಯ್ಕೆಯಾಗುವ ಶಾಸಕರು ಶ್ರೀರಂಗಪಟ್ಟಣದ ಜೊತೆಗೆ ಮಂಡ್ಯ ಗ್ರಾಮಾಂತರವನ್ನೂ ಪ್ರತಿನಿಧಿಸುತ್ತಾರೆ.

ಇನ್ನು ಒಂದು ಉಪಚುನಾವಣೆ ಸೇರಿದಂತೆ ಒಟ್ಟು 16 ಚುನಾವಣೆ ಕಂಡಿರುವ ಶ್ರೀರಂಗಪಟ್ಟಣದಲ್ಲಿ ಬಂಡಿಸಿದ್ದೇಗೌಡರ ಬಿಟ್ಟರೆ ಉಳಿದ ಯಾವ ಶಾಸಕರಿಗೂ ಮಂತ್ರಿಯಾಗುವ ಭಾಗ್ಯ ಒದಗಿಲ್ಲ. ಜೊತೆಗೆ ಶ್ರೀರಂಗಪಟ್ಟಣದ ಯಾವ ಮುಖಂಡರಿಗೂ ಮಂಡ್ಯ ಲೋಕಸಭಾ ಕ್ಷೇತ್ರದ ಸಂಸದರಾಗುವ ಅವಕಾಶ ದೊರೆತಿಲ್ಲ. ನಟ ಅಂಬರೀಶ್ 2008ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದು, ಈ ಕ್ಷೇತ್ರದ ಮತ್ತೊಂದು ವಿಶೇಷ.

ಬಿಜೆಪಿಯಿಂದ ಸಚ್ಚಿದಾನಂದ ಸ್ಪರ್ಧೆ

ಸಂಸದೆ ಸುಮಲತಾ ಆಪ್ತ, ಸಮಾಜ ಸೇವಕ ಇಂಡುವಾಳು ಸಚ್ಚಿದಾನಂದ ಈ ಬಾರಿ ಬಿಜೆಪಿಯಿಂದ ಸ್ಪರ್ಧಿಸುವುದು ಖಚಿತವಾಗಿದ್ದು, ಇನ್ನಷ್ಟೇ ಪಕ್ಷ ಸೇರಬೇಕಿದೆ. 2018ರ ಚುನಾವಣೆಯ ಪ್ರಬಲ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಇವರಿಗೆ ಟಿಕೆಟ್ ಕೈ ತಪ್ಪಿತ್ತು.

2019ರ ಲೋಕಸಭಾ ಚುನಾವಣೆ ಸಂದರ್ಭ ಸುಮಲತಾ ಪರ ಪ್ರಚಾರಕ್ಕೆ ಇಳಿದ ಪರಿಣಾಮ ಕಾಂಗ್ರೆಸ್ ಪಕ್ಷದಿಂದ ಇವರನ್ನು ಉಚ್ಚಾಟಿಸಲಾಗಿತ್ತು. ಬಳಿಕ ಕ್ಷೇತ್ರದಲ್ಲಿ ಬಹಳಷ್ಟು ಓಡಾಡುತ್ತಿದ್ದ ಸಚ್ಚಿದಾನಂದ, ಎನ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ಮೂಲಕ ಕೊರೊನಾ ಸಂದರ್ಭ ಕಿಟ್ ವಿತರಿಸಿ, ರೈತರು ಅಥವಾ ಕೂಲಿ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಾಗ ಅಥವಾ ಮಳೆಯಿಂದ ಮನೆ ಕಳೆದುಕೊಂಡವರಿಗೆ ಪರಿಹಾರ ವಿತರಣೆ, ಗರ್ಭಿಣಿಯರು, ಋತುಮತಿಯಾದ ಮಹಿಳೆಯರಿಗೆ ಕಿಟ್ ವಿತರಣೆ ಮಾಡಿ ಕ್ಷೇತ್ರದಲ್ಲಿ ಹೆಸರು ಮಾಡಿದ್ದು, ಇತ್ತೀಚೆಗೆ ಅಂಬಿ ಸ್ಮರಣೋತ್ಸವ ಹೆಸರಿನಲ್ಲಿ ಬೃಹತ್ ಕಾರ್ಯಕ್ರಮ ಆಯೋಜಿಸಿ, ಶೀಘ್ರವೇ ಪಕ್ಷ ಸೇರುವ ಸುಳಿವು ನೀಡಿದ್ದಾರೆ. ಸಚ್ಚಿದಾನಂದ ಸ್ಪರ್ಧೆಯಿಂದ ಜೆಡಿಎಸ್ ಅಥವಾ ಕಾಂಗ್ರೆಸ್ ಯಾರಿಗೆ ಮುಳುವಾಗುತ್ತದೆ ಎಂಬುದು ಇನ್ನು ನಿಗೂಢ. ಮುಂದಿನ ಚುನಾವಣೆಗೆ ಸ್ಪರ್ಧಿಸಲು ಸಚ್ಚಿದಾನಂದ ಎಲ್ಲಾ ರೀತಿಯ ಸಿದ್ಧತೆ ನಡೆಸಿದ್ದು, ಬಿಜೆಪಿ ನಾಯಕರ ಸಂಪರ್ಕದಲ್ಲಿದ್ದಾರೆ.

ವಿಕಲಚೇತನ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಆರೋಪ: ಆರೋಪಿ ಬಂಧನ



ಮಂಡ್ಯ, ನ.22– ವಿಕಲಚೇತನ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ಆರೋಪದ ಮೇರೆಗೆ ಯೂನಸ್ ಪಾಷಾ(25) ಎಂಬಾತನನ್ನು, ನಾಗಮಂಗಲ ಟೌನ್ ಪೊಲೀಸರು ಬಂಧಿಸಿದ್ದಾರೆ ಎಂದು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನ.19ರಂದು ಬಾಲಕಿ ತಂದೆ ನಾಗಮಂಗಲ ಠಾಣೆಯಲ್ಲಿ ಈ ಸಂಬಂಧ ದೂರು ನೀಡಿದ್ದು, 13 ವರ್ಷದ ತನ್ನ ಪುತ್ರಿಯನ್ನು ಪುಸಲಾಯಿಸಿ ಯೂನಸ್ ಪಾಷಾ ಎಂಬಾತ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎಂದರು. ಆರೋಪಿಗೆ ತಮ್ಮ ಮಗಳ ಪರಿಚಯವಿದ್ದು, ಅದನ್ನೇ ದುರುಪಯೋಗಪಡಿಸಿಕೊಂಡ ಆತ ಮಗಳಿಗೆ ಮೊಬೈಲ್ ಕೊಡಿಸಿದ್ದಾನೆ. ಬಳಿಕ ಆಕೆಯ ಜೊತೆ ವೀಡಿಯೋ ಮತ್ತು ಆಡಿಯೋ ಕಾಲ್‌ನಲ್ಲಿ ಮಾತನಾಡಿ, ತಾನು ಹೇಳಿದಂತೆ ಕೇಳದೇ ಹೋದರೆ ಇದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಬೆದರಿಸಿದ್ದಾನೆ. ಬಳಿಕ ವೀಡಿಯೋ ಕಾಲ್‌ನಲ್ಲಿ ಅಂಗಾಂಗ ತೋರಿಸುವಂತೆ ಹೆದರಿಸಿದ್ದು, ಬಳಿಕ ತಾನು ಹೇಳಿದಂತೆ ಕೇಳು ಎಂದು ದುಂಬಾಲು ಬಿದ್ದು, ಕಳೆದ ನ10 ರಂದು ಬಾಲಕಿಗೆ ತಾಯಿ ಹಾಗೂ ಅಜ್ಜಿಯ ಊಟದಲ್ಲಿ ನಿದ್ರೆ ಮಾತ್ರೆ ಹಾಕುವಂತೆ ರಾತ್ರಿ 10 ಗಂಟೆ ಸಂದರ್ಭ ಆತ ಮಾತ್ರೆ ತಂದುಕೊಟ್ಟಿದ್ದಾನೆ ಎಂದು ದೂರಿನಲ್ಲಿ ಹೇಳಿದ್ದಾರೆ ಎಂದರು. ಬಳಿಕ ಬಾಲಕಿ ನ.11ರಂದು ಊಟದಲ್ಲಿ ಅಜ್ಜಿ ಮತ್ತು ತಾಯಿಗೆ ನಿದ್ರೆ ಮಾತ್ರೆ ಹಾಕಿದ್ದು, ಅದೇ ದಿನ ರಾತ್ರಿ 12ಗಂಟೆ ಸಮಯದಲ್ಲಿ ಮನೆಗೆ ಬಂದು ಯೂನಸ್ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂದು ಬಾಲಕಿ ತಂದೆ ತಿಳಿಸಿದ್ದಾರೆ ಎಂದು ಎಸ್ಪಿ ವಿವರಿಸಿದರು.

ನಿನ್ನನ್ನು ಮದುವೆಯಾಗಬೇಕೆಂದರೆ ನಮ್ಮ ಧರ್ಮಕ್ಕೆ ಮತಾಂತರವಾಗು ಎಂದಿದ್ದಾನೆ ಬಳಿಕ ಬಾಲಕಿ ತಂದೆಯೊಂದಿಗೆ ಎಲ್ಲಾ ವಿಚಾರವನ್ನು ಹೇಳಿದ್ದು, ನ.19ರಂದು ಈ ಬಗ್ಗೆ ದೂರು ನೀಡಿದ್ದಾರೆ. ದೂರಿನನ್ವಯ ಆರೋಪಿ ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದು, ಹೆಚ್ಚಿನ ತನಿಖೆ ಕೈಗೊಂಡಿದ್ದೇವೆ ಎಂದರು.

ಡಿಂಕಾ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಪಾಂಡವಪುರ, ನ.22– ತಾಲೂಕಿನ ಡಿಂಕಾ ಗ್ರಾಪಂ ಅಧ್ಯಕ್ಷೆಯಾಗಿ ಭಾಗ್ಯಮ್ಮ, ಉಪಾಧ್ಯಕ್ಷರಾಗಿ ಜಯರಾಮು ಮಂಗಳವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ರತಿಪಾಲಾಕ್ಷ ಹಾಗೂ ಉಪಾಧ್ಯಕ್ಷ ನಂಜೇಗೌಡರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಭಾಗ್ಯಮ್ಮ, ಉಪಾಧ್ಯಕ್ಷ ಸ್ಥಾನಕ್ಕೆ ಜಯರಾಮು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ತಾಪಂ ಇಓ ಲೋಕೇಶ್ ಮೂರ್ತಿ ಘೋಷಿಸಿದರು.

ಈ ವೇಳೆ ರೈತ ಮುಖಂಡರಾದ ಸುನೀತ ಪುಟ್ಟಣ್ಣಯ್ಯ, ಗ್ರಾಪಂ ಸದಸ್ಯರಾದ ಮಮತ, ಎಸ್.ರವಿ, ಮಹದೇವಪ್ಪ, ಚಿಕ್ಕಯ್ಯ, ಜಯರಾಮ, ಮಹದೇವಮ್ಮ, ಹೆಚ್.ಎಸ್.ಮಹದೇವ, ಮುತ್ತಮ್ಮ, ಪಿಡಿಓ ಸ್ವಾಮಿಗೌಡ, ಕಾರ್ಯದರ್ಶಿ ಕುಮಾರ್, ಮುಖಂಡರಾದ ದೊಡ್ಡರಾಮೇಗೌಡ, ರಮೇಶ್, ಪಾಲಾಕ್ಷ, ಚನ್ನಪ್ಪ, ರೇವಣ್ಣ, ಅನಿಲ್, ಪುಟ್ಟರಾಜು, ರಾಜೇಶ್, ಸೋಮಣ್ಣ, ಕೇಬಲ್ ಮಂಜು, ಪುಟ್ಟನಂಜು, ತಮ್ಮಯ್ಯ, ಶೇಖರಪ್ಪ, ಡಿ.ಎಸ್.ಸ್ವಾಮಿ, ಮಂಜು, ರಾಜೇಶ್ ಸೇರಿದಂತೆ ಗ್ರಾಪಂ ಸಿಬ್ಬಂದಿ ಹಾಜರಿದ್ದರು.

ಟೈಂ ಸೆಟ್ ಮಾಡಿ ಬಾಂಬ್ ಸ್ಫೋಟಿಸುವುದ ಕಲಿತದ್ದೇ ಮೈಸೂರಲ್ಲಿ!


ಮೊಹಮದ್ ಶಾರಿಕ್

ಮೈಸೂರು, ನ. 22(ಆರ್‌ಕೆ)– ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟಿಸಿ, ಸಿಕ್ಕಿಬಿದ್ದಿರುವ ಶಂಕಿತ ಉಗ್ರ ಮೊಹಮದ್ ಶಾರಿಕ್, ಟೈಂ ಸೆಟ್ ಮಾಡಿ ಬಾಂಬ್ ಸ್ಫೋಟಿಸುವುದನ್ನು ಕಲಿತದ್ದೇ ಮೈಸೂರಿನಲ್ಲಿ ಎಂಬ ಆತಂಕಕಾರಿ ವಿಷಯ ಬಯಲಾಗಿದೆ.

ಮೈಸೂರಿನ ಚಾಮರಾಜ ಜೋಡಿ ರಸ್ತೆಯ, ಮೈಸೂರು ಮಹಾನಗರ ಪಾಲಿಕೆ ಕಚೇರಿ ಸಮೀಪ ಕಂಪ್ಯೂಟರ್ ಟ್ರೈನಿಂಗ್ ಸೆಂಟರ್‌ವೊಂದರಲ್ಲಿ 45 ದಿನಗಳ ತರಬೇತಿಗೆ ಸೇರಿಕೊಂಡಿದ್ದ ಶಾರಿಕ್, ನಕಲಿ ಆಧಾರ್ ಕಾರ್ಡ್ ಕೊಟ್ಟು ಅಲ್ಲಿಯೂ ತನ್ನ ಅಸಲಿ ಯತ್ತು ಬಿಟ್ಟುಕೊಟ್ಟಿರಲಿಲ್ಲ. ಆಗಿಂದಾಗ್ಗೆ ಗೈರು ಹಾಜರಾಗುತ್ತಿದ್ದ ಆತ, ಟ್ರೈನಿಂಗ್ ಕ್ಲಾಸ್‌ಗೆ ಬಂದಾಗ ಟೈಂ ಸೆಟ್ ಮಾಡಿ ಬಾಂಬ್ ಸ್ಫೋಟದ ಸಂಬಂಧ ಅದೇ ಕಂಪ್ಯೂಟರ್ ಸೆಂಟರ್‌ನಲ್ಲಿ ರಹಸ್ಯವಾಗಿ ತಾಂತ್ರಿಕ ಮಾಹಿತಿಗಳನ್ನು ಪಡೆಯುತ್ತಿದ್ದ ಎನ್ನಲಾಗಿದೆ. ಸದಾ ಆತಂಕದಲ್ಲೇ ಇರುತ್ತಿದ್ದ ಶಾರಿಕ್, ಯಾವಾಗಲೂ ಬಾಗಿಲ ಕಡೆಯೇ ನೋಡುತ್ತಿದ್ದುದ್ದನ್ನು ಗಮನಿಸಿದ್ದೇನೆ ಎಂದು ಸೆಂಟರ್ ಮಾಲೀಕ ಪ್ರಸಾದ್ ತಿಳಿಸಿದ್ದಾರೆ.

ಬಾಂಬ್ ಸ್ಫೋಟಗೊಳ್ಳುವ ಎರಡು ದಿನ ಮುಂಚೆ ಫೋನ್ ಮಾಡಿದ್ದ ಆತ, 'ನನ್ನ ಕನ್ನಡಕ ಹಾಳಾಗಿದೆ, ನಾಳೆ ಹೊಸ ಕನ್ನಡಕ ಖರೀದಿಸಿ ತರಗತಿಗೆ ಬರುತ್ತೇನೆ' ಎಂದು ಹೇಳಿದ್ದ. ನಮ್ಮ ಬಳಿ ಇದ್ದ ಆತನ ಫೋಟೋದಿಂದಲೇ ಮಂಗಳೂರಿನ ಬಾಂಬ್ ಸ್ಫೋಟದ ರೂವಾರಿ ಶಾರಿಕ್ ಎಂಬುದು ಪತ್ತೆಯಾಯಿತು ಎಂದು ಅವರು ತಿಳಿಸಿದ್ದಾರೆ. ಭಯೋತ್ಪಾದನೆ ಸಾರುವ ಗೋಡೆ ಬರಹ ಸೇರಿದಂತೆ ಇನ್ನಿತರ ಉಗ್ರ ಕೃತ್ಯ ಬಿಂಬಿಸುವ ಪ್ರಚೋದಕತೆ ಎಸಗುತ್ತಿದ್ದ ಶಂಕಿತ ಉಗ್ರ ಮೊಹಮದ್ ಶಾರಿಕ್ ಸ್ನೇಹಿತ ಮೊಹಮದ್ ರುಹುಲ್ಲಾ, ಸೈಯದ್ ಸಹ ಕಂಪ್ಯೂಟರ್ ಸೆಂಟರ್‌ಗೆ ಬರುತ್ತಿದ್ದರು. ಸೈಯದ್ ಕೋರ್ಸ್ ಮುಗಿಸಿ ಸರ್ಟಿಫಿಕೇಟ್ ಪಡೆದಿದ್ದರೆ, ಶಾರಿಕ್ ಮಾತ್ರ ತರಬೇತಿ ಪೂರ್ಣಗೊಳಿಸಿರಲಿಲ್ಲ ಎಂದು ತಿಳಿದು ಬಂದಿದೆ. ಕಂಪ್ಯೂಟರ್ ಮತ್ತು ಮೊಬೈಲ್ ರಿಪೇರಿ ತರಬೇತಿ ನೆಪದಲ್ಲಿ ವಿಧ್ವಂಸಕ ಕೃತ್ಯದ ಬಗ್ಗೆ ಮಾಹಿತಿಯನ್ನು ಗುಪ್ತವಾಗಿ ಸಂಗ್ರಹಿಸುತ್ತಿದ್ದ ಶಾರಿಕ್, ಸದಾ ಇಂಟರ್‌ನೆಟ್‌ನಲ್ಲೇ ಮಗ್ನನಾಗಿರುತ್ತಿದ್ದ. ಬಾಂಬ್ ಸ್ಫೋಟದಲ್ಲಿ ಗಂಟಲು ಬಳಿ ಸುಟ್ಟ ಗಾಯಗಳಾಗಿರುವುದರಿಂದ ಆತ ಮಾತನಾಡುವ ಸ್ಥಿತಿಯಲ್ಲಿಲ್ಲ. ಗುಣಮುಖನಾದ ಮೇಲೆ ಪೊಲೀಸರು ಆತನಿಂದ ಮತ್ತಷ್ಟು ಸ್ಫೋಟಕ ಮಾಹಿತಿಗಳನ್ನು ಕಲೆ ಹಾಕಲು ನಿರ್ಧರಿಸಿದ್ದಾರೆ ಎಂದು ಹೇಳಲಾಗಿದೆ.

ಪ್ರಕರಣದ ಹಿನ್ನೆಲೆಯಲ್ಲಿ ಶಾರಿಕ್ ವಾಸವಿದ್ದ ಮೈಸೂರಿನ ಲೋಕನಾಯಕ ನಗರದ ಮನೆಯ ಕೊಠಡಿಯನ್ನು ಸೀಜ್ ಮಾಡಿದ್ದು, ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ, ಕಟ್ಟೆಚ್ಚರ ವಹಿಸಲಾಗಿದೆ. ಮೈಸೂರಿನಲ್ಲಿ ತಯಾರಿಸಿದ್ದ ಬಾಂಬ್ ಅನ್ನು ಮಂಗಳೂ ರಲ್ಲಿ ಸ್ಫೋಟಿಸಿರುವ ಶಾರಿಕ್ ಕೃತ್ಯಕ್ಕೆ ಇನ್ನೂ ಹಲವರು ಸಾಥ್ ನೀಡಿರುವ ಸಾಧ್ಯತೆ ಇದ್ದು, ಎನ್‌ಐಎ ಅಧಿಕಾರಿಗಳ ನಿರ್ದೇಶನದಂತೆ ಮೈಸೂರು, ಮಂಗಳೂರು ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಆತನೊಂದಿಗೆ ನಂಟು ಹೊಂದಿದ್ದವರ ಶೋಧ ಕಾರ್ಯ ನಡೆಸುತ್ತಿರುವ ತನಿಖಾಧಿಕಾರಿಗಳು ಗುಪ್ತವಾಗಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಅಧಿಕಾರಿಗಳ ಆಸಕ್ತಿ

ಶಾಲೆ ದತ್ತು ಪಡೆದು ವಿಶೇಷ ಕಾರ್ಯಕ್ರಮ ರೂಪಿಸಲು ತಯಾರಿ

▶ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಶೀಘ್ರವೇ ಸಭೆ ▶ ಶಾಲೆಗಳಲ್ಲಿ 80 ಅಂಶಗಳ ಕಾರ್ಯಕ್ರಮ

ಮೈಸೂರು, ನ.22(ಎಸ್‌ಬಿಡಿ)– ಮೈಸೂರು ಜಿಲ್ಲೆ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪಟ್ಟಿಯಲ್ಲಿ ಮೊದಲ 10 ಸ್ಥಾನದೊಳಗಿರಬೇಕೆಂಬ ಗುರಿಯೊಂದಿಗೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಶೈಕ್ಷಣಿಕ ಕೇಂದ್ರವೆಂದೇ ಗುರುತಿಸಿಕೊಂಡಿರುವ ಮೈಸೂರು, ಹಲವು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ನಿರೀಕ್ಷಿತ ಸಾಧನೆ ಮಾಡಿಲ್ಲ. ಹಾಗಾಗಿ 2022–23ನೇ ಸಾಲಿನಲ್ಲಿ ಟಾಪ್ 10 ಪಟ್ಟಿಯಲ್ಲಿ ಮೈಸೂರು ಜಿಲ್ಲೆಯನ್ನು ಕಾಣಬೇಕೆಂಬ ನಿಟ್ಟಿನಲ್ಲಿ ಅಧಿಕಾರಿಗಳಿಂದ ಶಾಲೆ ದತ್ತು ಸ್ವೀಕಾರ, 80 ಅಂಶಗಳ ಕಾರ್ಯಕ್ರಮ ಸೇರಿದಂತೆ ಪರಿಣಾಮಕಾರಿ ಕ್ರಮಗಳಿಗೆ ಸಿದ್ಧತೆ ನಡೆದಿದೆ. ಶಾಲೆಗಳ ಪ್ರಗತಿ ಸಂಬಂಧ ಪರಿವೀಕ್ಷಣೆಗೂ ತಂಡಗಳು ಸಜ್ಜಾಗಿವೆ.



80 ಅಂಶಗಳ ಕಾರ್ಯಕ್ರಮ: ಎಲ್ಲಾ ಶಿಕ್ಷಕರೂ ನಿಗದಿತ ಸಮಯದೊಳಗೆ ಪಠ್ಯ ಪ್ರವಚನ ಪೂರ್ಣಗೊಳಿಸಬೇಕು. ಸರಣಿ ಪರೀಕ್ಷೆಗಳನ್ನು ನಡೆಸಬೇಕು. ವಿದ್ಯಾರ್ಥಿಗಳ ಪ್ರಗತಿ ಬಗ್ಗೆ ಪೋಷಕರಿಗೆ ಮಾಹಿತಿ ನೀಡಲು ಅವರೊಂದಿಗೆ ಸಂಪರ್ಕದಲ್ಲಿರಬೇಕು. ವಿಷಯದ ಬಗ್ಗೆ ಹೆಚ್ಚು ತಿಳಿದಿರುವ ಬೇರೊಂದು ಸರ್ಕಾರಿ ಶಾಲೆ ಶಿಕ್ಷಕರನ್ನು ಆಹ್ವಾನಿಸಿ ಅವರಿಂದ ಮಾದರಿ ಪಾಠದ ವ್ಯವಸ್ಥೆ ಮಾಡಬೇಕು. ತಮ್ಮ ಶಾಲೆ ವಿದ್ಯಾರ್ಥಿಗಳಿಗೆ ಯಾವ ಪರೀಕ್ಷಾ ಕೇಂದ್ರ ನಿಗದಿಯಾಗುತ್ತದೆ ಎಂಬ ಮಾಹಿತಿ ಮುಂಚಿತವಾಗಿಯೇ ತಿಳಿಯುವುದರಿಂದ ಅದೇ ಕೇಂದ್ರದಲ್ಲಿ ಎರಡು ಪರೀಕ್ಷೆಗಳನ್ನು ನಡೆಸುವ ಮೂಲಕ ಅವರಲ್ಲಿರುವ ಭಯ ನಿವಾರಣೆ ಮಾಡಬೇಕು. ಪ್ರತಿ ತಾಲೂಕು ಟಾಪರ್ ವಿದ್ಯಾರ್ಥಿಗೆ ಲ್ಯಾಪ್‌ಟಾಪ್ ನೀಡುವುದು ಸೇರಿದಂತೆ ಇಲಾಖೆಯಿಂದ ಸಿಗುವ ಸೌಲಭ್ಯದ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಇಂತಹ ಮಹತ್ವದ 80 ಅಂಶಗಳ ಅನುಷ್ಠಾನ ಪ್ರಗತಿಯಲ್ಲಿದೆ.

ಪರಿಶೀಲನೆಗೆ ತಂಡ ಸಜ್ಜು: ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ನೀಡಲಾಗಿರುವ 80 ಅಂಶಗಳ ಕಾರ್ಯಕ್ರಮದ ಅನುಷ್ಠಾನವನ್ನು ಪರಿಶೀಲಿಸಲು ಶಿಕ್ಷಣ ಇಲಾಖೆ ಅಧಿಕಾರಿಗಳ ತಂಡ ಸಜ್ಜಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ(ಡಿಡಿಪಿಐ), ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿ (ಡಿವೈಪಿಸಿ), ಶಿಕ್ಷಣ ಅಧಿಕಾರಿ(ಬಿಓ) ಹಾಗೂ ಎಲ್ಲಾ ವಿಷಯಗಳ ನಿರೀಕ್ಷಕರ(ಸಬ್ಜೆಕ್ಟ್ ಇನ್‌ಸ್ಪೆಕ್ಟರ್)ನ್ನೊಳಗೊಂಡ ತಂಡಗಳು ಶಾಲೆಗೆ ಭೇಟಿ ನೀಡಲಿವೆ. ಸರ್ಕಾರಿ ಶಾಲೆ, ಅನುದಾನಿತ ಶಾಲೆ ಹಾಗೂ ಖಾಸಗಿ ಶಾಲೆಗಳು ಸೇರಿದಂತೆ ಹಂತಹಂತವಾಗಿ ಜಿಲ್ಲೆಯ ಎಲ್ಲಾ ಶಾಲೆಗಳಿಗೂ ಭೇಟಿ ನೀಡಿ, ಪ್ರಗತಿ ಪರಿಶೀಲನೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಶಿಕ್ಷಕರ ಸಭೆ; ಪರೀಕ್ಷೆ: ಜಿಲ್ಲೆಯ ಎಲ್ಲಾ ತಾಲೂಕು ಮಟ್ಟದಲ್ಲಿ ವಿಷಯವಾರು ಶಿಕ್ಷಕರ ಸಭೆ ನಡೆಸಿ, ಈವರೆಗಿನ ಪ್ರಗತಿ ಬಗ್ಗೆ ಮಾಹಿತಿ ತಿಳಿಯುವುದರ ಜೊತೆಗೆ ಅಗತ್ಯ ಮಾರ್ಗದರ್ಶನ ನೀಡಲಾಗುವುದು. ಗಣಿತ, ವಿಜ್ಞಾನ, ಕನ್ನಡ, ಇಂಗ್ಲಿಷ್, ಹಿಂದಿ, ಸಮಾಜ ವಿಜ್ಞಾನ ವಿಷಯಗಳ ಶಿಕ್ಷಕರೊಂದಿಗೆ ಪ್ರತ್ಯೇಕ ಸಭೆಯಲ್ಲಿ ಕಲಿಕಾ ಹಂತವನ್ನು ಸುಧಾರಿಸುವ ಬಗ್ಗೆ ವಿಚಾರ ವಿನಿಮಯಕ್ಕೆ ಅನುವು ಮಾಡಿಕೊಡಲಾಗುವುದು. ಅಲ್ಲದೆ ವಿದ್ಯಾರ್ಥಿಗಳಿಗೆ 3–5 ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಇನ್ನು ಎರಡು ವಾರದೊಳಗೆ ಶಿಕ್ಷಕರ ಸಭೆ ಕರೆಯಲಿದ್ದು, ಮಕ್ಕಳ ಪೂರ್ವ ಸಿದ್ಧತಾ ಪರೀಕ್ಷೆಗೆ ಪ್ರಶ್ನೆ ಪತ್ರಿಕೆ ಸಿದ್ಧಗೊಳ್ಳುತ್ತಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಾಮಚಂದ್ರರಾಜೇ ಅರಸ್ ತಿಳಿಸಿದ್ದಾರೆ.

ಕೊಪ್ಪಳ ಮಾದರಿ ಚಿಂತನೆ: ಸಣ್ಣ ಶಾಲೆಗಳನ್ನು ಒಟ್ಟುಗೂಡಿಸಿ ಅಭಿವೃದ್ಧಿಪಡಿಸುವ ಯೋಜನೆ ಕೊಪ್ಪಳದಲ್ಲಿ ಜಾರಿಯಲ್ಲಿದೆ. ಆ ಸೂತ್ರವನ್ನು ಮೈಸೂರು ಜಿಲ್ಲೆಯಲ್ಲೂ ಅನುಸರಿಸುವ ಸಂಬಂಧ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿ(ದಿಶಾ) ಸಭೆಯಲ್ಲಿ ಚರ್ಚೆ ನಡೆದಿತ್ತು. ಜಿಲ್ಲಾ ಪಂಚಾಯಿತಿ ಅನುದಾನದಲ್ಲಿ ಶೌಚಾಲಯ, ಕೊಠಡಿ ನಿರ್ಮಾಣ, ಬೆಂಚು, ಮೇಜು ವ್ಯವಸ್ಥೆ ಸೇರಿದಂತೆ ಶಾಲೆಗಳ ಸಮಗ್ರ ಉನ್ನತೀಕರಿಸಬಹುದು ಎಂದು ಸಂಸದ ಪ್ರತಾಪ್ ಸಿಂಹ ಸಭೆಯಲ್ಲಿ ತಿಳಿಸಿದ್ದರು. ಈ ನಿಟ್ಟಿನಲ್ಲಿ ಜಿಲ್ಲೆಯ 34 ಶಾಲೆಗಳನ್ನು ಗುರುತಿಸಲಾಗಿದೆ. ಆದರೆ ಈ ಸಂಬಂಧ ಗ್ರಾಮ ಸಭೆ, ಎಸ್‌ಡಿಎಂಸಿ ಸಭೆ, ಚುನಾಯಿತ ಪ್ರತಿನಿಧಿಗಳ ಸಭೆಯಲ್ಲಿ ಪ್ರಸ್ತಾಪಿಸಿ, ಅವರ ಅಭಿಪ್ರಾಯ ಸಂಗ್ರಹಿಸಿ ಎಲ್ಲರ ಒಪ್ಪಿಗೆಯೊಂದಿಗೆ ಮುಂದುವರೆಯಲು ತೀರ್ಮಾನಿಸಲಾಗಿದೆ.



"ಅಧಿಕಾರಿಗಳು ಶಾಲೆಗಳನ್ನು ದತ್ತು ಪಡೆಯಬೇಕೆಂಬುದು ಶಿಕ್ಷಣ ಸಚಿವರ ಆಶಯ. ಜೊತೆಗೆ 80 ಅಂಶಗಳ ಕಾರ್ಯಕ್ರಮ ಸೇರಿದಂತೆ ಹಲವು ಪರಿಣಾಮಕಾರಿ ಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಸರಿಸಲಾಗುತ್ತಿದೆ. 232 ಸರ್ಕಾರಿ, 134 ಅನುದಾನಿತ, 354 ಖಾಸಗಿ ಶಾಲೆ, 8 ಕೇಂದ್ರೀಯ ಶಾಲೆ, 47 ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಶಾಲೆ ಸೇರಿ ಜಿಲ್ಲೆಯ ಒಟ್ಟು 775 ಶಾಲೆಗಳಲ್ಲೂ ಉತ್ತಮ ಫಲಿತಾಂಶ ಗಳಿಸುವ ಗುರಿ ಹೊಂದಿದ್ದೇವೆ. ಈ ನಿಟ್ಟಿನಲ್ಲಿ ಡಿಸೆಂಬರ್‌ನೊಳಗೆ ಪಠ್ಯ ಪ್ರವಚನ ಪೂರ್ಣಗೊಳಿಸಿ ನಂತರ ಪುನರಾವರ್ತನೆ ತರಗತಿ ನಡೆಸುವಂತೆ ಶಿಕ್ಷಕರಿಗೆ ಸೂಚಿಸಲಾಗಿದೆ.


–ರಾಮಚಂದ್ರರಾಜೇ ಅರಸ್, ಡಿಡಿಪಿಐ

ಶಾಲೆಗಳು ದತ್ತು

ಜಿಲ್ಲಾಧಿಕಾರಿಗಳು, ಜಿಪಂ ಸಿಇಓ, ನಗರ ಪಾಲಿಕೆ ಆಯುಕ್ತರು, ವಲಯ ಆಯುಕ್ತರು, ಡಿಡಿಪಿಐ, ತಾಪಂ ಇಓ, ಎಡಿಸಿ, ಎಸಿ, ತಹಸೀಲ್ದಾರ್, ಎಲ್ಲಾ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿದಂತೆ ಹಲವು ಅಧಿಕಾರಿಗಳು ಜಿಲ್ಲೆಯ ಒಂದೊಂದು ಶಾಲೆಯನ್ನು ದತ್ತು ಪಡೆಯಲಿದ್ದಾರೆ. ಹಿಂದಿನ ವರ್ಷಗಳ ಎಸ್‌ಎಸ್‌ಎಲ್‌ಸಿ ಫಲಿತಾಂಶ ತೃಪ್ತಿದಾಯಕವಲ್ಲದ 165 ಶಾಲೆಗಳನ್ನು, ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳು ಪಟ್ಟಿ ಮಾಡಿದ್ದು, ಈಗಾಗಲೇ ಅಧಿಕಾರಿಗಳಿಗೆ ಒಂದೊಂದು ಶಾಲೆಯನ್ನು ನಿಗದಿಗೊಳಿಸಲಾಗಿದೆ

ಈ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಶಾಲೆಗಳ ದತ್ತು ಕಾರ್ಯಕ್ರಮದ ಬಗ್ಗೆ ವಿವರಣೆ ನೀಡಿದ ನಂತರ ಕಾರ್ಯರೂಪಕ್ಕೆ ಬರಲಿದೆ. ಇದಕ್ಕಾಗಿ ಒಂದು ನಮೂನೆಯನ್ನು ಸಿದ್ಧಪಡಿಸಲಾಗಿದ್ದು, ಅದರಂತೆ ಅಧಿಕಾರಿಗಳು ತಮ್ಮ ಶಾಲೆಗೆ ತೆರಳಿ ಅಲ್ಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಅವಲೋಕಿಸಲಿದ್ದಾರೆ. ತಿಂಗಳಲ್ಲಿ ಕನಿಷ್ಟ ಎರಡು ಬಾರಿಯಾದರೂ ತಮ್ಮ ಶಾಲೆಗೆ ಭೇಟಿ ನೀಡಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಶಿಕ್ಷಣ ಇಲಾಖೆಗೆ ಮಾಹಿತಿ ನೀಡಲಿದ್ದಾರೆ. 'ಪರೀಕ್ಷೆ ಹಬ್ಬ, ಅದನ್ನು ಸಂಭ್ರಮಿಸಿ' ಎಂದು ಮಕ್ಕಳಲ್ಲಿ ಸ್ಫೂರ್ತಿ ತುಂಬಲಿದ್ದಾರೆ.

ಇಂದು ಮಂಗಳೂರಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಭೇಟಿ



ಬೆಂಗಳೂರು: ಬಾಂಬ್ ಬ್ಲಾಸ್ಟ್ ಪ್ರಕರಣದ ಸಂಬಂಧ ನಾಳೆ (ಬುಧವಾರ) ಗೃಹ ಸಚಿವ ಆರಗ ಜ್ಞಾನೇಂದ್ರ ಮಂಗಳೂರಿಗೆ ಭೇಟಿ ನೀಡುತ್ತಿದ್ದಾರೆ. ರಾಜ್ಯ ಪೊಲೀಸ್ ಮುಖ್ಯಸ್ಥ ಪ್ರವೀಣ್‌ಸೂದ್ ಹಾಗೂ ಎಡಿಜಿಪಿ ಅಲೋಕ್ ಕುಮಾರ್ ಸೇರಿದಂತೆ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಲಿದ್ದಾರೆ. ಭೇಟಿ ವೇಳೆ ಸಚಿವರು, ಬಾಂಬ್ ಸ್ಫೋಟ ಘಟನೆಯಿಂದ ಗಾಯಗೊಂಡ ಆಟೋರಿಕ್ಷಾ ಚಾಲಕನನ್ನೂ ಭೇಟಿಯಾಗಿ, ಸಾಂತ್ವನ ಹೇಳಲಿದ್ದಾರೆ. ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ಮಂಗಳೂರು ಆಟೋ ರಿಕ್ಷಾ ಬಾಂಬ್ ಸ್ಫೋಟ ಘಟನೆಯನ್ನು ರಾಜ್ಯ ಪೊಲೀಸರು ಗಂಭೀರವಾಗಿ ಪರಿಗಣಿಸಿ ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಭಯೋತ್ಪಾದನೆ ಚಟುವಟಿಕೆಗಳ ಆಮೂಲಾಗ್ರವಾಗಿ ತನಿಖೆ ಮಾಡಿ, ದ್ರೋಹಿಗಳನ್ನು ಮಟ್ಟ ಹಾಕಲು ಪೊಲೀಸರು ಶ್ರಮಿಸುತ್ತಿದ್ದಾರೆ. ರಾಷ್ಟ್ರೀಯ ತನಿಖಾ ದಳವೂ ಇದಕ್ಕೆ ಸಹಕರಿಸುತ್ತಿದೆ ಎಂದು ಹೇಳಿದ್ದಾರೆ. ಈವರೆಗಿನ ಮಾಹಿತಿ ಆಧರಿಸಿ, ರಾಜ್ಯ ಪೊಲೀಸರು ಉಗ್ರಗಾಮಿ ಚಟುವಟಿಕೆಗಳಿಗೆ ಸಹಕರಿಸಿದವರ ವಿರುದ್ಧ ತನಿಖೆ ತೀವ್ರಗೊಳಿಸಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಾರೀಕ್‌ನಿಂದ ಇನ್ನೂ ಹೆಚ್ಚಿನ ಮಾಹಿತಿಗಳು ಹೊರಬರಬೇಕಿದೆ ಎಂದು ಹೇಳಿದ್ದಾರೆ.

ವಿದ್ಯಾರ್ಥಿ ರನ್ ಮ್ಯಾರಥಾನ್



ಮೈಸೂರು, ನ.22– ಮೈಸೂರಿನ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ 'ವಿದ್ಯಾರ್ಥಿ ರನ್ ಮ್ಯಾರಥಾನ್' ಏರ್ಪಡಿಸಲಾಗಿತ್ತು.

ಹರಿ ವಿದ್ಯಾಲಯ, ಅಲಯನ್ಸ್ ಸ್ಕ್ವೇರ್, ಎಂಡಿಎಎ, ಡೆಕತ್ಲಾನ್, ಕಾಮಾಕ್ಷಿ ಆಸ್ಪತ್ರೆ, ಟಾರ್‌ಕ್ಯೂ, ಶಿವ ಕೇಟರರ್ಸ್ ಸಹಯೋಗದಲ್ಲಿ ಆಯೋಜಿಸಿದ್ದ ಮ್ಯಾರಥಾನ್‌ಗೆ ಅಥ್ಲೀಟ್ ಎಸ್.ಸೋಮಶೇಖರ್ ಚಾಲನೆ ನೀಡಿ, ಕ್ರೀಡೆಯಿಂದ ಉತ್ತಮ ಬದುಕು ರೂಪಿಸಿಕೊಳ್ಳಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.


ಸೇಫ್ ವ್ಹೀಲ್ಸ್ ಗ್ರೂಪ್ ಆಫ್ ಕಂಪನೀಸ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್.ಪ್ರಶಾಂತ್, ಹರಿ ವಿದ್ಯಾಲಯದ ಅಧ್ಯಕ್ಷ ಶ್ರೀನಿವಾಸ ಹೊಸಮನೆ, ಸದಸ್ಯ ಎಚ್.ಆರ್.ಭಗವಾನ್, ನಿರ್ದೇಶಕ ಕೆ.ವಿ.ಸತ್ಯನ್, ಪ್ರಾಂಶುಪಾಲರಾದ ಡಾ.ಎಸ್.ಭಾರತಿ ಶಂಕರ್ ಸೇರಿದಂತೆ ಆಡಳಿತ ಮಂಡಳಿಯವರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು. ನಗರದ ಸುಮಾರು 20 ಶಾಲೆಗಳ ವಿದ್ಯಾರ್ಥಿಗಳು ಸೇರಿದಂತೆ 350ಕ್ಕೂ ಹೆಚ್ಚು ಮಂದಿ ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿದ್ದರು.

ಅಂತರ ಪ್ರೌಢಶಾಲಾ ಚರ್ಚಾ ಸ್ಪರ್ಧೆ ವಿಜೇತರು

ಮೈಸೂರು, ನ.22– ಮೈಸೂರಿನ ಆರ್.ಟಿ.ನಗರದಲ್ಲಿರುವ ಶ್ರೀ ಶಾರದಾ ಪಬ್ಲಿಕ್ ಶಾಲೆಯಲ್ಲಿ ಎಸ್.ರಾಮನಾಥನ್ ಸ್ಮಾರಕ ಅಂತರ ಪ್ರೌಢಶಾಲಾ ಇಂಗ್ಲಿಷ್ ಮತ್ತು ಕನ್ನಡ ಚರ್ಚಾ ಸ್ಪರ್ಧೆ–2022 ಯಶಸ್ವಿಯಾಗಿ ನಡೆಯಿತು.

ಇಂಗ್ಲಿಷ್ ಚರ್ಚಾ ಸ್ಪರ್ಧೆಯಲ್ಲಿ ಎಕ್ಸೆಲ್ ಪಬ್ಲಿಕ್ ಶಾಲೆಯ ಎಂ.ಸಿ.ಶರಣ್ಯ ಪ್ರಥಮ ಹಾಗೂ ಅರ್ನವ್ ಸಿಂಘ್ವಿ ತೃತೀಯ ಸ್ಥಾನ ಪಡೆದರೆ, ಭಾರತೀಯ ವಿದ್ಯಾಭವನದ ಪ್ರದ್ಯುಮ್ನ ಭಟ್ ದ್ವಿತೀಯ ಸ್ಥಾನ ಪಡೆದರು. ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ಆರ್ಕಿಡ್ ಪಬ್ಲಿಕ್ ಶಾಲೆಯ ಕೆ.ಎಸ್.ರಿಧೀಶ್ರೀ ಪ್ರಥಮ, ಭಾರತೀಯ ವಿದ್ಯಾಭವನದ ಎಸ್.ಕಿರಣ್‌ಕುಮಾರ್ ದ್ವಿತೀಯ ಹಾಗೂ ಜೆಎಸ್‌ಎಸ್ ಪಬ್ಲಿಕ್ ಶಾಲೆ(ಜೆಪಿ ನಗರ)ಯ ಎಂ.ಪಾರ್ಥನಾ ತೃತೀಯ ಬಹುಮಾನ ಪಡೆದಿದ್ದಾರೆ. ಚಾರ್ಟೆಡ್ ಅಕೌಂಟೆಂಟ್ ಎಸ್.ಅಚ್ಯುತ, ಸಂಸ್ಥೆಯ ಕಾರ್ಯದರ್ಶಿ ಆರ್.ಎಂ.ಶ್ರೀವತ್ಸ ಹಾಗೂ ನಗರದ 21 ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವೆಂಕಟಸ್ವಾಮಿ ನಿಧನ



ಮೈಸೂರು, ನ.22– ಮೈಸೂರಿನ ಮಂಡಿ ಮೊಹಲ್ಲದ ಸೊಪ್ಪಿನ ಕೇರಿ ನಿವಾಸಿ ಎಸ್. ವೆಂಕಟಸ್ವಾಮಿ (78) ಅವರು ಸೋಮವಾರ ನಿಧನರಾದರು.

ಮೃತರು ಓರ್ವ ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಮಂಗಳವಾರ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಚಿತಾಗಾರದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಅರೆಸೇನಾ ಪಡೆ, ಮಾಜಿ ಯೋಧರ ಬಗ್ಗೆ ಕೇಂದ್ರ, ರಾಜ್ಯ ಸರ್ಕಾರದಿಂದ ನಿರ್ಲಕ್ಷ್ಯ

ಡಿ.13, ಬೆಂಗಳೂರು ಚಲೋ



ಮಡಿಕೇರಿ, ನ.22– ಅರೆಸೇನಾಪಡೆ ಯೋಧರು ಹಾಗೂ ಮಾಜಿ ಯೋಧರ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿರುವ ಕೊಡಗು ಜಿಲ್ಲಾ ಅರೆ ಸೇನಾಪಡೆ ನಿವೃತ್ತ ಯೋಧರ ಒಕ್ಕೂಟ, ಡಿ.13ರಂದು 'ಬೆಂಗಳೂರು ಚಲೋ' ಹೋರಾಟದ ಮೂಲಕ ವಿವಿಧ ಬೇಡಿಕೆಗಳನ್ನು ಸರ್ಕಾರದ ಮುಂದಿಡಲು ನಿರ್ಧರಿಸಿರುವುದಾಗಿ ತಿಳಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಪ್ರಮುಖರು ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದರು.

2001ರ ಡಿ.13ರಂದು ಸಂಸತ್ ಭವನದ ಮೇಲೆ ನಡೆದ ಭಯೋತ್ಪಾದಕರ ದಾಳಿಯನ್ನು ವಿಫಲಗೊಳಿಸುವ ಮೂಲಕ ಸಂಸದರು ಹಾಗೂ ರಾಜಕೀಯ ಮುಖಂಡರುಗಳನ್ನು ಸಿಆರ್‌ಪಿಎಫ್ ಯೋಧರು ರಕ್ಷಿಸಿದ್ದರು. ಅಲ್ಲದೆ ಅನೇಕ ಯೋಧರು ಸಾಹಸ ಮೆರೆದು ಹುತಾತ್ಮರಾಗಿದ್ದಾರೆ. ಇದನ್ನು ಸರ್ಕಾರಕ್ಕೆ ನೆನಪು ಮಾಡಿಕೊಡುವ ಉದ್ದೇಶದಿಂದ ಡಿ.13ರಂದೇ ಧರಣಿ ಮತ್ತು ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಯೋಜಿಸಿರುವುದಾಗಿ ತಿಳಿಸಿದರು.

ಅರೆಸೇನಾ ಪಡೆಯ ಮಾಜಿ ಯೋಧರ ಬೇಡಿಕೆಗಳ ಬಗ್ಗೆ ಜಿಲ್ಲಾಡಳಿತ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಜನಪ್ರತಿನಿಧಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಆದರೆ ಯಾವುದೇ ಪ್ರತಿಕ್ರಿಯೆ ನೀಡದೆ ನಮ್ಮ ಮನವಿಗಳನ್ನು ಕಡೆಗಣಿಸಲಾಗಿದೆ. ಸಂಘದ ಕಚೇರಿ ಮತ್ತು ಕ್ಯಾಂಟೀನ್ ವ್ಯವಸ್ಥೆಗಾಗಿ ಕರ್ಣಂಗೇರಿ ಗ್ರಾಮದ ಸ.ನಂ.10/2ರ 0.20ಏಕರೆ ಜಾಗವು ಕಳೆದ 10 ವರ್ಷಗಳಿಂದ ಸಂಘದ ಸ್ವಾಧೀನದಲ್ಲಿದೆ. ಎರಡು ಬಾರಿ ಸರ್ವೆ ಮಾಡಿ ವಿಂಗಡಿಸಲಾಗಿದ್ದರೂ ಮಂಜೂರು ಮಾಡದೆ ನಿರ್ಲಕ್ಷ ವಹಿಸಲಾಗಿದೆ. ನಮ್ಮ ನೆರೆ ಜಿಲ್ಲೆ ಹಾಸದಲ್ಲಿ ಕೇವಲ 150 ಸದಸ್ಯರ ಅರೆಸೇನಾಪಡೆ ಮಾಜಿ ಯೋಧರ ಸಂಘಕ್ಕೆ ಅಲ್ಲಿನ ಜಿಲ್ಲಾಡಳಿತ, ಜನ ಪ್ರತಿನಿಧಿಗಳು ಗೌರವ ನೀಡಿ ಜಾಗ ಮಂಜೂರು ಮಾಡಿ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ. ಆದರೆ ಕೊಡಗು ಜಿಲ್ಲೆಯಲ್ಲಿ ಯೋಧರನ್ನು ನಿರ್ಲಕ್ಷಿಸಲಾಗಿದೆ ಎಂದು ಆರೋಪಿಸಿದರು.

ಕೊಡಗು ಅತಿಹೆಚ್ಚು ಅರೆಸೇನಾಪಡೆ ಮಾಜಿ ಯೋಧರು ಹಾಗೂ ಮಹಿಳಾ ಯೋಧರನ್ನು ಹೊಂದಿದ್ದರೂ ಕ್ಯಾಂಟೀನ್ ಮತ್ತು ಆಸ್ಪತ್ರೆಯ ಸೌಲಭ್ಯವನ್ನು ಒದಗಿಸಿಲ್ಲ. ವಸತಿ, ನಿವೇಶನ ಮತ್ತು ಜಮೀನು ಮಂಜೂರಾತಿಗಾಗಿ ಅನೇಕ ಮಾಜಿ ಯೋಧರು ಅರ್ಜಿ ಸಲ್ಲಿಸಿದ್ದರೂ ಇಲ್ಲಿಯವರೆಗೆ ಸ್ಪಂದನೆ ದೊರೆತ್ತಿಲ್ಲ. ಪ್ರತಿವರ್ಷ ಪೊಲೀಸ್ ಹುತಾತ್ಮರ ದಿನ ಆಚರಿಸುತ್ತಿದ್ದು, ಅರೆಸೇನಾಪಡೆ ಮಾಜಿ ಯೋಧರನ್ನು ಕಡೆಗಣಿಸಿ ಸಂಬಂಧಪಡದವರನ್ನು ಆಹ್ವಾನಿಸಿ ಆಚರಣೆ ಮಾಡಲಾಗುತ್ತಿದೆ ಎಂದು ಟೀಕಿಸಿದರು. ಸಿಆರ್‌ಪಿಎಫ್ ಯೋಧರ ಬಲಿದಾನವನ್ನು ಪೊಲೀಸ್ ಹುತಾತ್ಮರ ದಿನವನ್ನಾಗಿ ಆಚರಿಸುತ್ತಿರುವ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕು ಎಂದರು.

ಮಹಾಸಭೆ: ಅರೆಸೇನಾಪಡೆ ನಿವೃತ್ತ ಯೋಧರ ಒಕ್ಕೂಟದ 10ನೇ ವಾರ್ಷಿಕ ಮಹಾಸಭೆ ನ.25ರಂದು ಮಡಿಕೇರಿಯ ಪೊಲೀಸ್ 'ಮೈತ್ರಿ' ಸಮುದಾಯ ಭವನದ ಸಭಾಂಗಣದಲ್ಲಿ ನಡೆಯಲಿದೆ. ಅರೆ ಸೇನಾಪಡೆಯ ಮಾಜಿ ಯೋಧರು, ಸೇವಾನಿರತ ಕುಟುಂಬದ ಅವಲಂಬಿತ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರಮುಖರು ಮನವಿ ಮಾಡಿದರು. ಸಂಘದ ಸದಸ್ಯತ್ವವನ್ನು ಪಡೆಯದೆ ಇರುವ ಅರೆಸೇನಾಪಡೆಯ ಮಾಜಿ ಯೋಧರು ಸದಸ್ಯತ್ವವನ್ನು ಪಡೆದುಕೊಂಡು ಸಂಘದ ಬೆಳವಣಿಗೆಗೆ ಸಹಕರಿಸಬೇಕೆಂದು ಇದೇ ಸಂದರ್ಭ ತಿಳಿಸಿದರು.

ಒಕ್ಕೂಟದ ಜಿಲ್ಲಾ ಕಾರ್ಯದರ್ಶಿ ನೂರೇರ ಎಂ. ಭೀಮಯ್ಯ, ನಿರ್ದೇಶಕ ಎ.ಟಿ.ಉತ್ತಯ್ಯ, ಸಲಹೆಗಾರ ಕೆ.ಎಸ್. ಆನಂದ ಹಾಗೂ ಮಡಿಕೇರಿ ತಾಲೂಕು ಘಟಕದ ಕಾರ್ಯದರ್ಶಿ ಸಿ.ಜಿ. ಸಿದ್ದಾರ್ಥ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಅತಿಥಿ ಶಿಕ್ಷಕರ ವಜಾ ಖಂಡಿಸಿ ಪೋಷಕರು, ವಿದ್ಯಾರ್ಥಿಗಳ ಪ್ರತಿಭಟನೆ

ನಾಪೋಕ್ಲು, ನ.22– ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ಆಂಗ್ಲ ಮಾಧ್ಯಮ ಅತಿಥಿ ಶಿಕ್ಷಕಿಯರಿಗೆ ವೇತನ ನೀಡದೆ ವಜಾ ಮಾಡಿರುವುದನ್ನು ಖಂಡಿಸಿ ಪೋಷಕರು ಹಾಗೂ ವಿದ್ಯಾರ್ಥಿಗಳು ಕೆಪಿಎಸ್ ಶಾಲೆಯ ಮುಖ್ಯದ್ವಾರದಲ್ಲಿ ಧರಣಿ ನಡೆಸಿದರು.



ನಾಪೋಕ್ಲು ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಆಂಗ್ಲ ಮಾಧ್ಯಮ ವಿಭಾಗದಲ್ಲಿ ಶಿಕ್ಷಕರ ಕೊರತೆಯಿಂದ ಶಾಲೆ ಆರಂಭದಿಂದ ಸರ್ಕಾರದ ಆದೇಶದಂತೆ ಆಂಗ್ಲ ಮಾಧ್ಯಮ ವಿಭಾಗಕ್ಕೆ ಇಬ್ಬರು ಅತಿಥಿ ಶಿಕ್ಷಕರನ್ನು ನೇಮಿಸಿ ಕೊಳ್ಳಲಾಗಿತ್ತು. ಆದರೆ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಅತಿಥಿ ಶಿಕ್ಷಕರನ್ನು ವಜಾಗೊಳಿಸಲಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿ ಸ್ಥಳಕ್ಕೆ ಆಗಮಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಶಾಲೆಯ ಆಂಗ್ಲ ಮಾಧ್ಯಮದಲ್ಲಿ ಇಬ್ಬರು ಶಿಕ್ಷಕಿದ್ದರು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಿಆರ್‌ಪಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೆಲವರ ಕುಮ್ಮಕ್ಕಿನಿಂದಾಗಿ ಇಬ್ಬರು ಹೊಸ ಶಿಕ್ಷಕರ ನೇಮಕ ಮಾಡಿಕೊಳ್ಳಲಾಗಿದೆ. ಇದು ಖಂಡನೀಯ ಎಂದು ಶಿಕ್ಷಣಾಧಿಕಾರಿಗಳು ಹಾಗೂ ಅಧಿಕಾರಿಗಳ ವಿರುದ್ಧ ಪೋಷಕರು ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ಸರ್ಕಾರದ ಆದೇಶದಂತೆ ಆಂಗ್ಲ ಮಾಧ್ಯಮ ವಿಭಾಗಕ್ಕೆ ಅತಿಥಿ ಶಿಕ್ಷಕರ ನೇಮಕ ಮಾಡಿಕೊಳ್ಳಲಾಗಿದೆ. ಆದರೆ ಸರ್ಕಾರದ ಮರು ಆದೇಶ ಬಂದಿರುವುದರಿಂದ ಹೊಸದಾಗಿ ಶಿಕ್ಷಕರನ್ನು ನೇಮಿಸಲಾಗಿದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದರು. ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲಿ ಶಿಕ್ಷಕರನ್ನು ವಜಾ ಮಾಡಿರುವುದರಿಂದ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆ ಆಗಿದೆ ಶೈಕ್ಷಣಿಕ ವರ್ಷ ಪೂರ್ಣಗೊಳ್ಳುವಲ್ಲಿ ವರೆಗೆ ಅನಿತಾ ಮತ್ತು ಕಾವೇರಮ್ಮ ಅತಿಥಿ ಶಿಕ್ಷಕರನ್ನು ಮರು ನೇಮಕ ಮಾಡಿಕೊಳ್ಳಬೇಕು. ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಅತಿಥಿ ಶಿಕ್ಷಕರನ್ನು ಮರು ನೇಮಕ ಮಾಡಿಕೊಳ್ಳುವ ಬಗ್ಗೆ ಇಲಾಖೆಯ ದೊಡ್ಡೇಗೌಡ, ತಾಲ್ಲೂಕು ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಮನೋಹರ್ ನಾಯಕ್, ಸಿಇಓ ಹರೀಶ್ ,ಮಾರುತಿ ಅರೇರ, ತಾಲ್ಲೂಕು ಪ್ರೌಢಶಾಲಾ, ಮೋಹನ್ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ತಮ್ಮ ಧರಣಿಯನ್ನು ಹಿಂತೆಗೆದುಕೊಂಡರು. ಈ ಸಂದರ್ಭ ಎಸ್‌ಡಿಎಂಸಿ ಉಪಾಧ್ಯಕ್ಷ ಕೆ.ಎ.ಹ್ಯಾರಿಸ್ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಬಿದ್ದಾಟಂಡ ಜಿನ್ನು ನಾಣಯ, ಪ್ರಾಥಮಿಕ ಶಾಲಾ ವಿಭಾಗದ ಮುಖ್ಯ ಶಿಕ್ಷಕಿ ಚಂದ್ರಕಲಾ ಪೋಷಕರಾದ ಪ್ರಕಾಶ್, ಅಬ್ದುಲ್ ಸಮ್ಮದ್, ದಿನೇಶ್, ಶಿವಣ್ಣ, ಸುಮಿತ್ರ, ಸುರೇಶ್, ಉಸ್ಸೈನರ್, ಜಾಫರ್, ಸಾಧಿಕ್ ಮತ್ತಿತರರು ಇದ್ದರು.

ಪೊನ್ನಿರ ಕುಟುಂಬಸ್ಥರ ಪಾಷಣ ಮೂರ್ತಿ ಕೋಲ

ಪೊನ್ನಂಪೇಟೆ, ನ.22– ವಿರಾಜಪೇಟೆ ಸಮೀಪದ ಬಿಟ್ಟಂಗಾಲ ದಲ್ಲಿರುವ ಪೊನ್ನಿರ ಕುಟುಂಬಸ್ಥರ ಪಾಷಾಣಮೂರ್ತಿ ಕೋಲವು ಡಿ.25ರಂದು ರಾತ್ರಿ 9 ಗಂಟೆಯಿಂದ ಜರುಗಲಿದೆ. ಬಿಟ್ಟಂಗಾಲದ ಪೊನ್ನಿರ ಕುಟುಂಬಸ್ಥರ ಕೈಮಡದಲ್ಲಿ ಆಯೋಜಿಸಲಾಗಿರುವ ಈ ಕೋಲ ಮರುದಿನ ಬೆಳಗ್ಗೆ 6 ಗಂಟೆಯವರೆಗೆ ನಡೆಯಲಿದೆ.

ನಿಧನ

ದೇಯಂಡ ಕೃಷ್ಣ ಪೆಮ್ಮಯ್ಯ

ಮಡಿಕೇರಿ, ನ.22– ಜಿಲ್ಲಾ ಪೊಲೀಸ್



ವರಿಷ್ಠಾಧಿಕಾರಿ ಕಚೇರಿಯ ಸಿಬ್ಬಂದಿ, ಪೊನ್ನಂಪೇಟೆ ಭಗವತಿ ನಗರದ ನಿವಾಸಿ ದೇಯಂಡ ಕೃಷ್ಣ ಪೆಮ್ಮಯ್ಯ(50) ಅವರು ಮಂಗಳವಾರ ಬೆಳಗ್ಗೆ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಪೊನ್ನಂಪೇಟೆ ಗ್ರಾಮದಲ್ಲಿ ನಡೆಯಿತು.

ಡಿ.3ರಿಂದ ಫುಟ್ಬಾಲ್ ಪಂದ್ಯ

ವಿರಾಜಪೇಟೆ, ನ.22– ವಿರಾಜಪೇಟೆ ಸಂತ ಅನ್ನಮ್ಮ ಕ್ರೈಸ್ತ ಸ್ನೇಹಿತರ ಸಂಘದ ವತಿಯಿಂದ 11ನೇ ವಾರ್ಷಿಕೋತ್ಸವದ ಪ್ರಯುಕ್ತ ಡಿ.3 ಮತ್ತು 4 ರಂದು ಸಂತ ಅನ್ನಮ್ಮ ಕಾಲೇಜು ಮೈದಾನದಲ್ಲಿ ಜಿಲ್ಲಾ ಮಟ್ಟದ ಮುಕ್ತ ಫುಟ್ಬಾಲ್ ಪಂದ್ಯವನ್ನು ಕೊಡಗು ಜಿಲ್ಲಾ ಫುಟ್ಬಾಲ್ ಅಸೋಶಿಯೇಷನ್ ಮೂಲಕ ಆಯೋಜಿಸಲಾಗಿದೆ ಎಂದು ಸಂತ ಅನ್ನಮ್ಮ ಕ್ರೈಸ್ತ ಸ್ನೇಹಿತರ ಸಂಘದ ಅಧ್ಯಕ್ಷ ಇ.ಪಿ. ನೆಲ್ಸನ್ ತಿಳಿಸಿದರು.

ಕ್ರೈಸ್ತ ಸ್ನೇಹಿತರ ಸಂಘದಿಂದ ಪ್ರೆಸ್‌ಕ್ಲಬ್‌ನಲ್ಲಿ ಕರೆದಿದ್ದ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, ಕಳೆದ 11 ವರ್ಷಗಳಿಂದ ವಿವಿಧ ವಿನೂತನ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಸಂಘದಲ್ಲಿ 40 ಸದಸ್ಯರಿದ್ದಾರೆ. ಪಂದ್ಯಾಟವನ್ನು ಮೇ ತಿಂಗಳಲ್ಲಿ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ವಿಪರೀತ ಮಳೆಯ ಕಾರಣದಿಂದಾಗಿ ಮುಂದೂಡಲಾಗಿತ್ತು. ಪ್ರಥಮ ಬಾರಿಗೆ 7+2 ಪಂದ್ಯಾಟವನ್ನು ಆಯೋಜಿಸಲಾಗಿದೆ ಎಂದರು.

ಈ ಪಂದ್ಯಾಟದಲ್ಲಿ ಯಾವುದೇ ಜಾತಿ, ಮತ, ಧರ್ಮ, ಭೇದ, ಪಂಕ್ತಿ ಇಲ್ಲದೆ ನಡೆಸಲಾಗುವುದು. ವಿಜೇತರಿಗೆ ನಗದು ಹಾಗೂ ಆಕರ್ಷಕ ಟ್ರೋಫಿ ನೀಡಲಾಗುವುದು. ತಂಡದ ಹೆಸರು ನೋಂದಾವಣೆಗೆ ನ.20 ಕೊನೆಯ ದಿನವಾಗಿದ್ದು ಮೊದಲು ಬಂದ 20 ತಂಡಗಳಿಗೆ ಅವಕಾಶ ನೀಡಲಾಗುವುದು ಎಂದು ಹೇಳಿದರು. ಗೋಷ್ಠಿಯಲ್ಲಿ ಉಪಾಧ್ಯಕ್ಷ ರಾಬರ್ಟ್ ಲಾರ್ಥುರ್, ಕಾರ್ಯದರ್ಶಿ ಕೆ.ಜಿ. ವರ್ಗಿಸ್, ಕೋಶಾಧಿಕಾರಿ ಬ್ಲೇಸಿ ಸಿಕ್ವೇರಾ, ನಿರ್ದೇಶಕರುಗಳಾದ ಮರ್ವಿನ್ ಲೋಬೋ, ಜೂಡಿವಾರ್ಥ್ ಉಪಸ್ಥಿತರಿದ್ದರು.

ನ.25, ಹೆಬ್ಬಾಲೆ ಶ್ರೀ ಬನಶಂಕರಿ ಅಮ್ಮನವರ ವಾರ್ಷಿಕ ಹಬ್ಬ

ಕುಶಾಲನಗರ, ನ22– ತಾಲೂಕಿನ ಹೆಬ್ಬಾಲೆ ಗ್ರಾಮದ ಐತಿಹಾಸಿಕ ಹಿನ್ನೆಲೆ ಹೊಂದಿರುವ ಗ್ರಾಮ ದೇವತೆ ಶ್ರೀ ಬನಶಂಕರಿ ಅಮ್ಮನವರ ವಾರ್ಷಿಕ ಉತ್ಸವವನ್ನು ನ.25ರಂದು ಏರ್ಪಡಿಸಲಾಗಿದೆ.



ಶ್ರೀ ಬನಶಂಕರಿ ಅಮ್ಮನವರ ದೇವಸ್ಥಾನ, ಶ್ರೀ ಬಸವೇಶ್ವರ ದೇವಸ್ಥಾನ, ಶ್ರೀ ರಾಮಲಿಂಗೇಶ್ವರ ದೇವಸ್ಥಾನ ಸಮಿತಿ ಹಾಗೂ ಗ್ರಾಮಸ್ಥರ ವತಿಯಿಂದ ಕಾರ್ತಿಕ ಮಾಸ ಕೃಷ್ಣ ಪಕ್ಷ ಅಮಾವಾಸೆಯಂದು ಶುಕ್ರವಾರ ರಾತ್ರಿ ಶಕ್ತಿ ಸ್ವರೂಪಿಣಿ ಬನಶಂಕರಿ ದೇವಿಗೆ ವಿಶೇಷ ಪೂಜೆ ನೆರವೇರಲಿದೆ ಪ್ರತಿವರ್ಷದಂತೆ ಅಮ್ಮನವರ ಸನ್ನಿಧಿಯಲ್ಲಿ ಬೆಳಿಗ್ಗೆ 7 ಘಂಟೆಗೆ ಗಣಪತಿ ಪೂಜೆ, ಪುಣ್ಯಾಹಃ ರಕ್ಷಾಬಂಧನ ಧ್ವಜಾರೋಹಣ ನವಗ್ರಹ ಸ್ಥಾಪನೆ, ನವಗ್ರಹ ಪೂಜೆ ಮಹಾ ಮಂಗಳಾರತಿ ಸೇರಿದಂತೆ ಇನ್ನಿತರ ಪೂಜಾ ಕೈಂಕರ್ಯಗಳು ದೇವಾಲಯದ ಪ್ರಧಾನ ಅರ್ಚಕ ಕೃಷ್ಣಮೂರ್ತಿ ನೇತೃತ್ವದಲ್ಲಿ ನಡೆಯಲಿವೆ.

ಗ್ರಾಮದಲ್ಲಿ ದೇವಿಯ ವಾರ್ಷಿಕ ಹಬ್ಬದ ಅಂಗವಾಗಿ ಪವಿತ್ರ ಬನದಲ್ಲಿರುವ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಬೆಳಿಗ್ಗೆ ಕಳಶ ಸ್ಥಾಪಿಸುವುದರೊಂದಿಗೆ ವಿವಿಧ ಕಾರ್ಯಗಳು ದೇವಸ್ಥಾನ ಸಮಿತಿ ಅಧ್ಯಕ್ಷ ಯಜಮಾನ್ ಎಚ್.ಎನ್.ಬಸವರಾಜು ಹಾಗೂ ಎಚ್.ಪಿ. ರಾಜಪ್ಪ ಹಾಗೂ ಸಮಿತಿ ಪದಾಧಿಕಾರಿಗಳು, ಸದಸ್ಯರ ನೇತೃತ್ವದಲ್ಲಿ ನಡೆಯಲಿವೆ.

ಸಂಜೆ 4 ಗಂಟೆಗೆ ಕ್ಷೀರಾಭಿಷೇಕ, ಗಣಪತಿ ಪೂಜೆ ನಂತರ ದೇವಿಯನ್ನು ಅಲಂಕರಿಸಲಾಗುತ್ತದೆ. ರಾತ್ರಿ 8 ಗಂಟೆಗೆ ಬನದಲ್ಲಿ ಅಗ್ನಿಕುಂಡ ಸ್ಥಾಪಿಸಲಾಗುತ್ತದೆ. ಹರಕೆ ಹೊತ್ತ ಭಕ್ತಾದಿಗಳು ಅಗ್ನಿಕುಂಡ ತುಳಿದು ದೇವಿ ದರ್ಶನ ಪಡೆದು ಪೂಜೆ ಸಲ್ಲಿಸುತ್ತಾರೆ. ಹಬ್ಬದ ಅಂಗವಾಗಿ ಗ್ರಾಮವನ್ನು ಹಸಿರು ತಳಿರು ತೋರಣಗಳಿಂದ ಹಾಗೂ ದೇವಸ್ಥಾನಗಳನ್ನು ವಿದ್ಯುತ್ ದೀಪಗಳಿಂದ ಸಿಂಗರಿಸಲಾಗುತ್ತದೆ. ರಾತ್ರಿ 10.30 ಗಂಟೆ ವೇಳೆಗೆ ಗ್ರಾಮದ ಶ್ರೀ ಬಸವೇಶ್ವರ ದೇವಾಲಯದ ಬಳಿ ಯಿಂದ ವಿದ್ಯುತ್ ಅಲಂಕೃತ ಮಂಟಪದಲ್ಲಿ ಬನಶಂಕರಿ ದೇವಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿ ನಂತರ ಉತ್ಸವವನ್ನು ನೆರವಣಿಗೆ ಮೂಲಕ ಪವಿತ್ರ ಬನಕ್ಕೆ ಕೊಂಡೊಯ್ಯಲಾಗುತ್ತದೆ.

ದನಕ್ಕೆ ಡಿಕ್ಕಿ ಹೊಡೆದು ಬೈಕ್ ಸವಾರ ಸಾವು

ಕುಶಾಲನಗರ, ನ.22– ಕುಶಾಲನಗರದಿಂದ ರಂಗಸಮುದ್ರಕ್ಕೆ ತೆರಳುವ ಮಾರ್ಗದಲ್ಲಿ ಬೆಟ್ಟಗೇರಿ ಬಳಿ ರಸ್ತೆಗೆ ಅಡ್ಡ ಬಂದ ದನಕ್ಕೆ ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ನಡೆದಿದೆ. ರಂಗಸಮುದ್ರ ಗ್ರಾಮದ ಹರಿಶ್ಚಂದ್ರ (45) ಮೃತ ದುರ್ದೈವಿ. ಕುಶಾಲನಗರದಲ್ಲಿ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಈತ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ವೇಳೆ ದುರ್ಘಟನೆ ನಡೆದಿದೆ. ಗ್ರಾಮಾಂತರ ಠಾಣೆಯ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಿದರು.

ಮರ ಬಿದ್ದು ಮನೆ ಜಖಂ: ಅಪಾಯದಿಂದ ಪಾರು

ಮಡಿಕೇರಿ, ನ.22– ತೋಟದಲ್ಲಿದ್ದ ಮರವೊಂದು ಆಕಸ್ಮಿಕವಾಗಿ ಮನೆಯೊಂದರ ಮೇಲೆ ಬಿದ್ದ ಪರಿಣಾಮ ಮನೆ ಜಖಂಗೊಂಡಿರುವ ಘಟನೆ ಇಂದು ಬೆಳಗ್ಗೆ ಸಮೀಪದ ಯಡವಾರೆ ಗ್ರಾಮದಲ್ಲಿ ನಡೆದಿದೆ.



ಐಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಡವಾರೆ ಗ್ರಾಮದ ಓ.ಆರ್.ಉಣ್ಣಿ ಎಂಬವರ ಮನೆಯ ಮೇಲೆ ವಿಜಯ ಅವರ ತೋಟದಲ್ಲಿದ್ದ ಭಾರೀ ಗಾತ್ರದ ಮರ ಉರುಳಿದ ಪರಿಣಾಮ ಮನೆ ಜಖಂಗೊಂಡಿದೆ. ಮನೆಯಲ್ಲಿ ಉಣ್ಣಿ ಮೂವರು ಮೊಮ್ಮಕ್ಕಳು ಸೇರಿದಂತೆ ಆರು ಮಂದಿ ಇದ್ದ ಸಂದರ್ಭ ಮರ ಉರುಳಿ ಬಿದ್ದಿದ್ದು, ಮನೆಯ ಮೇಲ್ಛಾವಣಿ ತಡೆದ ಪರಿಣಾಮ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಸ್ಥಳಕ್ಕೆ ಐಗೂರು ಗ್ರಾಪಂ ಉಪಾಧ್ಯಕ್ಷೆ ಮುತ್ತಕ್ಕ, ಸದಸ್ಯರುಗಳಾದ ಪ್ರಮೋದ್, ವಿನು, ಜುನೈದ್, ಪಿಡಿಓ ಬಾಲಕೃಷ್ಣ ರೈ ಮತ್ತು ಅರಣ್ಯ ಇಲಾಖೆ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪ. ಮಲ್ಲೇಶ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ

ಚಾ.ನಗರದಲ್ಲಿ ಬ್ರಾಹ್ಮಣ ಸಮುದಾಯ ಪ್ರತಿಭಟನೆ



ಚಾಮರಾಜನಗರ, ನ.22– ಬ್ರಾಹ್ಮಣ ಸಮುದಾಯವನ್ನು ವಿಚಾರವಾದಿ ಪ. ಮಲ್ಲೇಶ್ ಅವಹೇಳನ ಮಾಡಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಬ್ರಾಹ್ಮಣ ಸಮುದಾಯ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿತು.

ಜಿಲ್ಲಾ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಇಲ್ಲಿನ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಬ್ರಾಹ್ಮಣರು ಜಮಾಯಿಸಿದರು. ಪ.ಮಲ್ಲೇಶ್ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ಆರಂಭಿಸಿದ ಬ್ರಾಹ್ಮಣರು, ಭುವನೇಶ್ವರಿ ವೃತ್ತ, ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿದರು. ಅಲ್ಲಿ ಸ್ವಲ್ಪ ಸಮಯ ಧರಣಿ ನಡೆಸಿದ ನಂತರ ಶಿರಸ್ತೇದಾರ್ ಅನುಷ್ ಅವರ ಮೂಲಕ ರಾಜ್ಯದ ಗೃಹಸಚಿವರಿಗೆ ಮನವಿ ಸಲ್ಲಿಸಿದರು.

ಮೈಸೂರಿನಲ್ಲಿ ನವೆಂಬರ್ 15ರಂದು ನಡೆದ ಕಾರ್ಯಕ್ರಮವೊಂದರಲ್ಲಿ ಪ. ಮಲ್ಲೇಶ್ ಅವರು ಬ್ರಾಹ್ಮಣರನ್ನು ಮತ್ತು ಬ್ರಾಹ್ಮಣ್ಯ ಹಾಗೂ ಬ್ರಾಹ್ಮಣರ ಆಚಾರ ವಿಚಾರಗಳನ್ನು ನಂಬಬೇಡಿ. ವೇದಗಳು, ಉಪನಿಷತ್ತುಗಳು ಈ ದೇಶವನ್ನು ಹಾಳುಮಾಡುತ್ತಿದೆ ಎಂದು ಬ್ರಾಹ್ಮಣ ಸಮುದಾಯದ ಬಗೆಗೆ ಅವಾಚ್ಯ ಶಬ್ದಗಳನ್ನು ಬಳಸಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕೇಂದ್ರ ಸರ್ಕಾರ ಮೇಲ್ವರ್ಗದ ಆರ್ಥಿಕವಾಗಿ ಹಿಂದುಳಿದವರಿಗೆ ಘೋಷಿಸಿರುವ ಶೇ.10ರಷ್ಟು ಮೀಸಲಾತಿಯನ್ನು ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿದೆ. ಇದನ್ನು ಕೂಡ ಪ.ಮಲ್ಲೇಶ್ ಅವರು ವಿರೋಧಿಸಿದ್ದಾರೆ. ಇದರಿಂದ ಬ್ರಾಹ್ಮಣ ಸಮುದಾಯವನ್ನು ಅವಹೇಳನ ಮಾಡಿರುವುದು, ನ್ಯಾಯಾಲಯದ ತೀರ್ಪನ್ನು ತಪ್ಪೆಂದು ವಿರೋಧಿಸಿರುವುದರಿಂದ ನ್ಯಾಯಾಂಗ ನಿಂದನೆ ಮಾಡಿದಂತಾಗಿದೆ. ಹೀಗಾಗಿ ಪ. ಮಲ್ಲೇಶ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದರು ಪ್ರತಿಭಟನಾಕಾರರು ಒತ್ತಾಯಿಸಿದರು.

ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಜಿ.ಎಂ.ಹೆಗಡೆ, ಖಜಾಂಚಿ ಎಸ್. ಬಾಲಸುಬ್ರಹ್ಮಣ್ಯ, ಸಂಘಟನಾ ಕಾರ್ಯದರ್ಶಿ ನಾಗರಾಜು, ಮುಖಂಡರಾದ ರಾಮಕೃಷ್ಣ, ಅನಂತ್‌ಪ್ರಸಾದ್, ಎ. ಜಯಸಿಂಹ, ನಾರಾಯಣ, ಗೋಪಾಲಭಟ್, ರಾಧಾಕೃಷ್ಣ, ರಮೇಶ್, ರೋಟರಿ ಸತ್ಯಪ್ಪ, ಚಂದ್ರಶೇಖರ್, ವಾಸುದೇವಮೂರ್ತಿ, ಅಜಯ್, ಪ್ರಮೋದ್, ಸುಭಾಷ್, ಪ್ರದೀಪ್‌ದೀಕ್ಷಿತ್, ಸುರೇಂದ್ರ, ಸುನಿಲ್, ಲೀಲಾ, ಅನಿತಾ, ಮಮತಾ, ಗಾಯಿತ್ರಿ, ನಿರ್ಮಲಾ, ನೀಲಮ್ಮ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮಾದಪ್ಪನ ಸನ್ನಿಧಿಯಲ್ಲಿ ಬೆಳಗಿದ ಮಹಾಜ್ಯೋತಿ



ಚಾಮರಾಜನಗರ, ನ.22– ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳವಾದ ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಕಡೆ ಕಾರ್ತಿಕ ಮಾಸದ ಪ್ರಯುಕ್ತ ಸೋಮವಾರ ರಾತ್ರಿ ದೀಪದ ಗಿರಿ ಒಡ್ಡುವಿನಲ್ಲಿ ಮಹಾಜ್ಯೋತಿ ಬೆಳಗಲಾಯಿತು. ನಂತರ ಮಹದೇಶ್ವರ ಸ್ವಾಮಿಯ ತೆಪ್ಪೋತ್ಸವದೊಂದಿಗೆ ಜಾತ್ರೆಗೆ ತೆರೆ ಎಳೆಯಲಾಯಿತು.

ಕಾರ್ತಿಕ ಮಾಸದ ಜಾತ್ರೆಯ ಅಂಗವಾಗಿ ಶನಿವಾರ ದಿಂದಲೇ ಬೆಟ್ಟದಲ್ಲಿ ವಿಶೇಷ ಪೂಜೆ, ಪುನಸ್ಕಾರಗಳು ಆರಂಭವಾಗಿದ್ದವು. ಸೋಮವಾರ ಬೆಳಗ್ಗೆ ಮಲೆಮಹದೇಶ್ವರ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ಸ್ವಾಮಿಗೆ ವಿಶೇಷ ಪೂಜೆ ಅಭಿಷೇಕ, ಮಹಾ ಮಂಗಳಾರತಿ, ಪೂಜಾ ಕಾರ್ಯಗಳಿಗೆ ವಿಧಿವಿಧಾನಗಳೊಂದಿಗೆ ಚಾಲನೆ ನೀಡಲಾಯಿತು.

ಮಹಾಜ್ಯೋತಿ ದರ್ಶನ: ಸೋಮವಾರ ಸಂಜೆ ದೇಗುಲದಲ್ಲಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಮೂರ್ತಿಯನ್ನು ವಿವಿಧ ಪುಷ್ಪಗಳಿಂದ ಸಿಂಗರಿಸಿರುವ ಬಸವ ವಾಹನದಲ್ಲಿ ಪ್ರತಿಷ್ಠಾಪಿಸಿ ಸತ್ತಿಗೆ, ಸೂರಿಪಾನಿ, ಜಾಗಟೆ ಹಾಗೂ ವಾದ್ಯಗಳದೊಂದಿಗೆ ದೇಗುಲದ ಸುತ್ತ ಪ್ರದಕ್ಷಿಣೆ ಹಾಕಿ ನೈವೇದ್ಯ ಹಾಗೂ ಮಂಗಳಾರತಿ ನಂತರ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ದೀಪದಗಿರಿ ಒಡ್ಡುಗೆ ತೆರಳಿ ಸ್ವಾಮಿಗೆ ಬಿಲ್ವಾರ್ಚನೆ, ದೀವಟಿಗೆ ಸೇವೆ ಹಾಗೂ ಧೂಪ ದೀಪಾರತಿ ಸೇವೆ ನೆರವೇರಿಸಿ ಮಹಾಜ್ಯೋತಿ ಬೆಳಗಿಸಲಾಯಿತು. ಲಕ್ಷಾಂತರ ಭಕ್ತರ ಮಹಾಜ್ಯೋತಿಯ ದರ್ಶನ ಪಡೆದು, ಉಘೇ... ಮಾದಪ್ಪ, ಉಘೇ... ಮಾದಪ್ಪ ಎಂಬ ಜಯಘೋಷ ಮೊಳಗಿಸಿದರು. ಇದೇ ಸಂದರ್ಭದಲ್ಲಿ ಮಹದೇಶ್ವರ ಸ್ವಾಮಿಯ ಭಕ್ತಿ ಗೀತೆ ಹಾಗೂ ಭಾವ ಗೀತೆಗಳನ್ನು ಹಾಡಿ ದೇವರ ಕೃಪೆಗೆ ಪಾತ್ರರಾದರು. ಮಹಾಜ್ಯೋತಿ ಉತ್ಸವದಲ್ಲಿ ಪಾಲ್ಗೊಂಡ ಭಕ್ತರು ತಮ್ಮ ಕೈಲಾದಷ್ಟು ಎಣ್ಣೆ ಎರೆದು ತಮ್ಮ ಹರಕೆ ತೀರಿಸಿದರು.

ವಿಶೇಷ ದೀಪಾಲಂಕಾರ: ಮಲೆ ಮಾದಪ್ಪನ ದೇವಸ್ಥಾನದ ಮುಖ್ಯದ್ವಾರ ಸೇರಿದಂತೆ ದೊಡ್ಡ ಗೋಪುರ, ಆಲಂಬಾಡಿ ಬಸವೇಶ್ವರನಿಗೆ ದೊಡ್ಡ ಕೊಳದ ಸುತ್ತಲು ಮತ್ತು ದೇವಾಲಯದ ವಿವಿಧೆಡೆ ವಿದ್ಯುತ್ ದೀಪಾಲಂಕಾರಗಳಿಂದ ಸಿಂಗರಿಸಲಾಗಿತ್ತು. ಕಡೆ ಕಾರ್ತಿಕ ಮಾಸದ ಅಂಗವಾಗಿ ನಡೆದ ಪೂಜಾ ಕಾರ್ಯಗಳು ರಾತ್ರಿಯಿಂದ ಬೆಳಗಿನವರೆಗೆ ಜರುಗಿದವು.

ಹರಕೆ ಹೊತ್ತ ಭಕ್ತರಿಂದ ಹುಲಿವಾಹನ ಉತ್ಸವ, ಬಸವ ವಾಹನ ಉತ್ಸವ, ಬೆಳ್ಳಿ ಕಿರಿಟ ಮತ್ತು ಬಂಗಾರದ ರಥೋತ್ಸವ ಸೇರಿದಂತೆ ವಿವಿಧ ಉತ್ಸವಗಳು ನಡೆದವು. ನಂತರ ದೊಡ್ಡ ಕೊಳದಲ್ಲಿ ವಿದ್ಯುತ್ ದೀಪಾಲಂಕಾರಗಳಿಂದ ವಿಶೇಷವಾಗಿ ಸಿಂಗರಿಸಲ್ಪಟ್ಟಿದ್ದ ಪಲ್ಲಕ್ಕಿಯಲ್ಲಿ ಮಲೆ ಮಹದೇಶ್ವರ ಉತ್ಸವ ಮೂರ್ತಿಯನ್ನಿಟ್ಟು ಮೆರವಣಿಗೆ ಮಾಡಲಾಯಿತು. ಮಹಾಜ್ಯೋತಿ ಬಳಿಕ ದೇಗುಲಕ್ಕೆ ತೆರಳಿ ಸ್ವಾಮಿಗೆ ನೈವೇದ್ಯ ಅರ್ಪಿಸಿ ಭಕ್ತರಿಗೆ ತೀರ್ಥ ಪ್ರಸಾದ ವಿತರಿಸಲಾಯಿತು. ಆನಂತರ ಕಾರ್ತಿಕ ತೆಪ್ಪೋತ್ಸವದೊಂದಿಗೆ ಜಾತ್ರೆಗೆ ತೆರೆ ಎಳೆಯಲಾಯಿತು.

ದಲಿತರು ಬೇಡ ಎಂದರೆ ರಾಜಕೀಯ ನಿವೃತ್ತಿ

ಮಂಟೇಸ್ವಾಮಿ ನೂತನ ದೇವಸ್ಥಾನ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಪುಟ್ಟರಂಗಶೆಟ್ಟಿ ಹೇಳಿಕೆ

ಚಾಮರಾಜನಗರ, ನ.22– ನನ್ನ ವಿರುದ್ಧ ದಲಿತರ ವಿರೋಧಿ ಎಂಬ ಹಣೆಪಟ್ಟಿ ಕಟ್ಟುವ ಷಡ್ಯಂತ್ರ ನಡೆಯುತ್ತಿದೆ. ರಾಜಕೀಯ ಜೀವನದಲ್ಲಿ ಎಂದು ಸಹ ದಲಿತ ವಿರೋಧಿ ನೀತಿ ಅನುಸರಿಸಿಲ್ಲ. ಒಂದು ಕಪ್ಪು ಚುಕ್ಕಿ ಇಲ್ಲದಂತೆ ರಾಜಕಾರಣ ಮಾಡುತ್ತಿದ್ದೇನೆ. ದಲಿತರು ನನ್ನನ್ನು ಬೇಡ ಎಂದ ದಿನವೇ ರಾಜಕೀಯ ನಿವೃತ್ತಿ ಪಡೆಯುವುದಾಗಿ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಎನ್.ಸಿ.ಪುಟ್ಟರಂಗಶೆಟ್ಟಿ ಹೇಳಿದರು.



ತಾಲೂಕಿನ ಸಿದ್ದಯ್ಯನಪುರ ಗ್ರಾಮದಲ್ಲಿ ಶ್ರೀಮಂಟೇಸ್ವಾಮಿ ದೇವಸ್ಥಾನ ಸಮಿತಿ ಹಾಗೂ ಗ್ರಾಮಸ್ಥರು ನೂತನವಾಗಿ ನಿರ್ಮಿಸಿರುವ ಶ್ರೀಮಂಟೇಸ್ವಾಮಿ ದೇವಸ್ಥಾನ ಗೋಪುರ, ಕಳಸ ಸ್ಥಾಪನೆ, ಅಂಕಸ್ಥಾಪನೆ ಹಾಗೂ ಕುಂಭಾಭಿಷೇಕ ಕಾರ್ಯಕ್ರಮವನ್ನು ಉದ್ಘಾಟಿಸಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಮನೆಮನೆಯ ಪರಂಜ್ಯೋತಿ ಶ್ರೀಮಂಟೇಸ್ವಾಮಿ ನಮ್ಮೆಲ್ಲರ ಆರಾಧ್ಯ ದೈವರಾಗಿದ್ದಾರೆ. ಸಮಾಜ ಸುಧಾರಕರಾದ ಬಸವಣ್ಣ ಅವರ ಮಾದರಿಯಲ್ಲಿ ಶ್ರೀಮಂಟೇಸ್ವಾಮಿ ಸಮಾಜ ಸುಧಾರಣೆಗಾಗಿ ಬಂದ ಮಹಾಪುರುಷರು. ಮಂಟೇಲಿಂಗಯ್ಯ, ಮಂಟೇಸ್ವಾಮಿ ಎಂಬ ಹೆಸರಿನಲ್ಲಿ ಜನರ ಮನಪರಿವರ್ತನೆ ಮಾಡುವ ಜೊತೆಗೆ ಪವಾಡಗಳ ಮೂಲಕ ನಮ್ಮೆಲ್ಲರ ಮನೆಮನೆಯ ಪರಂಜ್ಯೋತಿಯಾಗಿದ್ದಾರೆ. ಪ್ರತಿ ಗ್ರಾಮಗಳಲ್ಲೂ ಮಂಟೇಸ್ವಾಮಿ ದೇವಸ್ಥಾನಗಳಿದ್ದು ಅವರ ಅನುಯಾಯಿಗಳಿದ್ದು, ಭಕ್ತರು ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಕಂಡಾಯ ಮೆರವಣಿಗೆ ನಮ್ಮೆಲ್ಲರ ಒಗ್ಗಟ್ಟಿನ ಪ್ರತೀಕವಾಗಿದೆ. ಗ್ರಾಮದಲ್ಲಿ ಬಹಳ ವಿಜೃಂಭಣೆಯಿಂದ ಮಂಟೇಸ್ವಾಮಿ ದೇವಸ್ಥಾನ ನಿರ್ಮಾಣ ಮಾಡಿರುವುದು ಅಭಿವೃದ್ಧಿಯ ಸಂಕೇತವಾಗಿದೆ ಎಂದರು.

ಸಿದ್ದಯ್ಯನಪುರ ನಮಗೆ ಅಚ್ಚುಮೆಚ್ಚಿನ ಗ್ರಾಮವಾಗಿದ್ದು ಈ ಗ್ರಾಮದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದೇನೆ ಮುಂದಿನ ದಿನಗಳಲ್ಲಿ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡುತ್ತೇನೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯವಾಗಿದೆ ಎಂದರು.

ನಿಜಗುಣರಾಜು ಸುಳ್ಳು ಹೇಳುವುದರಲ್ಲಿ ನಿಸ್ಸೀಮ: ಹೊಸದಾಗಿ ಕಾಡಾಧ್ಯಕ್ಷರಾಗಿರುವ ನಿಜಗುಣರಾಜು ಸುಳ್ಳು ಹೇಳುವುದನ್ನು ಬಿಡಬೇಕು. ಜನತೆಗೆ ಇಲಾಖೆಯಿಂದ ಕೋಟಿಕೋಟಿ ಅನುದಾನ ಕೊಡಿಸಿದ್ದೇನೆ ಎಂದು ಸುಳ್ಳು ಹೇಲಕುವುದರಲ್ಲಿ ನಿಸ್ಸೀಮರು. ಬಸವಾಪುರದಿಂದ ಸಿದ್ದಯ್ಯನಪುರ ಮಾರ್ಗ ಅಭಿವೃದ್ಧಿಗೆ 50 ಲಕ್ಷ ರೂ.ಗಳನ್ನು ನಾನು ನೀಡಿದ್ದೇನೆ. ಸುವರ್ಣಾವತಿ ಜಲಾಶಯದಲ್ಲಿ ಬಿ.ರಾಚಯ್ಯನವರ ಪುತ್ಥಳಿಗೆ 20 ಲಕ್ಷ ರೂ.ಬಿಡುಗಡೆ ಎಂದು ಸೇರಿದಂತೆ ಅನೇಕ ವಿಚಾರಗಳಲ್ಲಿ ಸುಳ್ಳು ಹೇಳುತ್ತಿದ್ದರೆ. ರಾಚಯ್ಯನ ಪ್ರತಿಮೆ ಸಚಿವ ಸಂಪುಟದ ಅನುಮೋದನೆ, ಇಲಾಖೆಯ ಒಪ್ಪಿಗೆ ಇದ್ಯಾವುದು ನಡೆಯದೆ ಅನುದಾನ ಬಿಡುಗಡೆಯಾಗುವುದೇ ಹೇಗೆ ? ಕಾಡಾಧ್ಯಕ್ಷರಾಗಿರುವ ಅವರಿಗೆ ಸಂವಿಧಾನ ಬದ್ದವಾಗಿ ಶಾಸಕರಿಗಿರುವ ಅಧಿಕಾರವನ್ನು ಒಮ್ಮೆ ತಿಳಿದು ಮಾತನಾಡು ಒಳಿತು. ನನ್ನ ಕ್ಷೇತ್ರದಲ್ಲಿ ಒಂದು ರೂಪಾಯಿ ಸರ್ಕಾರ ಅನುದಾನ ನೀಡಬೇಕಾದರು ನನ್ನ ಒಪ್ಪಿಗೆಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಎಪಿಎಂಸಿ ನಿರ್ದೇಶಕರಾದ ಆಲೂರು ಪ್ರದೀಪ, ಸೋಮೇಶ, ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್, ತಾಪಂ ಮಾಜಿ ಅಧ್ಯಕ್ಷ ಆರ್.ಮಹದೇವ, ಮುಖಂಡರಾದ ನಾಗಯ್ಯ, ವೀರಭದ್ರಸ್ವಾಮಿ, ಗ್ರಾಪಂ ಅಧ್ಯಕ್ಷೆ ವಿಮಲಕುಮಾರ್, ಮಾಜಿ ಅಧ್ಯಕ್ಷೆ ಶೈಲಜಾ ಗೋವಿಂದರಾಜು, ಉಪಾಧ್ಯಕ್ಷ ಮರಿಸ್ವಾಮಿ, ಸದಸ್ಯರಾದ ಮಂಜು, ಸೋಮಣ್ಣ, ಬಸವಣ್ಣ, ರೇಖಾ ಮಹದೇವಸ್ವಾಮಿ, ಮಹದೇವಮ್ಮ ಸಿದ್ದರಾಜು, ಯಜಮಾನರಾದ ಕೆಂಪರಾಜು, ನಾರಾಯಣಸ್ವಾಮಿ, ಚಂದ್ರಶೇಖರ್, ಲಕ್ಷ್ಮೀನರಸಿಂಹ, ಶ್ರೀಕಂಠಮೂರ್ತಿ, ರವಿಗೌಡ, ಪರ್ವತ್ ರಾಜ್, ಶಿವಣ್ಣ, ಶಾಂತಿ ಮಹೇಶ್, ಚಂದ್ರಮ್ಮ, ಪುಟ್ಟಸ್ವಾಮಿ, ಡಿ.ಎಸ್.ಚನ್ನಂಜಯ್ಯ, ಹನುಮಂತು ಡಾ.ಶಿವಕುಮಾರ್, ಎಸ್.ಪಿ.ಮಹೇಶ್, ರಮೇಶ್, ದೇವರಗುಡ್ಡರು, ದಾಸರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಆಕಸ್ಮಿಕ ಬೆಂಕಿ ತಗುಲಿ ಮನೆ ಭಸ್ಮ

ಕೊಳ್ಳೇಗಾಲ, ನ.22– ಆಕಸ್ಮಿಕವಾಗಿ ಬೆಂಕಿ ತಗುಲಿ ಮನೆಯೊಂದು ಸಂಪೂರ್ಣ ಸುಟ್ಟು ಹೋಗಿರುವ ಘಟನೆ ದೊಡ್ಡಿಂದುವಾಡಿ ಗ್ರಾಮದಲ್ಲಿ ಜರುಗಿದೆ. ತಾಲೂಕಿನ ದೊಡ್ಡಿಂದುವಾಡಿ ಗ್ರಾಮದ ಶಿವಸ್ವಾಮಿ ಎಂಬುವರ ಮನೆ ಸುಟ್ಟು ಹೋಗಿದೆ. ಇವರು ಮನೆಯಲ್ಲಿ ಇಲ್ಲದಿರುವಾಗ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ಬೆಂಕಿ ಧಗಧಗನೆ ಉರಿಯುತ್ತಿದ್ದನ್ನು ಗಮನಿಸಿದ ಸ್ಥಳೀಯರು ಅಗ್ನಿಶಾಮಕ ದಳದವರಿಗೆ ಕರೆ ಮಾಡಿ ಬೆಂಕಿ ನಂದಿಸಲು ಯತ್ನಿಸಿದರೂ ಸಹಾ ಸಂಪೂರ್ಣವಾಗಿ ಮನೆ ಸುಟ್ಟು ಹೋಗಿ ಸುಮಾರು ಐದು ಲಕ್ಷದಷ್ಟು ಮರ ಹಾಗೂ ಸಾಮಗ್ರಿಗಳು ಸುಟ್ಟು ಹೋಗಿದೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಚಾ.ನಗರದಲ್ಲೇ ಸಚಿವ ಸಂಪುಟ ಸಭೆ ನಡೆಸಲು ವಾಟಾಳ್ ನಾಗರಾಜ್ ಆಗ್ರಹ



ಚಾಮರಾಜನಗರ, ನ.22–ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಚಾಮರಾಜನಗರ ಜಿಲ್ಲಾಡಳಿತ ಭವನದಲ್ಲಿ ಸಚಿವ ಸಂಪುಟ ಸಭೆ ನಡೆಸಬೇಕು ಎಂದು ಮುಖ್ಯಮಂತ್ರಿಗಳಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ಆಗ್ರಹಿಸಿದರು.

ತಾಲೂಕಿನ ಯಡಬೆಟ್ಟ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರಿಂದ ಸಮಸ್ಯೆಗಳನ್ನು ಆಲಿಸಿ ಮಾತನಾಡಿದ ಅವರು, ಜಿಲ್ಲೆ ಬಹಳ ಹಿಂದುಳಿದಿದೆ. ಜಿಲ್ಲೆಯನ್ನು ರಾಜ್ಯ ಸರ್ಕಾರ ಸಂಪೂರ್ಣ ಕಡೆಗಣಿಸಿದೆ. ಈ ಜಿಲ್ಲೆ ಇದೆಯಂತ ಸರ್ಕಾರಕ್ಕೆ ಗೊತ್ತೆಯಿಲ್ಲ. ಸರ್ಕಾರದ ಪರವಾಗಿ ಜಿಲ್ಲೆಗೆ ಬರುವ ಜನ ಬರೀ ಬುರುಡೆ ಬಿಡುತ್ತಿದ್ದಾರೆ ಎಂದು ಆರೋಪಿಸಿದರು.

ಚಾಮರಾಜನಗರ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಒಂದು ಬಿಡುಗಾಸು ಮೀಸಲಿಟ್ಟಿಲ್ಲ. ಕಡ್ಲೆಪುರಿ, ಕಡಲೆಕಾಯಿ ತಿನ್ನೋಕು ಹಣ ಬಿಡುಗಡೆ ಮಾಡಿಲ್ಲ ಅಭಿವೃದ್ಧಿ ಬಗ್ಗೆ ಚಾಮರಾಜನಗರ ತೀರಾ ಹಿಂದುಳಿದಿದೆ. ಈ ಸರ್ಕಾರದಲ್ಲಿ ಒಂದು ಅವರಿಗೆ ಬೇಕಾದವರಿಗೆ ಅನುದಾನ ಹಂಚಿಕೆ ಮಾಡಿಕೊಳ್ಳುತ್ತಿದ್ದಾರೆ. ಇದು ನಿಸರ್ಗ ನಗರ, ಒಂದು ಕಡೆ ಬಂಡಿಪುರ, ಮತ್ತೊಂದು ಕಡೆ ಬಿಳಿಗಿರಿರಂಗನಬೆಟ್ಟ ಇನ್ನೊಂದು ಕಡೆ ಮಹದೇಶ್ವರ ಬೆಟ್ಟ ಇದೆ. ಇಡೀ ಹಳ್ಳಿಗಳ ಪರಿಸ್ಥಿತಿ ಶೋಚನೀಯ. ಓಡಾಡಲು ಉತ್ತಮ ರಸ್ತೆಗಳಿಲ್ಲ ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ಸುಮಾರು ಹಳ್ಳಿಗಳಿಗೆ ನಿವೇಶನವನ್ನು ಕೊಡಿಸಿದ್ದೇನೆ ಸಾವಿರಾರು ಜನರಿಗೆ ನಿವೇಶನ ಹಂಚಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಬಿ.ವಿ.ರೇವಣ್ಣಸ್ವಾಮಿ, ವರದನಾಯಕ, ಬಸಪ್ಪನಪಾಳ್ಯ ಕುಮಾರ್, ಗೋಪಾಲ್ ನಾಯಕ್, ಶಿವಲಿಂಗಮೂರ್ತಿ, ಪಾರ್ಥಸಾರಥಿ, ಮೂಕನಪಾಳ್ಯ ಸಂಜು ಇತರರು ಹಾಜರಿದ್ದರು.

ಮೈಸೂರು ಮಿತ್ರ

ಸಿಎಂ ಎಸ್ಕಾರ್ಟ್ ವಾಹನ ಪಲ್ಟಿ: ಹಲವರಿಗೆ ಗಾಯ



ಹಿರಿಯೂರು,ನ.22-ಏಕಾಏಕಿ ಎದುರಾದ ಬೈಕ್ ಅನ್ನು ತಪ್ಪಿಸಲು ಹೋಗಿ ಸಿಎಂ ಬೆಂಗಾವಲು ಪಡೆ ವಾಹನ ಪಲ್ಟಿಯಾಗಿರುವ ಘಟನೆ ಚಿತ್ರದುರ್ಗದ ಹಿರಿಯೂರಿನಲ್ಲಿ ನಡೆದಿದೆ. ಕಾರು ಪಲ್ಟಿ ಹೊಡೆದ ರಭಸಕ್ಕೆ ಓರ್ವ ಮಹಿಳೆ ಹಾಗೂ ಆಕೆಯ ಮಗುವಿಗೆ ಗಂಭೀರ ಗಾಯಗಳಾಗಿದ್ದರೆ, ಹಲವು ಮಂದಿ ಪೊಲೀಸರಿಗೂ ಗಾಯಗಳಾಗಿವೆ. ಸರಣಿ ಅಪಘಾತ ಇದಾಗಿದ್ದು, ಅಪಘಾತದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಸಿಎಂ ಬಿಜೆಪಿ ಜನಸಂಕಲ್ಪ ಯಾತ್ರೆಗಾಗಿ ಹಿರಿಯೂರಿಗೆ ಆಗಮಿಸಿದ್ದರು. ಈ ವೇಳೆ ಅಪಘಾತ ಸಂಭವಿಸಿದೆ. ಪಲ್ಟಿಯಾದ ಕಾರು ನಿಯಂತ್ರಣ ಕಳೆದುಕೊಂಡು ಪಾದಚಾರಿಗಳ ಮೇಲೆ ಹರಿದಿದೆ.

ಒಂದನೇ ಪುಟದಿಂದ

ಖಾತಾ ನೀಡಿಕೆ

ಕೊಡಲು ಅಡ್ಡಗಾಲಾಗಿರುವ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಮಾತನಾಡಿದ್ದೇನೆ. ಆ ಸಂದರ್ಭದಲ್ಲಿ ಅವರು, ಕಬಿನಿ ಅಣೆಕಟ್ಟು ಯೋಜನೆಯಿಂದ ಸಂತ್ರಸ್ತರಾದವರು ಬೇರೆ ಊರಿನಲ್ಲಿ ಒತ್ತುವರಿ ಮಾಡಿಕೊಂಡಿದ್ದು, ಅವರು ಭೂಮಿ ತೆರವು ಮಾಡದೇ ಇವರಿಗೆ ಹೇಗೆ ಭೂಮಿ ಕೊಡಲು ಸಾಧ್ಯ ಎಂದು ಕೇಳಿದರು.

ಆದರೆ ಬೇರೆ ಯಾರೋ, ಮತ್ತೆಲ್ಲೋ ಭೂಮಿ ಒತ್ತುವರಿ ಮಾಡಿಕೊಂಡಿದ್ದಕ್ಕೂ ಇದಕ್ಕೂ ಸಂಬಂಧವಿಲ್ಲ. ಒತ್ತುವರಿ ಮಾಡಿಕೊಂಡವರನ್ನು ನೀವು ತೆರವುಗೊಳಿಸಿ,ಆದರೆ ಅದಕ್ಕೂ ಈ ಪ್ರಕರಣಕ್ಕೂ ಹೋಲಿಕೆ ಮಾಡಬೇಡಿ. ಇಲ್ಲಿ ಭೂಮಿಗಾಗಿ ಹೋರಾಡುತ್ತಿರುವವರು ತಮ್ಮ ಹಕ್ಕಿನ ಪರವಾಗಿ ಹೋರಾಡುತ್ತಿದ್ದಾರೆ. ಅವರಿಗೆ ಕೊಡಬೇಕಾದ 300 ಎಕರೆ ಭೂಮಿಯನ್ನು ಕೊಡಲೇಬೇಕು ಎಂದು ಹೇಳಿದ್ದೇನೆ. ಅದೇ ರೀತಿ ಈ ಕುರಿತಂತೆ ಉನ್ನತ ಮಟ್ಟದ ಸಭೆಯನ್ನು ಈ ವಾರ ನಡೆಸಿ, ಕೆಂಚನಹಳ್ಳಿ ಮತ್ತಿತರ ಭಾಗಗಳ ಇಪ್ಪತ್ತೂರು ಹಾಡಿಗಳ ಜನರಿಗೆ ಭೂಮಿ ಕೊಡುವ ಕೆಲಸಕ್ಕೆ ಚಾಲನೆ ನೀಡುವುದಾಗಿ ವಿವರಿಸಿದರು. ಒಂದೊಂದು ಹಾಡಿಯಲ್ಲಿ ಮೂವತ್ತರಿಂದ ನಲವತ್ತು ಕುಟುಂಬಗಳಿರುತ್ತವೆ ಎಂದು ಸ್ಪಷ್ಟಪಡಿಸಿದರು. ಇನ್ನು ಸದರಿ ಭೂಮಿಗಾಗಿ ದಶಕಗಳ ಕಾಲದಿಂದ ಅಲ್ಲಿನ ಜನ ಹೋರಾಟ ನಡೆಸಿದ್ದು ಅವರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಆ ಮೊಕದ್ದಮೆಗಳನ್ನು ಹಿಂಪಡೆಯಲು ಕ್ರಮ ಕೈಗೊಳ್ಳುವುದಾಗಿ ಇದೇ ಸಂದರ್ಭದಲ್ಲಿ ಅವರು ಹೇಳಿದರು.

ಮಂಗಳೂರಿಗೆ ಸಾಕ್ಷ್ಯಗಳು ವರ್ಗಾವಣೆ

ಸಾಕ್ಷ್ಯಗಳಿಂದ ತಿಳಿದುಬಂದಿದೆ ಎಂದು ಆಯುಕ್ತರು, ಎಡಿಜಿಪಿ ಅವರಿಗೆ ತಿಳಿಸಿದರು. ಪ್ರಕರಣ ಸಂಬಂಧ ಮಂಗಳೂರು ಮತ್ತು ಮೈಸೂರು ಪೊಲೀಸರು ಮೊಹಮ್ಮದ್ ಶಾರಿಕ್, ಆತನ ಜೊತೆಯಲ್ಲಿ ಮೊಬೈಲ್ ರಿಪೇರಿ ತರಬೇತಿ ಪಡೆದಿದ್ದ ಮೊಹಮ್ಮದ್ ಸೈಯ್ಯದ್, ಆತನೊಂದಿಗೆ ನಿರಂತರ ಸಂಪರ್ಕದಲ್ಲಿದ್ದನೆನ್ನಲಾದ ರಾಹುಲ್ ಮತ್ತು ಕೊಠಡಿ ಬಾಡಿಗೆಗೆ ನೀಡಿ ಅಲ್ಲಿ ಭಯೋತ್ಪಾದನಾ ಕೃತ್ಯಕ್ಕೆ ಪರೋಕ್ಷ ಬೆಂಬಲ ನೀಡಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಮನೆ ಮಾಲೀಕ ಮೋಹನ್‌ಕುಮಾರ್ ಅವರನ್ನು ಪೊಲೀಸರು ತೀವ್ರ ವಿಚಾರಣೆ ನಡೆಸುತ್ತಿದ್ದಾರೆ.

ತಮಿಳುನಾಡು ತಂಡ: ಅಕ್ಟೋಬರ್ ತಿಂಗಳಲ್ಲಿ ಕೊಯಮತ್ತೂರಿನಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಓರ್ವ ಸಾವನ್ನಪ್ಪಿದ್ದ ಪ್ರಕರಣದ ಹಿನ್ನೆಲೆಯಲ್ಲಿ ತಮಿಳುನಾಡು ಡಿಐಜಿ ಮಟ್ಟದ ಅಧಿಕಾರಿ ನೇತೃತ್ವದಲ್ಲಿ ಅಲ್ಲಿನ ಪೊಲೀಸ್ ತಂಡವು ಮೈಸೂರಿಗೆ ಆಗಮಿಸಿ ತನಿಖೆ ಆರಂಭಿಸಿದೆ. ಅ.23ರಂದು ಕೊಯಮತ್ತೂರಿನಲ್ಲಿ ಮಾರುತಿ-800 ಕಾರಿನಲ್ಲಿ ಸ್ಫೋಟ ಸಂಭವಿಸಿ, ಆರೋಪಿ ಜಮೀಶ್ ಮುಬೀನ್ ಎಂಬ ಇಂಜಿನಿಯರಿಂಗ್ ಪದವೀಧರ ಸಾವನ್ನಪ್ಪಿದ್ದ.

ದೇವರಿಗೆ ಧನ್ಯವಾದ

ಅನ್ನೋದಕ್ಕೆ ಸಾಕ್ಷಿ ಎಂದರು. ಪ್ರತಿದಿನ ಬ್ರಹ್ಮದೇವರ್ಕಲ ಕ್ಷೇತ್ರಕ್ಕೆ ಬಂದು ಆಟೋ ಚಾಲಕ ಪುರುಷೋತ್ತಮ್ ಕೈ ಮುಗಿಯುತ್ತಿದ್ದರು. ಪ್ರತೀ ಆಟೋ ಚಾಲಕರು ಈ ಕ್ಷೇತ್ರದಲ್ಲಿ ಕೈಮುಗಿದು ದಿನ ಆರಂಭ ಮಾಡುತ್ತಿದ್ದರು. ಹೀಗಾಗಿ ಈ ಶಕ್ತಿಯೇ ದೊಡ್ಡ ಅನಾಹುತ ತಪ್ಪಿಸಿದೆ ಅನ್ನೋದು ಭಕ್ತರ ನಂಬಿಕೆಯಾಗಿದೆ ಎಂದರು. ಕುಕ್ಕರ್ ಬಾಂಬ್ ಉಗ್ರರ ಸ್ಲೀಪರ್ ಸೆಲ್ ಆದರೂ ಇಲ್ಲಿ ತನಕ ಬಹಿರಂಗ ಬ್ಲಾಸ್ಟ್ ಆಗಿರಲಿಲ್ಲ. ಇದೇ ಮೊದಲ ಬಾರಿಗೆ ಪ್ರಯತ್ನ ನಡೆದರೂ ವಿಫಲವಾದ ಬಾಂಬ್ ಬ್ಲಾಸ್ಟ್ ಎಂದರು.

ಚೇತರಿಕೆ ಕಾಣದ ಶಾರಿಕ್ ಆರೋಗ್ಯ: ಬಾಂಬರ್ ಉಗ್ರ ಶಾರಿಕ್ ಆರೋಗ್ಯ ಇನ್ನೂ ಸುಧಾರಿಸಿಲ್ಲ. ಶೇ.45ರಷ್ಟು ಸುಟ್ಟ ಗಾಯಗಳೊಂದಿಗೆ ಮೊಹಮದ್ ಶಾರಿಕ್ ನರಳುತ್ತಿದ್ದಾನೆ. ಒಂದು ಕಣ್ಣನ್ನು ತೆರೆಯಲು ಸಾಧ್ಯವಾಗದ ಸ್ಥಿತಿಯಲ್ಲಿದ್ದು, ಮತ್ತೊಂದು ಕಣ್ಣು ಕಾಣದೇ ಶಾರಿಕ್ ನರಳಾಡುತ್ತಿದ್ದಾನೆ. ಆದ್ದರಿಂದ ಇನ್ನೂ ಕೂಡ ಪೊಲೀಸರು ಶಾರಿಕ್ ವಿಚಾರಣೆ ಮಾಡಿಲ್ಲ. ಕೈಗಳು ಸುಟ್ಟಿರುವುದರಿಂದ ಹೀಗಾಗಿ ಬರವಣಿಗೆ ಮೂಲಕ ಹೇಳಿಕೆ ಪಡೆಯಲು ಕೂಡ ಸಾಧ್ಯವಾಗಿಲ್ಲ ಎಂದು ಆಸ್ಪತ್ರೆ ಮತ್ತು ಪೊಲೀಸ್ ಮೂಲಗಳ ಮಾಹಿತಿ ನೀಡಿವೆ.

ರಾಮಾಯಣ ಸೇರ್ಪಡೆ

ಸಿದ್ಧತೆಗೆ ನಾಡಿನ ಶ್ರೇಷ್ಠ ಸ್ವಾಮೀಜಿಗಳಿಗೆ ಜವಾಬ್ದಾರಿ ನೀಡಲು ಸರ್ಕಾರದ ಚಿಂತನೆ ನಡೆಸಿದೆ. ಸುತ್ತೂರು, ಆದಿಚುಂಚನಗಿರಿ, ಸಿದ್ದಗಂಗಾ ಶ್ರೀಗಳು ಸಮಿತಿಯಲ್ಲಿ ಇರಲಿದ್ದಾರೆ. ಸಮಿತಿ ರಚನೆ ಬಗ್ಗೆ ಶಿಕ್ಷಣ ಇಲಾಖೆ ಧರ್ಮಗುರುಗಳು, ಶ್ರೀಗಳೊಂದಿಗೆ ಪ್ರಾಥಮಿಕ ಹಂತದ ಚರ್ಚೆ ನಡೆಸುತ್ತಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಶೀಘ್ರವೇ ಶ್ರೀಗಳ ನೇತೃತ್ವದಲ್ಲಿ ನೈತಿಕ ಶಿಕ್ಷಣ ಪಠ್ಯ ಸಮಿತಿ ರಚನೆ ಆಗಲಿದೆ.

ಈ ಸಮಿತಿ ನೈತಿಕ ಶಿಕ್ಷಣ ಪಠ್ಯ ಹೇಗಿರಬೇಕು ಎಂದು ನಿರ್ಧಾರ ಮಾಡಲಿದೆ. ಯಾವ ಪಠ್ಯ ಸೇರ್ಪಡೆ ಮಾಡಬೇಕು, ಯಾರ ಪಠ್ಯ ಸೇರ್ಪಡೆ ಮಾಡಬೇಕು ಎಂಬುದನ್ನು ನಿರ್ಧರಿಸಲಿದೆ. ರಾಮಾಯಣ, ಮಹಾಭಾರತ, ಭಗವದ್ಗೀತೆ ಸೇರಿದಂತೆ ಯಾವ-ಯಾವ ಮಹಾ ದಾರ್ಶನಿಕ ಗ್ರಂಥಗಳು ಪಠ್ಯದಲ್ಲಿ ಸೇರ್ಪಡೆ ಮಾಡಬೇಕು ಅಂತಾ ಸಮಿತಿ ನಿರ್ಧಾರ ಮಾಡಲಿದೆ. ಪಂಚತಂತ್ರ ಕಥೆಗಳು, ದಾರ್ಶನಿಕರ ಜೀವನ ಚರಿತ್ರೆ, ಅವರು ಆಚರಿಸಿಕೊಂಡು ಬಂದ ನೈತಿಕ ಮೌಲ್ಯಗಳ ಕುರಿತು ಪಠ್ಯ ರಚನೆ ಯಾಗಲಿದೆ. ವಿದ್ಯಾರ್ಥಿಗಳು ಉತ್ತಮ ಜೀವನ ರೂಪಿಸಿಕೊಳ್ಳಲು ಅಗತ್ಯವಾದ ಮೌಲ್ಯಾಧಾರಿತ ನೀತಿಕಥೆಗಳನ್ನ ಪಠ್ಯದಲ್ಲಿ ಸೇರ್ಪಡೆ ಮಾಡುವುದು. ಗುರು-ಹಿರಿಯ ಭಕ್ತಿ, ಸಂಸ್ಕಾರ, ಆಚಾರ- ವಿಚಾರಗಳು, ಸತ್ಯ, ಶಾಂತಿ, ಪ್ರೀತಿ ವಿಶ್ವಾಸಗಳ ಬಗ್ಗೆ ಮಕ್ಕಳಿಗೆ ಪಾಠ ಹೇಳುವ ಕಥೆಗಳು, ವ್ಯಕ್ತಿಗಳ ಜೀವನಾಧಾರಿತ ಪಠ್ಯಗಳ ಸೇರ್ಪಡೆಗೆ ಸಮಿತಿ ಅಗತ್ಯವಾದ ಕ್ರಮ ಕೈಗೊಳ್ಳಲಿದೆ.

ಮುಸ್ಲಿಂ ಸಮುದಾಯಕ್ಕೆ ಸಿಎಂ ಸ್ಥಾನ

ಬಿಜೆಪಿಯಿಂದ ಒಂದೊಂದು ಭಾಗದಲ್ಲಿ ಒಂದೊಂದು ಸಮುದಾಯದ ಸಮಾವೇಶ ನಡೆಸುತ್ತಿದ್ದಾರೆ. ಕಾಂಗ್ರೆಸ್‌ನವರೂ ಸಮಾವೇಶಕ್ಕೆ ಸಿದ್ಧತೆ ನಡೆಸಿದ್ದಾರೆ. ಈ ಪಕ್ಷಗಳ ನಾಯಕರು ಸಮಾವೇಶ ಮಾಡಿ ಮಾತನಾಡುವುದಕ್ಕೂ, ಸಮಾಜದ ಪರಿಸ್ಥಿತಿಗೂ ಹೊಂದಾಣಿಕೆಯೇ ಆಗುತ್ತಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳ ಹಾಸಿಗೆ, ದಿಂಬುಗಳಲ್ಲೂ ಕಾಂಗ್ರೆಸ್‌ನವರು ಹಣ ಹೊಡೆದರು ಎಂಬುದಾಗಿ ಬಿಜೆಪಿ ಆರೋಪಿಸಿತು. ಈಗ ಕಾಂಗ್ರೆಸ್‌ನವರು ಬಿಜೆಪಿ ಮೇಲೆ ದೂರುತ್ತಿದ್ದಾರೆ. ಆದರೆ, ದಲಿತರ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ ಎಂದರು. ಕಾಂಗ್ರೆಸ್‌ನಲ್ಲಿ ಡಾ.ಜಿ.ಪರಮೇಶ್ವರ ಹಾಗೂ ಬಿಜೆಪಿಯಲ್ಲಿ ಗೋವಿಂದ ಕಾರಜೋಳ ಅವರನ್ನು ಉಪಮುಖ್ಯಮಂತ್ರಿ ಮಾಡಿದರೂ ಅಧಿಕಾರ ಚಲಾಯಿಸಲು ಅವರಿಗೆ ಅವಕಾಶ ಕೊಡಲಿಲ್ಲ ಎಂದು ಟೀಕಿಸಿದರು.

ರಾಜ್ಯದಲ್ಲಿ ಲಕ್ಷಾಂತರ ಮಹಿಳೆಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಿಸರ್ಜಿಸಿ ಹಣ ಫಲಾನುಭವಿಗಳಿಗೆ ತಲುಪುತ್ತಿಲ್ಲ. ಇದೊಂದು ಕಾಟಾಚಾರದ ಇಲಾಖೆ. ಮಕ್ಕಳ ಪೌಷ್ಠಿಕಾಂಶ ಆಹಾರದಲ್ಲೂ ದುಡ್ಡು ಹೊಡೆಯುತ್ತಿದ್ದಾರೆ ಎಂದು ಆರೋಪಿಸಿದರು. ನೆಹರೂ ಕುಟುಂಬದಿಂದ ಮೂರು ತಲೆಮಾರಿನಷ್ಟು ದುಡ್ಡು ಮಾಡಿಕೊಂಡಿದ್ದು, ಅವರ ನೆರವಿಗೆ ನಿಲ್ಲಬೇಕೆಂದು ಶ್ರೀನಿವಾಸಪುರದ ಶಾಸಕರು ಹೇಳಿದ್ದಾರೆ. ಕೆ.ಸಿ.ವ್ಯಾಲಿ ಮೂಲಕ ಜನರಿಗೆ ವಿಷ ಕಿಸ್ಸಿ ದುಡ್ಡು ಹೊಡೆದಿದ್ದೇ ಮೂರು ತಲೆಮಾರಿಗಾಗುವಷ್ಟು ಮಾಡಿಕೊಂಡ ಸಾಧನೆ. ಎತ್ತಿನ ಹೊಳೆ ಜಾರಿಯಾಗಲಿಲ್ಲ; ಹಣ ಮಾತ್ರ ಹರಿಯಿತು. ಈಗ ಅವರ ತಲೆ ಕೂದಲೂ ಉದುರಿ ಹೋಗಿದೆ ಎಂದು ವ್ಯಂಗ್ಯವಾಡಿದರು. ಹಲವು ಅನಾರೋಗ್ಯ ಸಮಸ್ಯೆ ಹೊತ್ತು ನನ್ನ ಮನೆ ಬಾಗಿಲಿಗೆ ಬರುತ್ತಿದ್ದಾರೆ. ನಾನು ಎಷ್ಟು ಮಂದಿಗೆ ಸಹಾಯ ಮಾಡಲು ಸಾಧ್ಯ. ಸಾರ್ವಜನಿಕರ ದರ್ಶನಕ್ಕೆ ಮನೆಯಿಂದ ಹೊರಗಡೆ ಬಂದರೆ ರೂ. 50 ಲಕ್ಷದಿಂದ ರೂ. 1 ಕೋಟಿವರೆಗೆ ಬೇಕಾಗುತ್ತದೆ. ವೈಯಕ್ತಿಕವಾಗಿ ಎಷ್ಟು ಪರಿಹಾರ ನೀಡಲು ಸಾಧ್ಯ ಎಂದು ಪ್ರಶ್ನಿಸಿದರು.

ಚುನಾವಣೆ ವೇಳೆ ಮತಕ್ಕಾಗಿ ಹಣ ಪಡೆಯುವುದಿಲ್ಲ ಎಂಬ ಮನಸ್ಥಿತಿ ಮತದಾರರಿಗೆ ಬರಬೇಕು. ಹಣ ಹರಿದಾಡುವುದರ ಮೇಲೆ ನಿರ್ಬಂಧ ವಿಧಿಸಲು ಸರ್ಕಾರ ಹಾಗೂ ಚುನಾವಣಾ ಆಯೋಗದಿಂದ ಸಾಧ್ಯವಿಲ್ಲ. ನಮ್ಮ ಸರ್ಕಾರ ಬಂದರೆ ಈ ನಿಟ್ಟಿನಲ್ಲಿ ಪ್ರಯತ್ನ ನಡೆಸುತ್ತೇವೆ ಎಂದರು. ಚಾಮರಾಜನಗರದಲ್ಲಿ ದಲಿತ ಮಹಿಳೆ ನೀರು ಕುಡಿದಿದ್ದಕ್ಕೆ ಗ್ರಾಮದವರು ಟ್ಯಾಂಕ್ ಶುದ್ಧೀಕರಿಸಿರುವುದು ಅಮಾನವೀಯ ಘಟನೆ. ಈ ಸಂಬಂಧ ಪ್ರಮುಖ ಪತ್ರಿಕೆಯಲ್ಲಿ ಸಂಪಾದಕೀಯವೂ ಬಂದಿದೆ ಎಂದು ಕುಮಾರಸ್ವಾಮಿ ಹೇಳಿದರು. ಪಕ್ಷ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದರೆ ದಲಿತರ ಸಮಸ್ಯೆ ಗಳಿಗೆ ಪ್ರಾಮಾಣಿಕವಾಗಿ ಹಾಗೂ ಮುಕ್ತವಾಗಿ ಸ್ಪಂದಿಸುವ ಅದೇ ಸಮುದಾಯದ ವ್ಯಕ್ತಿಯನ್ನು ಉಪಮುಖ್ಯಮಂತ್ರಿ ಮಾಡುವುದು ಬರೀ ಟಿಕೆಟ್ ಹಚ್ಚಿ ಹಾಕಿಕೊಳ್ಳಲು ಅಲ್ಲ ಎಂದರು.

'ಜೆಎಸ್‌ಎಸ್ ರಂಗೋತ್ಸವ'ಕ್ಕೆ ಚಿತ್ರನಟ ಕಾರ್ತಿಕ್ ಮಹೇಶ್ ಚಾಲನೆ

ಸೆಲ್‌ಫೋನ್ ವ್ಯಸನದಿಂದ ವಿದ್ಯಾರ್ಥಿಗಳಲ್ಲಿ ಕಡಿಮೆಯಾಗುತ್ತಿರುವ ಜ್ಞಾಪಕಶಕ್ತಿ

ಮೈಸೂರು, ನ.22(ಆರ್‌ಕೆಬಿ)– ಜೆಎಸ್‌ಎಸ್ ಮಹಾವಿದ್ಯಾಪೀಠದ ಜೆಎಸ್‌ಎಸ್ ಕಲಾಮಂಟಪ ಆಯೋಜಿಸಿರುವ ಮೂರು ದಿನಗಳ ವಾರ್ಷಿಕ ನಾಟಕೋತ್ಸವ 'ಜೆಎಸ್‌ಎಸ್ ರಂಗೋತ್ಸವ–2022' ಮಂಗಳವಾರ ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆರಂಭವಾಯಿತು.

ಕಿರುತೆರೆ, ಚಲನಚಿತ್ರ ನಟ ಕಾರ್ತಿಕ್ ಮಹೇಶ್ ಡೋಲು ಬಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ವಿದ್ಯಾರ್ಥಿಗಳು ಮತ್ತು ಮಕ್ಕಳಲ್ಲಿ ಸೆಲ್ ಫೋನ್ ಚಟ ಹೆಚ್ಚಾಗುತ್ತಿದೆ ಸೆಲ್ ಫೋನ್ ವ್ಯಸನಿಗಳಲ್ಲಿ ಜ್ಞಾಪಕಶಕ್ತಿ ಕಡಿಮೆಯಾಗುತ್ತಿದೆ ಎಂಬುದು ಅಧ್ಯಯನದಿಂದ ತಿಳಿದಿದೆ ಹೀಗಾಗಿ ವಿದ್ಯಾರ್ಥಿಗಳು ಇಂತಹ ವ್ಯಸನದಿಂದ ಮುಕ್ತರಾಗಲು ಸಂಗೀತ, ನೃತ್ಯ, ನಾಟಕ ಸೇರಿದಂತೆ ಇನ್ನಿತರೆ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಜೀವನದ ಸವಾಲುಗಳನ್ನು ಎದುರಿಸಲು ಯುವಕರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಬೇಕು. ದಶಕದ ಹಿಂದೆ ಜೆಎಸ್‌ಎಸ್ ಕಾಲೇಜಿನಲ್ಲಿ ಎಳೆಯರ ಮೇಳದಲ್ಲಿ ಪಾಲ್ಗೊಂಡು ನಟನೆಯನ್ನು ಕಲಿತದ್ದನ್ನು ಸ್ಮರಿಸಿದ ಅವರು, ನಾಟಕದಲ್ಲಿ ನಟಿಸಿದ ಹಾಸ್ಯ ಪಾತ್ರವನ್ನು ಮರೆಯಲು ಸಾಧ್ಯವಿಲ್ಲ ಎಂದರು.

ಪಠ್ಯೇತರ ಹಾಗೂ ಮನರಂಜನಾ ಚಟುವಟಿಕೆ ಗಳಿಗೆ ಫಿಟ್ನೆಸ್ ಮುಖ್ಯ. ಇಂತಹ ನಾಟಕೋತ್ಸವಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ವೃದ್ಧಿಯಾಗುತ್ತದೆ. ಹಾಗಾಗಿ ಕಾಲೇಜು ವಿದ್ಯಾರ್ಥಿ ಗಳಿಗಾಗಿ ವಿಶೇಷವಾಗಿ ಆಯೋಜಿಸಿರುವ ನಾಟಕೋತ್ಸವ ವನ್ನು ವಿದ್ಯಾರ್ಥಿಗಳು ತಮ್ಮಲ್ಲಿ ಅಡಗಿರುವ ಪ್ರತಿಭೆ ಯನ್ನು ಪ್ರದರ್ಶಿಸಲು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಮಾತನಾಡಿ, ನಾಟಕ ಮತ್ತು ಇತರ ಕಲಾ ಪ್ರಕಾರಗಳನ್ನು ಉತ್ತೇಜಿಸುವ ಪ್ರಯತ್ನವಾಗಿ, ಜೆಎಸ್‌ಎಸ್ ಮಹಾವಿದ್ಯಾಪೀಠವು ದಶಕಗಳ ಹಿಂದೆ ಕಲಾಮಂಟಪವನ್ನು ಪ್ರಾರಂಭಿಸಿತು. ಕಲಾಮಂಟಪವು ಕಳೆದ ಒಂದು ದಶಕದಿಂದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಚ್ಚು ಉತ್ತೇಜನ ನೀಡಿದೆ. ರಂಗೋತ್ಸವವನ್ನು ಮೈಸೂರಿನ ಸುತ್ತಮುತ್ತಲಿನ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮೊದಲ ದಿನವಾದ ಮಂಗಳವಾರ ಸಿದ್ದಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಿಂದ ಕೆ.ರಾಮಯ್ಯ ಚಿತ್ರಕಥೆ, ಶಕುಂತಳಾ ಹೆಗಡೆ ನಿರ್ದೇಶನದ 'ಒಗಟಿನ ರಾಣಿ' ನಾಟಕ ಪ್ರದರ್ಶನಗೊಂಡಿತು.

ನಾಳೆ (ನ.23) ಕ್ಯಾತನಹಳ್ಳಿ ರಾಮಣ್ಣ ರಚನೆಯ 'ಹಲಗಲಿಯ ಬೇಡರು' ನಾಟಕ ಬೆಳಗ್ಗೆ 11.30 ಮತ್ತು ಮಧ್ಯಾಹ್ನ 2.30ಕ್ಕೆ ಗುಂಡ್ಲುಪೇಟೆಯ ಬರಗಿಯ ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಪ್ರದರ್ಶನಗೊಳ್ಳಲಿದೆ. ಈ ನಾಟಕವನ್ನು ಮಂಜುನಾಥ್ ಕಾಚಕ್ಕಿ ನಿರ್ದೇಶಿಸಿದ್ದಾರೆ.

ನ.24ರಂದು ರಂಗೋತ್ಸವ ಸಮಾರೋಪಗೊಳ್ಳಲಿದ್ದು, ಅಂದು ಬೆಳಗ್ಗೆ 11 ಮತ್ತು ಸಂಜೆ 6.30ಕ್ಕೆ .ಸುಜಾತಾ ಅಕ್ಕಿ ಅವರ ರಚನೆಯ 'ಚಾವು ಚೆಲುವೆ' ನಾಟಕವನ್ನು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರು ಪ್ರಸ್ತುತಪಡಿಸಲಿದ್ದಾರೆ ಎಂದರು. ಚಂದ್ರಶೇಖರ್ ಹೆಗ್ಗೋಠಾರ ಸಂಗೀತ, ಜೀವನ್‌ಕುಮಾರ್ ಬಿ.ಹೆಗ್ಗೋಡು ನಿರ್ದೇಶಿಸಿದ್ದಾರೆ.



ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಜೆಎಸ್‌ಎಸ್ ಕಲಾಮಂಟಪ ಆಯೋಜಿಸಿರುವ ಜೆಎಸ್‌ಎಸ್ ರಂಗೋತ್ಸವ–2022ಕ್ಕೆ ಕಿರುತೆರೆ, ಚಲನಚಿತ್ರ ನಟ ಕಾರ್ತಿಕ್ ಮಹೇಶ್ ಡೋಲು ಬಾರಿಸುವ ಮೂಲಕ ಚಾಲನೆ ನೀಡಿದರು. ಚಿತ್ರದಲ್ಲಿ ಸಂಗೀತ ನಿರ್ದೇಶಕ ಚಂದ್ರಶೇಖರ ಹೆಗ್ಗೋಠಾರ, ಕನ್ನಡ– ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಇನ್ನಿತರರನ್ನು ಕಾಣಬಹುದು.

ನ.25, 26ರಂದು 'ಸಹಕಾರಿ ನ್ಯಾಯಶಾಸ್ತ್ರ' ಕುರಿತು ಕರ್ನಾಟಕ ಮೆಡಿಕೋ ಲೀಗಲ್ ಸೊಸೈಟಿ ಸಮ್ಮೇಳನ

ಅಪರಾಧದ ವೈಜ್ಞಾನಿಕ ತನಿಖೆಯ ವೃತ್ತಿಪರರು ಭಾಗಿ



ಮೈಸೂರು,ನ.22(ಪಿಎಂ)– ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ನ್ಯಾಯ ವೈದ್ಯಶಾಸ್ತ್ರ ವಿಭಾಗದ ವತಿಯಿಂದ ನ.25 ಮತ್ತು 26ರಂದು 'ಸಹಕಾರಿ ನ್ಯಾಯಶಾಸ್ತ್ರ (ಕೊಲಾಬ್ರೇಟಿವ್ ಫೋರೆನ್ಸಿಕ್ಸ್)' ವಿಷಯ ಕುರಿತಂತೆ ಕರ್ನಾಟಕ ಮೆಡಿಕೋ ಲೀಗಲ್ ಸೊಸೈಟಿಯ ರಾಜ್ಯ ಮಟ್ಟದ 30ನೇ ವಾರ್ಷಿಕ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ನ್ಯಾಯ ವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಸೊಸೈಟಿ ಅಧ್ಯಕ್ಷ ಡಾ.ಎಂ.ಅರುಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಾರ್ಷಿಕ ಸಮ್ಮೇಳನವು ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ನಡೆಯಲಿದೆ. ನ.25ರಂದು ಬೆಳಗ್ಗೆ 9ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಹೈಕೋರ್ಟ್‌ನ ನಿವೃತ್ತ ನ್ಯಾಯ ಮೂರ್ತಿ ಕೆ.ಎನ್.ಫಣೀಂದ್ರ ಮುಖ್ಯ ಅತಿಥಿ ಯಾಗಿ ಪಾಲ್ಗೊಳ್ಳಲಿದ್ದಾರೆ. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ.ಸುರೀಂದ್ರ ಸಿಂಗ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ.ಬಿ.ಮಂಜುನಾಥ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಅಪರಾಧದ ವೈಜ್ಞಾನಿಕ ತನಿಖೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡುವ ವಿವಿಧ ವೃತ್ತಿಪರರು ಮತ್ತು ತಜ್ಞರು ಸಮ್ಮೇಳನದಲ್ಲಿ ಪಾಲ್ಗೊಳ್ಳ ಲಿದ್ದಾರೆ. ಫೋರೆನ್ಸಿಕ್ ಮೆಡಿಸಿನ್, ಸೈಬರ್ ಫೋರೆನ್ಸಿಕ್, ಫೋರೆನ್ಸಿಕ್ ಆಂಥ್ರೋಪಾಲಜಿ, ಕ್ರಿಮಿನಾಲಜಿ ಮತ್ತು ಫೋರೆನ್ಸಿಕ್ ವಿಜ್ಞಾನಗಳ ಸಂಬಂಧಿತ ಶಾಖೆಗಳಲ್ಲಿನ ಪ್ರಸ್ತುತ ಬೆಳವಣಿಗೆ ಬಗ್ಗೆ ವಿಷಯ ಮಂಡನೆ, ಚರ್ಚೆಗಳು ನಡೆಯಲಿವೆ ಎಂದು ಹೇಳಿದರು.

ಫೋರೆನ್ಸಿಕ್ ಮೆಡಿಸಿನ್‌ನ ಸ್ನಾತಕೋತ್ತರ ವಿದ್ಯಾರ್ಥಿಗಳು, ಫೋರೆನ್ಸಿಕ್ ವಿಜ್ಞಾನಿಗಳು, ಪೊಲೀಸ್ ಅಧಿಕಾರಿಗಳು ಮತ್ತು ವಕೀಲರಿಗೆ ಸಾಕಷ್ಟು ತರಬೇತಿ ಅಗತ್ಯವಿದೆ. ಹಾಗಾಗಿ ಸಮ್ಮೇಳನವು ಈ ಎಲ್ಲಾ ವೃತ್ತಿಪರರಿಗೆ ಉಪಯುಕ್ತವಾಗಲಿದೆ. ರಾಜ್ಯವೂ ಸೇರಿದಂತೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ದೆಹಲಿ ಸೇರಿದಂತೆ ವಿವಿಧ ಭಾಗಗಳ 200ಕ್ಕೂ ಹೆಚ್ಚು ಮಂದಿ ಈ ಕ್ಷೇತ್ರಗಳ ವೃತ್ತಿಪರರು ಸಮ್ಮೇಳನದಲ್ಲಿ ಪಾಲ್ಗೊಳ್ಳಲು ನೋಂದಾಯಿಸಿದ್ದಾರೆ. ಸಮ್ಮೇಳನದಲ್ಲಿ ಭಾಗ ವಹಿಸಲು ತಲಾ 5 ಸಾವಿರ ರೂ. ನೋಂದಣಿ ಶುಲ್ಕ ನಿಗದಿ ಮಾಡಲಾಗಿದೆ ಎಂದರು.

ನೋಂದಾಯಿತ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆ ಸಹ ನಡೆಯಲಿದೆ. ಫೋರೆನ್ಸಿಕ್ ಮೆಡಿಸಿನ್ ಸಿಬ್ಬಂದಿ ಮತ್ತು ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ ಸಾಧನೆಗಾಗಿ ವಿವಿಧ ಪುರಸ್ಕಾರಗಳನ್ನು ಸಮ್ಮೇಳನದಲ್ಲಿ ನೀಡಲಾಗುವುದು. ಬೆಂಗಳೂರಿನ ಎಂಎಸ್ ರಾಮಯ್ಯ ವೈದ್ಯಕೀಯ ಕಾಲೇಜಿನ ಡಾ.ವರ್ಷಾ ಪಾಟೀಲ್ ಮತ್ತು ಶಿವಮೊಗ್ಗ ವೈದ್ಯಕೀಯ ಕಾಲೇಜಿನ ಡಾ.ಸೂರಜ್‌ಪಟೇಲ್ ಅವರಿಗೆ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಪ್ರದಾನ ಮಾಡ ಲಾಗುವುದು. ಇಂತಹ ಹಲವು ಪುರಸ್ಕಾರ ಗಳನ್ನು ಅನೇಕ ಸಾಧಕರಿಗೆ ಉದ್ಘಾಟನಾ ಸಮಾರಂಭದಲ್ಲಿ ಪ್ರದಾನ ಮಾಡ ಲಾಗುವುದು ಎಂದು ವಿವರಿಸಿದರು.

ಸ್ಥಳದಲ್ಲಿಯೂ ನೋಂದಣಿಗೆ ಅವ ಕಾಶವಿದ್ದು, ಹೆಚ್ಚಿನ ವಿವರಗಳಿಗೆ ಮೊ.ಸಂ. 98866 73946 ಅನ್ನು ಸಂಪರ್ಕಿಸ ಬಹುದು ಎಂದರು. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಆಡಳಿತಾಧಿಕಾರಿ ಸತೀಶ್‌ಚಂದ್ರ, ಕಾಲೇಜಿನ ಫೋರೆನ್ಸಿಕ್ ಮೆಡಿಸಿನ್ ವಿಭಾಗದ ಪ್ರಾಧ್ಯಾಪಕರಾದ ಡಾ.ಹೆಚ್.ವಿ.ಚಂದ್ರಕಾಂತ್, ಡಾ.ಜಿ.ಬಿ. ಅರವಿಂದ್, ಸೊಸೈಟಿಯ ಖಜಾಂಚಿ ಡಾ.ಸ್ಮಿತಾರಾಣಿ ಗೋಷ್ಠಿಯಲ್ಲಿದ್ದರು.

ನ.25, 26ರಂದು 'ಸಮಾಜ ವಿಜ್ಞಾನದಲ್ಲಿ ಸಂಶೋಧನಾ ವಿಧಾನ' ಕುರಿತು ಕಾರ್ಯಾಗಾರ



ಮೈಸೂರು,ನ.22(ಪಿಎಂ)– ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ಎಂ.ಕಾಂ ವಿಭಾಗ, ವಿದ್ಯಾವರ್ಧಕ ಸಂಶೋಧನಾ ಪ್ರತಿಷ್ಠಾನ ಮತ್ತು ಐಕ್ಯೂಎಸಿ ಘಟಕದ ಸಂಯುಕ್ತಾಶ್ರಯದಲ್ಲಿ ನ.25 ಮತ್ತು 26ರಂದು 'ಸಮಾಜ ವಿಜ್ಞಾನದಲ್ಲಿ ಸಂಶೋಧನಾ ವಿಧಾನ' ಕುರಿತು ಪ್ರಾಯೋಗಿಕ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಕಾರ್ಯಾಗಾರ ನಡೆಯಲಿದೆ. ನ.25ರಂದು ಬೆಳಗ್ಗೆ 9.30ಕ್ಕೆ ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಹೆಚ್.ರಾಜಶೇಖರ್ ಕಾರ್ಯಾಗಾರ ಉದ್ಘಾಟಿಸಲಿದ್ದಾರೆ. ಬೆಂಗಳೂರಿನ ಜ್ಞೇವಿಯರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಎಂಟರ್‌ಪ್ರೈನರ್‌ಶಿಪ್‌ನ ಪ್ರಾಧ್ಯಾಪಕ ಡಾ.ಎಂ.ವಿ.ಮಹೇಶ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲರಾಮಣ್ಣವರ್ ಭಾಗವಹಿಸುವರು. ಸಂಶೋಧನಾ ಮೇಲ್ವಿಚಾರಕರು, ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ಮತ್ತು ಸಮಾಜ ವಿಜ್ಞಾನದ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಬಹುದು ಎಂದು ಹೇಳಿದರು.

100 ಮಂದಿ ಭಾಗವಹಿಸಲು ಅವಕಾಶವಿದ್ದು, ಈಗಾಗಲೇ 47 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಸಂಶೋಧನಾ ಮೇಲ್ವಿಚಾರಕರು, ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳಿಗೆ 500 ರೂ. ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 250 ರೂ. ನೋಂದಣಿ ಶುಲ್ಕ ನಿಗದಿ ಮಾಡಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 99006 45644 ಅಥವಾ 96320 97838 ಅನ್ನು ಸಂಪರ್ಕಿಸಬಹುದು ಎಂದರು. ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ.ಎಸ್.ಪೂರ್ಣಿಮಾ, ಪ್ರೊ.ಪ್ರಶಾಂತ್‌ಕುಮಾರ್ ಗೋಷ್ಠಿಯಲ್ಲಿದ್ದರು.



ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಗಾನಭಾರತಿ ವೀಣೆ ಶೇಷಣ್ಣ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾದಂಬರಿಕಾರ ಎಂ.ಬಿ. ಸಂತೋಷ್ ಅವರ 'ವಚನ ಮಾಧುರ್ಯ' ಆಧುನಿಕ ವಚನಗಳ ಸಂಕಲನ ಮತ್ತು ಶ್ರೀಮತಿ ಸಿ. ವಾಣಿ ರಾಘವೇಂದ್ರ ಅವರ ಕುಹರದೊಳಗೆ ಮಕ್ಕಳು ಮತ್ತು...? ಮಕ್ಕಳ ನಾಟಕ ಕೃತಿಗಳ ಲೋಕಾರ್ಪಣೆ ನಡೆಯಿತು. ಈ ವೇಳೆ ಎ. ಹೇಮಗಂಗಾ, ಪ್ರೊ. ಮೊರಬದ ಮಲ್ಲಿಕಾರ್ಜುನ, ಎಂ. ಚಂದ್ರಶೇಖರ್, ಡಾ. ಹೆಚ್.ಎನ್. ವಿಶ್ವನಾಥ್, ಸಿ. ವಾಣಿ ರಾಘವೇಂದ್ರ, ಬಿ. ಶೋಭಾ, ಎನ್.ಸಿ. ಮಮತಾ ಮತ್ತಿತರರು ಹಾಜರಿದ್ದರು.

ಚಾಮರಾಜ ಕ್ಷೇತ್ರದ ಮಳೆ ನೀರು ಚರಂಡಿ ದುರಸ್ತಿಗೆ 15 ಕೋಟಿ ಅನುದಾನ ಮಂಜೂರು

ಶಾಸಕ ಎಲ್.ನಾಗೇಂದ್ರ ಸ್ಥಳ ಪರಿಶೀಲನೆ



ಮೈಸೂರು, ನ.22(ಆರ್‌ಕೆಬಿ)– ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಯಲ್ಲಿ ಮಳೆ ನೀರು ಚರಂಡಿಗಳ ಮರು ನಿರ್ಮಾಣ, ದುರಸ್ತಿ ಅಭಿವೃದ್ಧಿ ಕಾಮಗಾರಿಗಳಿ ಗಾಗಿ ಶಾಸಕ ಎಲ್.ನಾಗೇಂದ್ರ ಅವರು ಮುಖ್ಯಮಂತ್ರಿಗಳ ಗಮನ ಸೆಳೆದು, 15 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿದ್ದಾರೆ.

ಈ ಅನುದಾನದಲ್ಲಿ ಯಾವ ಯಾವ ಕಡೆಗಳಲ್ಲಿ ಮಳೆ ನೀರು ಚರಂಡಿಗಳ ಮರು ನಿರ್ಮಾಣ, ದುರಸ್ತಿ, ಅಭಿವೃದ್ಧಿ ಕಾಮಗಾರಿ ಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಶಾಸಕರು ಮಂಗಳವಾರ ನಗರಪಾಲಿಕೆ ಉಪ ಆಯುಕ್ತರು, ಪಾಲಿಕೆ ಸದಸ್ಯರು, ವಲಯ ಕಚೇರಿ ಅಭಿವೃದ್ಧಿ ಅಧಿಕಾರಿಗಳು, ಇಂಜಿನಿ ಯರುಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದರು. ಶೀಘ್ರವಾಗಿ ಅಂದಾಜು ಪಟ್ಟಿ ತಯಾರಿಸಿ, ನಿಯಮಾನುಸಾರ ಟೆಂಡರ್ ಕರೆದು ಕಾಮ ಗಾರಿಗಳನ್ನು ಶೀಘ್ರ ಕೈಗೆತ್ತಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕ್ಷೇತ್ರದ ಮಳೆ ನೀರು ಚರಂಡಿಗಳಲ್ಲಿ ಹಲವಾರು ಕಡೆ ಚರಂಡಿ ಗೋಡೆಗಳು ಕುಸಿದಿವೆ. ಮತ್ತೆ ಕೆಲವೆಡೆ ಮಳೆ ನೀರು ಚರಂಡಿಯ ನೆಲಹಾಸುಗಳು ಕಿತ್ತು ಮಳೆಗಾಲದಲ್ಲಿ ಹಲವು ಕಡೆಗಳಲ್ಲಿ ನೀರು ಉಕ್ಕಿ ಹರಿಯುತ್ತಿತ್ತು. ತಗ್ಗು ಪ್ರದೇಶಗಳ ಮನೆ ಮತ್ತು ರಸ್ತೆಗಳಿಗೆ ನೀರು ನುಗ್ಗಿ ಜನರಿಗೆ ತೊಂದರೆಯಾಗಿತ್ತು. ಇದನ್ನು ಮನಗಂಡ ಶಾಸಕ ಎಲ್.ನಾಗೇಂದ್ರ, ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅನುದಾನ ಮಂಜೂರು ಮಾಡಿಸಿದ್ದಾರೆ.

ಮೈಸೂರಿನ ವಯೋವೃದ್ಧರಿಗಾಗಿ 'ಹೃದಯ ಸ್ಪಂದನ' ಆಪ್ತ ಸಮಾಲೋಚನಾ ಕೇಂದ್ರ

ಮೈಸೂರು, ನ.22(ಆರ್‌ಕೆಬಿ)– ಮೈಸೂರಿನ ಹಾರ್ಟ್ ಸಂಸ್ಥೆಯು ಕುವೆಂಪುನಗರ 2ನೇ ಹಂತದಲ್ಲಿರುವ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಡಿಯಲ್ಲಿ ನಡೆಸುತ್ತಿರುವ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದಲ್ಲಿ ಸ್ಥಾಪಿಸಿರುವ 'ಹೃದಯ ಸ್ಪಂದನ' ಆಪ್ತ ಸಮಾಲೋಚನಾ ಕೇಂದ್ರವನ್ನು ನ್ಯೂ ಡಯಕೇರ್ ಸೆಂಟರ್‌ನ ಮುಖ್ಯಸ್ಥ ಡಾ.ಎ.ಆರ್.ರೇಣುಕಾಪ್ರಸಾದ್ ಉದ್ಘಾಟಿಸಿದರು.



ಮೈಸೂರಿನ ವಯೋವೃದ್ಧರಿಗೆ ಸ್ಪಂದಿಸಲಿರುವ ಈ ಕೇಂದ್ರದ ಸದುಪಯೋಗ ಪಡೆದುಕೊಳ್ಳುವಂತೆ ಹಿರಿಯ ನಾಗರಿಕರಿಗೆ ಸಲಹೆ ನೀಡಿದರು.

ಹಾರ್ಟ್ ಸಂಸ್ಥೆಯ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ಪ್ರಸ್ತುತ ವಯೋವೃದ್ಧರಲ್ಲಿ ಕಾಣಿಸಿ ಕೊಳ್ಳುತ್ತಿರುವ ದೈಹಿಕ ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳು, ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳಿಂದ ಖಿನ್ನತೆಗೆ ಒಳಗಾಗುತ್ತಿರುವವರಿಗೆ ಸ್ಪಂದಿಸಲು ಮತ್ತು ಸಮಸ್ಯೆಗಳ ಪರಿಹಾರಕ್ಕಾಗಿ ಆಪ್ತ ಸಮಾಲೋಚಿಸಲು 'ಹೃದಯ ಸ್ಪಂದನ' ನೆರವಾಗಲಿದೆ ಎಂದರು.

ಹಿಮಾಲಯ ಸಂಸ್ಥೆಯ ಮುಖ್ಯಸ್ಥ ಅನಂತ ಮಾತನಾಡಿ, ಈ ಕೇಂದ್ರವು ಕುಟುಂಬದ ಕಲಹಗಳು, ಮನಸ್ತಾಪಗಳು ಹಾಗೂ ಹೊಂದಾಣಿಕೆ ಕೊರತೆಯಿಂದಾಗುವ ಖಿನ್ನತೆಗಳಿಗೆ ಆಪ್ತ ಸಮಾಲೋಚನೆ ಮೂಲಕ ಪರಿಹಾರ ನೀಡಲು ಪ್ರಯತ್ನಿಸುತ್ತದೆ ಎಂದು ಹೇಳಿದರು.

ನಾಳೆ ರಂಗದಿಗ್ಗಜರಿಗೆ ಅಭಿನಂದನೆ

ಪುಸ್ತಕ, ಧ್ವನಿಸುರಳಿ ಬಿಡುಗಡೆ, ರಂಗಗೀತೆಗಳ ಗಾಯನ ಕಾರ್ಯಕ್ರಮ

ಮೈಸೂರು,ನ.22(ಪಿಎಂ)– ಬೆಂಗಳೂರಿನ ರಂಗರತ್ನಾಕರ ವೃತ್ತಿ ರಂಗಭೂಮಿ ಸಂಸ್ಥೆ ವತಿಯಿಂದ ನ.24ರಂದು ಮೈಸೂರಿನ ರಾಮ ಕೃಷ್ಣನಗರದ ರಮಾಗೋವಿಂದ ರಂಗಮಂದಿರ ದಲ್ಲಿ ರಂಗದಿಗ್ಗಜರಿಗೆ ಅಭಿನಂದನೆ, ಪುಸ್ತಕ, ಧ್ವನಿಸುರಳಿ ಬಿಡುಗಡೆ ಮತ್ತು ರಂಗಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಹೆಚ್.ಎಸ್.ಗೋವಿಂದಗೌಡ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ಮೇಲುಕೋಟೆಯ ವಂಗೀಪುರ ಮಠದ ಶ್ರೀ ಇಳೈಆಳ್ವಾರ್ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹಿರಿಯ ಸಾಹಿತಿ ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಹಿರಿಯ ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ರಂಗಭೂಮಿಯ 6 ಮಂದಿ ಹಿರಿಯ ಸಾಧಕರನ್ನು ಅಭಿ ನಂದಿಸಲಾಗುವುದು. ಎಂ.ಎಸ್.ವೆಂಕಟರಾಂ, ಇಂದಿರಮ್ಮ, ಡಿ.ರಾಮು, ಪ್ರೊ.ಎ.ವಿ. ಸೂರ್ಯ ನಾರಾಯಣಸ್ವಾಮಿ, ಕಿರಗಸೂರು ರಾಜಪ್ಪ, ಚೌಡಪ್ಪದಾಸ್ ಅವರನ್ನು ಅಭಿ ನಂದಿಸಲಾಗುವುದು. ಅಲ್ಲದೆ, ಗುಬ್ಬಿ ಕಂಪನಿಯ ಹಿರಿಯ ಕಲಾವಿದೆ ಎನ್.ಶಾಂತಮ್ಮ ಅವರಿಗೆ ರಂಗಗೌರವ ಸಲ್ಲಿಸಲಾಗುವುದು. ಬಳಿಕ ರಂಗಸಂಗೀತ ಗಾಯನ ಕಾರ್ಯ ಕ್ರಮ ನಡೆಯಲಿದೆ ಎಂದು ತಿಳಿಸಿದರು.

ಜೊತೆಗೆ 'ರಂಗಭೂಮಿ' ಎಂಬ ಮಾಸ ಪತ್ರಿಕೆಯಲ್ಲಿ 1925ರಿಂದ 1938ರವರೆಗೆ ಪ್ರಕಟಗೊಂಡ ಆಯ್ದ ಲೇಖನಗಳ ಸಂಗ್ರಹಿಸಿ ಪ್ರಕಟಿಸಿರುವ 'ರಂಗಭೂಮಿ' ಪುಸ್ತಕ ಬಿಡುಗಡೆ ಮಾಡಲಾಗುವುದು. ಈ ಪುಸ್ತಕ 450 ಪುಟಗಳನ್ನು ಹೊಂದಿದ್ದು, ಇದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಬಿಡುಗಡೆ ಮಾಡಲಿದ್ದಾರೆ ಎಂದರು.

ಅಲ್ಲದೆ, ನಂಜನಗೂಡು ಶ್ರೀಕಂಠಶಾಸ್ತ್ರಿ ಅವರ 'ವಿಷ್ಣುಲೀಲಾ' ಕೃತಿಯನ್ನು ಹುರ ಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರಿ ಬಿಡುಗಡೆ ಮಾಡಲಿದ್ದಾರೆ. ಬೆಳ್ಳಾವೆ ನರಹರಿಶಾಸ್ತ್ರಿ ಅವರ 'ಶ್ರೀಕೃಷ್ಣಗಾರುಡಿ' ಮತ್ತು 'ಮಹಾತ್ಮ ಕಬೀರದಾಸ್' ಕೃತಿಗಳು ಹಾಗೂ ರಂಗ ಗೀತೆಗಳ ಧ್ವನಿಸುರಳಿಯನ್ನು ರಂಗ ಪ್ರೋತ್ಸಾಹಕ ಪ್ರೊ.ಎ.ವಿ.ಸೂರ್ಯ ನಾರಾಯಣಸ್ವಾಮಿ ಬಿಡುಗಡೆ ಮಾಡಲಿದ್ದಾರೆ. ಜೊತೆಗೆ 'ಶಿವ ಕುಮಾರ' ಮತ್ತು 'ನಾಟಕರತ್ನ ಟಿ.ಎಸ್. ದೊರೆಸ್ವಾಮಿ (ಆತ್ಮಕತೆ)' ಕೃತಿಗಳನ್ನು ಪ್ರಸಾ ರಾಂಗದ ನಿವೃತ್ತ ನಿರ್ದೇಶಕ ಕೆ.ಟಿ.ವೀರಪ್ಪ ಬಿಡುಗಡೆ ಮಾಡಲಿದ್ದಾರೆ ಎಂದು ಹೇಳಿದರು. ಸಂಸ್ಥೆಯ ಜಂಟಿ ಕಾರ್ಯದರ್ಶಿ ಕೆಂಪೇಗೌಡ, ಉಪಾಧ್ಯಕ್ಷ ಎಂ.ಎಸ್.ವೆಂಕಟರಾಂ ಕುಪ್ಪಾ, ಗೋಷ್ಠಿಯಲ್ಲಿದ್ದರು.

4.8 ಕೋಟಿ ವೆಚ್ಚದ ರಸ್ತೆ, ಚರಂಡಿ ಅಭಿವೃದ್ಧಿಗೆ ಚಾಲನೆ

ತಿ.ನರಸೀಪುರ, ನ.22– ಗ್ರಾಮೀಣ ಜನರಿಗೆ ಮೂಲ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ವಿಶೇಷ ಘಟಕ ಯೋಜನೆಯಡಿ 4.80 ಕೋಟಿ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಮತ್ತು ಚರಂಡಿಗಳ ಅಭಿವೃದ್ಧಿ ಕಾಮಗಾರಿ ಮಾಡಲಾಗುತ್ತಿದ್ದು, ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಬನ್ನೂರು ಹೋಬಳಿಯ ಹಲವು ಗ್ರಾಮಗಳಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಕೈಗೊಳ್ಳಲಾಗುವ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಗರಗಳಲ್ಲಿ ಸ್ಥಳೀಯ ಆಡಳಿತ ಅಭಿವೃದ್ಧಿ ಜವಾಬ್ದಾರಿ ಹೊತ್ತಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಜನರು ಮೂಲ ಸೌಕರ್ಯಗಳಿಂದ ವಂಚಿತರಾಗಿರುತ್ತಾರೆ. ಹಾಗಾಗಿ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ ಎಂದರು.

ಅಭಿವೃದ್ಧಿ ವೇಳೆ ಸಣ್ಣಪುಟ್ಟ ಸಮಸ್ಯೆಗಳಾದಲ್ಲಿ ಅದನ್ನು ಸರಿಪಡಿಸಿಕೊಂಡು ಗ್ರಾಮಸ್ಥರ ಮನವೊಲಿಸಿ, ಯಾವುದೇ ದೂರು ಬಾರದಂತೆ ನಿಗಾವಹಿಸಿ ಗುಣಮಟ್ಟದ ಕಾಮಗಾರಿ ಮಾಡುವಂತೆ ಇಂಜಿನಿಯರ್ ಹಾಗೂ ಗುತ್ತಿಗೆದಾರರಿಗೆ ಸೂಚಿಸಿದ ಅವರು, ಸಾಮಾನ್ಯ ವರ್ಗದ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿ ಮಾಡುವ ವೇಳೆ ಸಾರ್ವಜನಿಕರು ಗುತ್ತಿಗೆದಾರರು ಹಾಗೂ ಅಧಿಕಾರಿಗಳೊಂದಿಗೆ ಸೌಜನ್ಯದಿಂದ ವರ್ತಿಸಿ, ಗಲಾಟೆ ಮಾಡಿಕೊಳ್ಳದೇ ಉತ್ತಮ ಕಾಮಗಾರಿ ಮಾಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.



ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ತರುವ ಆಶಯ ಹೊಂದಿದ್ದು, ಇದಕ್ಕೆ ಕ್ಷೇತ್ರದ ಮತದಾರರ ಸಹಕಾರ ಅವಶ್ಯಕ ಎಂದರು.

ಇದೇ ವೇಳೆ ಶಾಸಕರು ಬಿ.ಸೀಹಳ್ಳಿ ಗ್ರಾಪಂ ವ್ಯಾಪ್ತಿಯ ಭುಗತಹಳ್ಳಿಯಲ್ಲಿ ಕೆಆರ್‌ಐಡಿಎಲ್‌ನಿಂದ 20 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುವ ರಸ್ತೆ ಕಾಮಗಾರಿಗೆ ಚಾಲನೆ ನೀಡಿದರಲ್ಲದೇ, ಕೊಡಗಹಳ್ಳಿ, ತುರುಗನೂರು, ಬಾಣಗವಾಡಿಯಲ್ಲಿ ತಲಾ 50 ಲಕ್ಷ, ಯಾಚೇನಹಳ್ಳಿ, ಕೆಂಪೇಗೌಡನ ಕೊಪ್ಪಲು, ಅತ್ತಹಳ್ಳಿ, ಬೇವಿನಹಳ್ಳಿ ಗ್ರಾಮಗಳಲ್ಲಿ ತಲಾ 40 ಲಕ್ಷ ಹಾಗೂ ಬಿ.ಸೀಹಳ್ಳಿ ಗ್ರಾಮದಲ್ಲಿ 1.4 ಕೋಟಿ ರೂ. ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲಾಗುವ ಸಿಸಿ, ಡಾಂಬರ್ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಕೊಡಗಹಳ್ಳಿ ಗ್ರಾಪಂ ಅಧ್ಯಕ್ಷ ಧನಂಜಯ, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ತಾಪಂ ಮಾಜಿ ಸದಸ್ಯೆ ನಾಗಮಣಿ, ಗ್ರಾಪಂ ಸದಸ್ಯ ಅಡುಗೆ ಕುಮಾರ್, ಕಮಲಮ್ಮ, ಶಾಂತ ವೀರಪ್ಪ, ಬಿ.ಆರ್.ಮಂಜುನಾಥ್, ಕುಮಾರಣ್ಣ, ಮಂಜು, ಎಂ.ಜಯಲಕ್ಷ್ಮಿ, ಮುತ್ತುರಾಜು, ಮನು, ನಾಗಣ್ಣ, ತುರುಗನೂರು ಗ್ರಾಪಂ ಅಧ್ಯಕ್ಷ ಜಿ.ಎಲ್.ರಾಜೇಶ್, ಸರೋಜಮ್ಮ, ರಾಮಸ್ವಾಮಿ, ಶೇಖರ್, ಶಿವಮಾಧು, ಗೊರವನಹಳ್ಳಿ ನಾಗರಾಜು, ಅಧಿಕಾರಿಗಳಾದ ನಟೇಶ್, ಸತೀಶ್ ಚಂದ್ರ, ಶಶಿ, ರಾಮೇಗೌಡ, ಸೋಮಶೇಖರ್, ಭಾಸ್ಕರ, ಕಿರಣ್, ಮಹೇಶ್, ದಿಲೀಪ್ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಮಠ (ಕ): ಬೆ.10ಕ್ಕೆ, ಅಬ್ಬರ (ಕ): ಮ.1.05ಕ್ಕೆ, ರಾ.10.05ಕ್ಕೆ, ಕಾಲಗ ತಲೈವನ್ (ತ): ಸಂ.4ಕ್ಕೆ, ಉಂಚೈ (ಹಿಂ): ಸಂ.6.55ಕ್ಕೆ.
ಸ್ಕ್ರೀನ್ 3	ಗಂಧದ ಗುಡಿ (ಕ): ಬೆ.10.05ಕ್ಕೆ, ಮ.12.05ಕ್ಕೆ, ಮ.2.10ಕ್ಕೆ, ಯಶೋಧಾ (ತೆ): ಸಂ.4.15ಕ್ಕೆ, ದೃಶ್ಯಂ–2 (ಹಿಂ): ರಾ.7.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ದೃಶ್ಯಂ–2 (ಹಿಂ): ಬೆ.10.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ದೃಶ್ಯಂ–2 (ಹಿಂ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಮಠ (ಕ): ಬೆ.11.30ಕ್ಕೆ, ಖಾಸಗಿ ಪುಟಗಳು (ಕ): ಮ.2.35ಕ್ಕೆ, ಅಬ್ಬರ (ಕ): ಸಂ.5ಕ್ಕೆ, ಗಂಧದ ಗುಡಿ (ಕ): ರಾ.8ಕ್ಕೆ, ಕಾಲಗ ತಲೈವನ್ (ತ): ರಾ.10.10ಕ್ಕೆ.
ಸ್ಕ್ರೀನ್ 4	ದೃಶ್ಯಂ–2 (ಹಿಂ): ಬೆ.10.45ಕ್ಕೆ, ರಾ.10.30ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.5ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಅಬ್ಬರ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೃಶ್ಯಂ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗಂಧದ ಗುಡಿ (ಕ) ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಠ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಾನ್ ಮಿರುಗಮೈ ಮಾರಾ (ತ)	2 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ಅಬ್ಬರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಬ್ಬರ (ಕ)	4 ಪ್ರದರ್ಶನಗಳು
ಪ್ರಭಾ	
ದಿಲ್ ಪಸಂದ್ (ಕ)	4 ಪ್ರದರ್ಶನಗಳು

ವಿಜೃಂಭಣೆಯ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ



ಸರಗೂರು, ನ.22– ತಾಲೂಕಿನ ಪ್ರಸಿದ್ಧ ಶ್ರೀಕ್ಷೇತ್ರ ಬೇಲದಕುಪ್ಪೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ಮುಂಜಾನೆಯೇ ಮಹದೇಶ್ವರಸ್ವಾಮಿಗೆ ಬೆಳ್ಳಿ ಕೊಳಗ ಧರಿಸಲಾಯಿತು. ನಂತರ ದಡದಹಳ್ಳಿ ಮಠದ ಷಡಕ್ಷರ ಸ್ವಾಮೀಜಿ ಸಾನ್ನಿಧ್ಯದಲ್ಲಿ ರುದ್ರಾಭಿಷೇಕ, ಹೋಮ, ದೀಪಾರಾಧನೆ ನಂತರ ಮಹಾಮಂಗಳಾರತಿ ನಡೆಯಿತು. ಬಳಿಕ ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಈ ವೇಳೆ ಭಕ್ತರಿಗೆ ಹಣ್ಣು, ಜವನ ಸಮರ್ಪಿಸಿ ಹರಕೆ ತೀರಿಸಿದರು. ನಂತರ ಹಾಲು ಹರಿವೆ ಸೇವೆ, ಕೊಂಡ ಮಹೋತ್ಸವ ನಡೆಯಿತು. ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಈ ವೇಳೆ ಜಾತ್ರಾ ಕಮಿಟಿ ಅಧ್ಯಕ್ಷ ಬಿ.ಎನ್.ಲಿಂಗರಾಜು, ಸಂಚಾಲಕ ಸಿ.ಎಂ.ಕೆಂಡಗಣ್ಣಸ್ವಾಮಿ, ಕಾರ್ಯದರ್ಶಿ ಬಿ.ಎಸ್.ಲಿಂಗರಾಜು, ಎಂ.ಡಿ.ಶಿವಪ್ಪ, ಎಂ.ಪಿ.ಜಯಪ್ಪ, ಮಹದೇವಪ್ಪ, ಸಿದ್ದಯ್ಯ, ಮಹದೇವಸ್ವಾಮಿ, ಶಿವಲಿಂಗಪ್ಪ, ಸಿ.ಪಿ.ಶಿವಶಂಕರಪ್ಪ, ನಾಗಮಲ್ಲಪ್ಪ, ಮಹದೇವಸ್ವಾಮಿ, ಪ್ರಕಾಶ್, ಮಹದೇವಸ್ವಾಮಿ, ಅಕ್ಕಪಕ್ಕದ ಗ್ರಾಮದ ಯಜಮಾನರು ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ತುಂಬಿದ ಕೆರೆ ಮುಂದೆ ಶಾಸಕ ಹೆಚ್‌ಪಿಎಂ ಸೆಲ್ಫಿ

ಹುಣಸೂರು, ನ.22– ಕಳೆದ 30 ವರ್ಷಗಳಿಂದ ಬರಿದಾಗಿದ್ದ ತಾಲೂಕಿನ ಬಿಳಿಕೆರೆ ಕೆರೆಗೆ ಏತ ನೀರಾವರಿ ಮೂಲಕ ನೀರು ತುಂಬಿಸಿ ರೈತರಿಗೆ ನೆರವಾದ ಜನ ನಾಯಕನ ಮೊಗದಲ್ಲಿ ಸಂತಸದ ಕ್ಷಣ.

ಹೌದು ಮೈಸೂರು–ಬಂಟ್ವಾಳ ರಾಷ್ಟ್ರೀಯ ಹೆದ್ದಾರಿ 275 ಪಕ್ಕದ ಬಿಳಿಕೆರೆ ಕೆರೆ ಬರಿದಾಗಿದ್ದರಿಂದ ಬಿಳಿಕೆರೆ ಸೇರಿದಂತೆ ಸುತ್ತಮುತ್ತಲಿನವರು ಕಸ ಸುರಿಯುತ್ತಿದ್ದರು. ಇದರಿಂದ ಕೆರೆ ಅಂಗಳ ಕಸದ ರಾಶಿಯಾಗಿ ಮಾರ್ಪಾಡಾಗಿತ್ತಲ್ಲದೆ ಸಾಮಾಜಿಕ ಅರಣ್ಯ ವಿಭಾಗದಿಂದ ಬರಿದಾಗಿದ್ದ ಕೆರೆ ಅಂಗಳದಲ್ಲಿ ನೆಟ್ಟಿದ್ದ ಸಸಿಗಳು ಸಹ ದೊಡ್ಡ ಮರಗಳಾಗಿದ್ದವು.

ಮಳೆಗಾಲದಲ್ಲಿ ಅಲ್ಪ ಪ್ರಮಾಣದ ನೀರು ಕೆರೆ ಸೇರುತ್ತಿದ್ದರೂ, ಕೆಲವೇ ದಿನದಲ್ಲಿ ಬರಿದಾಗುತ್ತಿತ್ತು. ಇದನ್ನು ಮನಗಂಡ ಶಾಸಕ ಹೆಚ್.ಪಿ.ಮಂಜುನಾಥ್ ಕೆರೆಗೆ ನೀರು ತುಂಬಿಸಿ ಈ ಭಾಗದ ಜನರ ಬದುಕು ಹಸನಾಗಿಸಲು ಟೊಂಕ ಕಟ್ಟಿ ನೀರಾವರಿ ಇಲಾಖೆ ಮೂಲಕ ಕ್ರಿಯಾಯೋಜನೆ ರೂಪಿಸಿ. ಅಂದಿನ ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಶಿವರಾಜ ತಂಗಡಗಿ ಗಮನಕ್ಕೆ ತಂದು 10 ಕೋಟಿ ರೂ. ವೆಚ್ಚದಲ್ಲಿ ಲಕ್ಷ್ಮಣತೀರ್ಥ ನದಿಯಿಂದ ಏತ ನೀರಾವರಿ ಯೋಜನೆ ಮೂಲಕ ಬಿಳಿಕೆರೆ ಕೆರೆ ಮಾತ್ರವಲ್ಲದೆ ಮಲ್ಲಿನಾಥಪುರ, ಜೀನಹಳ್ಳಿ ಹಾಗೂ ಹಳೇಬೀಡು ಕೆರೆಗೆ ನೀರು ತುಂಬಿಸುವ ಯೋಜನೆ 2017ರಲ್ಲಿ ಸಾಕಾರಗೊಂಡು ಕೆರೆ ತುಂಬಿಸಲಾಯಿತು.

ಕೆಲವರು ಅಯ್ಯೋ ಈ ಕೆರೆ ತುಂಬುತ್ತದೆಯೇ. ಕೆರೆ ತುಂಬಿದರೂ ನೀರು ನಿಲ್ಲುತ್ತಾ ಬರೀ ಹಣ ಖರ್ಚಾಗುತ್ತದೆಂದು ಭಾವಿಸಿದ್ದರು. ಆದರೆ ಕೆರೆ ತುಂಬಿದ ನಂತರ ಸುತ್ತಮುತ್ತಲಿನ 8 ಕಿಮೀ ವ್ಯಾಪ್ತಿಯ



ಗ್ರಾಮಗಳಲ್ಲಿ ಹತ್ತಾರು ವರ್ಷಗಳಿಂದ ಬರಿದಾಗಿದ್ದ ಬೋರ್‌ವೆಲ್‌ಗಳಲ್ಲಿ ಅಂತರ್ಜಲ ವೃದ್ಧಿಯಾಯಿತು. ಕೆಲವು ಬೋರ್‌ವೆಲ್‌ಗಳಲ್ಲಿ ಹಗಲು ರಾತ್ರಿ ಎನ್ನದೆ ನೀರು ಉಕ್ಕಿ ಇಂದಿಗೂ ಹರಿಯುತ್ತಲೇ ಇದೆ.

ಒಣಗಿಹೋಗಿದ್ದ ತೆಂಗು, ಮಾವಿನ ತೋಟಗಳು ಇದೀಗ ನಳ ನಳಿಸುತ್ತಿವೆ. ದೂರದ ಊರಿಗೆ ಕೂಲಿಗೆ ಹೋಗುತ್ತಿದ್ದ ರೈತರು ಇದೀಗ ತಮ್ಮ ಜಮೀನಿನಲ್ಲೇ ದುಡಿಮೆ ಮಾಡಿ ಬದುಕು ಕಟ್ಟಿಕೊಂಡಿದ್ದಾರೆ. ಈ ಕೆರೆ ಸುತ್ತಮುತ್ತಲಿನ 8ರಿಂದ 10 ಕಿಮೀ ವ್ಯಾಪ್ತಿಯ ಗ್ರಾಮಗಳ ರೈತರ ಬದುಕು ಹಸನಾಗಿದೆಯಲ್ಲದೆ ಸಮೃದ್ಧ ಕುಡಿಯುವ ನೀರು ಸರಬರಾಜಾಗುತ್ತಿದೆ. ಹಳ್ಳಿಗರು ಸಹ ನೆಮ್ಮದಿ ಜೀವನ ನಡೆಸುತ್ತಿದ್ದರೆ, ಶಾಸಕ ಮಂಜುನಾಥ್‌ಗೆ ತಮ್ಮ ಶಾಸಕತ್ವದ ಅವಧಿಯಲ್ಲಾದ ಈ ಕಾರ್ಯದಿಂದ ಜನರಿಗೆ ನೆರವಾದ ತೃಪ್ತಿ ಸಿಕ್ಕಿದೆ. ಆ ಮೂಲಕ ಈ ಭಾಗದ ಜನರ ಪಾಲಿಗೆ ಆಧುನಿಕ ಭಗೀರಥರಾಗಿದ್ದಾರೆ.

ಬಿಜೆಪಿ, ಬಿಎಸ್‌ಪಿ ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆ



ಮಲ್ಕುಂಡಿ, ನ.22– ನಂಜನಗೂಡು ತಾಲೂಕಿನ ಬೆಳಲೆ ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಬಿಜೆಪಿ, ಬಿಎಸ್‌ಪಿ ಕಾರ್ಯಕರ್ತರು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು.

ಬಿಜೆಪಿ, ಬಿಎಸ್‌ಪಿ ಕಾರ್ಯಕರ್ತರಿಗೆ ಪಕ್ಷದ ಶಾಲು ಹೊದಿಸಿ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಆರ್.ಧ್ರುವನಾರಾಯಣ್, ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರದ ದುರಾಡಳಿತದಿಂದ ಜನತೆ ಬೇಸತ್ತಿದ್ದಾರೆ. ಪ್ರಧಾನಿ ಮೋದಿ ಅವರು ಚುನಾವಣೆ ವೇಳೆ ದೇಶದ ಯುವಕರಿಗೆ ಉದ್ಯೋಗಾವಕಾಶ ನೀಡುವುದಾಗಿ ಭರವಸೆ ನೀಡಿ ಅಧಿಕಾರಕ್ಕೆ ಬಂದು ಯಾವುದೇ ಉದ್ಯೋಗ ಕಲ್ಪಿಸದೇ ಯುವಕರನ್ನು ಬೀದಿ ಪಾಲು ಮಾಡಿದ್ದಾರೆ. ಕಾಂಗ್ರೆಸ್ ತನ್ನ ಅಧಿಕಾರವಧಿಯಲ್ಲಿ ಯುವಕರಿಗೆ ಉದ್ಯೋಗ ಕಲ್ಪಿಸಿತ್ತು ಎಂದ ಅವರು, ಕಾಂಗ್ರೆಸ್ ತತ್ವ ಸಿದ್ಧಾಂತ ಮೆಚ್ಚಿ ಬಿಜೆಪಿ, ಬಿಎಸ್‌ಪಿ ಕಾರ್ಯಕರ್ತರು ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವುದು ಪಕ್ಷಕ್ಕೆ ಮತ್ತಷ್ಟು ಬಲ ಬಂದಂತಾಗಿದೆ ಎಂದರು.

ಸಭೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಎಸ್ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಕೆ.ಮಾರುತಿ, ಜಿಪಂ ಮಾಜಿ ಅಧ್ಯಕ್ಷೆ ಲತಾ, ಗ್ರಾಪಂ ಅಧ್ಯಕ್ಷ ಮಹದೇವಶೆಟ್ಟಿ, ಶಿವು ಸೇರಿದಂತೆ ಇನ್ನಿತರರಿದ್ದರು.

ಧರ್ಮಸ್ಥಳ ಸಂಸ್ಥೆಯಿಂದ ವಿಶೇಷ ಚೇತನರಿಗೆ ಸಲಕರಣೆ ವಿತರಣೆ

ತಿ.ನರಸೀಪುರ, ನ.22– ಸರ್ಕಾರ ಮಾಡದ ಕೆಲಸವನ್ನು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮಾಡುವ ಮೂಲಕ ಸಮಾಜದ ಕಟ್ಟ ಕಡೆ ವ್ಯಕ್ತಿಗೂ ಸೌಲಭ್ಯ ದೊರಕಿಸಿಕೊಡುತ್ತಿದೆ ಎಂದು ವರುಣಾ ಕ್ಷೇತ್ರದ ನಿಕಟಪೂರ್ವ ಜೆಡಿಎಸ್ ಅಧ್ಯಕ್ಷ ತಾಯೂರು ಪ್ರಕಾಶ್ ತಿಳಿಸಿದರು.

ಪಟ್ಟಣದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ (ಬಿ.ಸಿ.ಟ್ರಸ್ಟ್) ವತಿಯಿಂದ ಸಂಸ್ಥೆ ಕಚೇರಿಯಲ್ಲಿ ಜಲಮಂಗಲ ಕಾರ್ಯಕ್ರಮದಡಿ ವಿಶೇಷ ಚೇತನರಿಗೆ ವಿವಿಧ ಸಲಕರಣೆ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರ ಇಂದು ಸಮಾಜದ ಕಟ್ಟಕಡೆ ವ್ಯಕ್ತಿಯನ್ನು ಗುರುತಿಸಿ ಸೌಲಭ್ಯ ನೀಡಲು ವಿಫಲವಾಗಿದೆ. ಆದರೆ ಧರ್ಮಸ್ಥಳ ಸಂಸ್ಥೆ ಸರ್ಕಾರ ಮಾಡುವ ಕಾರ್ಯಕ್ರಮ ಅನುಷ್ಠಾನಕ್ಕೆ ತಂದು ಸಾಮಾಜಿಕ ಸಮಾನತೆ, ನ್ಯಾಯ ಹಾಗೂ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಯಶಸ್ವಿಯಾಗಿದೆ ಎಂದರು.

ಸಂಸ್ಥೆ ನೊಂದವರ ಪರ ಕೆಲಸ ಮಾಡುತ್ತಿದ್ದು, ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವುದು ಶ್ಲಾಘನೀಯ. ಸಂಸ್ಥೆಯು ಶಿಕ್ಷಣ ಮತ್ತು ಆರೋಗ್ಯದ ಜೊತೆಗೆ ಕೃಷಿಗೂ ಹೆಚ್ಚು ಒತ್ತು ನೀಡುತ್ತಿರುವುದು



ಪ್ರಶಂಶನೀಯ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಕರೋಹಟ್ಟಿ ಪ್ರಭುಸ್ವಾಮಿ ಮಾತನಾಡಿ, ಧರ್ಮಸ್ಥಳ ಸಂಸ್ಥೆ ಫಲಾನುಭವಿಗಳ ಅನಗತ್ಯ ಖರ್ಚಿಗೆ ಎಡೆ ಮಾಡಿಕೊಡದೆ, ಯಾವುದೇ ಮಧ್ಯವರ್ತಿಯೂ ಇಲ್ಲದೇ ನೇರವಾಗಿ ಸವಲತ್ತುಗಳನ್ನು ತಲುಪಿಸುತ್ತಿದೆ. ಸಂಸ್ಥೆ ಕಾರ್ಯಕರ್ತರು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕೋವಿಡ್ ಸಂದರ್ಭ ತಮ್ಮ ಪ್ರಾಣವನ್ನು ಲೆಕ್ಕಿಸದೇ ಜನಸೇವೆ ಮಾಡುವ ಮೂಲಕ ಫಲಾನುಭವಿ ಮನೆ ಮನೆಗೆ ಸವಲತ್ತು ತಲುಪಿಸಿ ಸಂಸ್ಥೆ ಜನಪರ ಕೆಲಸ ಮಾಡಿತ್ತು ಎಂದು ಸಂಸ್ಥೆ ಕಾರ್ಯ ಶ್ಲಾಘಿಸಿದರು.

ಇದೇ ವೇಳೆ ವಿಶೇಷಚೇತನರಿಗೆ ವೀಲ್‌ಚೇರ್, ವಾಟರ್ ಬೆಡ್, ಯು.ಸೇಫ್ ವಾಕರ್, ಸ್ಟಿಕ್ ಮತ್ತಿತರ ಸಲಕರಣೆ ವಿತರಿಸಲಾಯಿತು. ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಕಿರಗಸೂರು ಶಂಕರ್, ಪುಷ್ಪಲತಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೇಲ್ವಿಚಾರಕಿ ತಾರ, ಸಂಸ್ಥೆಯ ಯೋಜನಾಧಿಕಾರಿ ಹನುಮಂತಪ್ಪ, ಆಡಳಿತ ಪ್ರಬಂಧಕ ರಂಜಿತ್, ಸಹಾಯಕ ಪ್ರಬಂಧಕ ಸುನೀಲ್, ಮೇಲ್ವಿಚಾರಕ ರವೀಂದ್ರ, ಕಚೇರಿ ಸಹಾಯಕ ಗುರು, ಚಂದನ್, ನೋಡಲ್ ಅಧಿಕಾರಿ ಕುಮಾರ್, ಕಾವ್ಯ, ಅರ್ಪಿತ ಮತ್ತಿತರರಿದ್ದರು.

ಆಟೋ ನಿಲ್ದಾಣಗಳ ಶೆಲ್ಟರ್ ನಿರ್ಮಾಣಕ್ಕೆ ಭೂಮಿ ಪೂಜೆ



ನಂಜನಗೂಡು, ನ22– ನಗರದ ರಾಜ್ಯ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದ ಬಳಿ ಹಾಗೂ ಖಾಸಗಿ ಬಸ್ ನಿಲ್ದಾಣಗಳಲ್ಲಿ ತಲಾ 30 ಲಕ್ಷ ವೆಚ್ಚದಲ್ಲಿ ಆಟೋ ನಿಲ್ದಾಣಗಳಿಗೆ ಶೆಲ್ಟರ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ಖಾಸಗಿ ಬಸ್ ನಿಲ್ದಾಣ ಬಳಿಯ ಆಟೋ ನಿಲ್ದಾಣದ ಶೆಲ್ಟರ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಗರದ ಆಟೋ ಚಾಲಕರ ಸಂಘ ಕೋರಿಕೆಯಂತೆ ಆಟೋ ನಿಲ್ದಾಣಗಳಿಗೆ ನಗರಸಭೆ ಸಾಮಾನ್ಯ ನಿಧಿ ಬಳಸಿ ಬಸ್ ಶೆಲ್ಟರ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಉಳಿದ ಕೆಲವು ಬಡಾವಣೆಗಳಲ್ಲಿ ಆಟೋ ಚಾಲಕರು ಬಿಸಿಲು, ಮಳೆಯಿಂದ ರಕ್ಷಣೆ ಪಡೆಯಲು ಶೆಲ್ಟರ್ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು. ಆಟೋ ಚಾಲಕರು ಪ್ರಯಾಣಿಕರೊಂದಿಗೆ ಸೌಹಾರ್ದ ರೀತಿ ನಡೆದುಕೊಳ್ಳುವ ಮೂಲಕ ಸಹಕಾರ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಸದಸ್ಯರಾದ ಮಹದೇವ ಪ್ರಸಾದ್, ಸಿದ್ದರಾಜು, ರಂಗಸ್ವಾಮಿ ಮುಖಂಡರಾದ ಶಂಕರಪ್ಪ, ಶ್ರೀಕಂಠ ಉಪಸ್ಥಿತರಿದ್ದರು.

25 ಜೋಡಿ ಕಾಟಾ ಕುಸ್ತಿ ಪಂದ್ಯಾವಳಿಗೆ ಚಾಲನೆ

ಹುಣಸೂರು, ನ.22– ತಾಲೂಕಿನ ಕೆಂಡಗಣ್ಣಸ್ವಾಮಿ ಗದ್ದಿಗೆಯಲ್ಲಿ ಕೆಂಡಗಣ್ಣೇಶ್ವರ ಸ್ವಾಮಿ, ಮಹದೇಶ್ವರಸ್ವಾಮಿ ಕುಸ್ತಿ ಮತ್ತು ಕ್ರೀಡಾ ಸೇವಾ ಸಂಘ ಆಯೋಜಿಸಿದ್ದ 25 ಜೋಡಿ ಕಾಟಾ ಕುಸ್ತಿ ಪಂದ್ಯಾವಳಿಗೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ರಾಜ ಮಹಾರಾಜರ ಕಾಲದಿಂದಲೂ ಆಚರಣೆಯಲ್ಲಿರುವ ದೇಶಿ ಕ್ರೀಡೆ ಕುಸ್ತಿ. ಮಾನಸಿಕ ಸಮತೋಲನ ವೃದ್ಧಿಯಾಗಲು ಕುಸ್ತಿ ಸಹಕಾರಿ. ಗರಡಿ ಮನೆಗಳು ಅಸ್ತಿತ್ವದಲ್ಲಿದ್ದಂತೆ, ದೇಶಿಯ ಕ್ರೀಡೆಗಳಲ್ಲಿ ಒಂದಾದ ಕುಸ್ತಿ ನಮ್ಮ ನಾಡಿನ ಪ್ರಸಿದ್ಧ ಗ್ರಾಮೀಣ ಆಟವಾಗಿದ್ದು, ದೈಹಿಕ ಕಸರತ್ತಿನ ಮೂಲಕ ದೇಹವನ್ನು ಸದೃಢವಾಗಿಸಿಕೊಳ್ಳಬಹುದು ಎಂದರು.



ಗ್ರಾಪಂ ಮಾಜಿ ಸದಸ್ಯ ವಸಂತ್ ಕುಮಾರ್ ಮಾತನಾಡಿ, ಕಲೆ ಉಳಿಸಿ ಬೆಳೆಸಬೇಕಾದುದ್ದು ನಮ್ಮ ನಿಮ್ಮೆಲ್ಲರ ಜವಾಬ್ದಾರಿ. ಈ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸಿರುವ ಕಾರ್ಯ ಮೆಚ್ಚುವಂತಹದ್ದು ಎಂದರು.

ಕೆಎಂಎಫ್ ನಿರ್ದೇಶಕ ಕುಮಾರ್ ಮಾತನಾಡಿದರು. ಗಮನ ಸೆಳೆದ ಮಾರ್ಫಿಟ್ ಕುಸ್ತಿಯಲ್ಲಿ ಮಹದೇವಪುರ ಗರಡಿ ಪೈ.ವಿಕಾಸ್ ಹುಡುಗೇರಿ ಪೈ.ದಯಾನಂದ್‌ರನ್ನು ಸೋಲಿಸಿ ಪ್ರಥಮ ಸ್ಥಾನ ಪಡೆದರು. ಈ ವೇಳೆ ಕುಸ್ತಿ ಸಂಘದ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ಪ್ರಕಾಶ್, ಕಾರ್ಯದರ್ಶಿ ಯದುಕುಮಾರ್, ದೇವಸ್ಥಾನದ ರಿಸಿವರ್ ಪುಣ್ಯಶೀಲ, ಮಹದೇವಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ರಾಜು, ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜು, ಬಿ.ಎಂ.ಕೆಂಡಗಣ್ಣಪ್ಪ ತಾಲೂಕು ಬಿಜೆಪಿ ಸಂಚಾಲಕ ಹೇಮಂತ್ ಕುಮಾರ್, ದೇವಸ್ಥಾನದ ಅರ್ಚಕರು ಸೇರಿದಂತೆ ಅನೇಕ ಗಣ್ಯರಿದ್ದರು.



ಕಂಪಲಾಪುರದಲ್ಲಿ ಕಡೇ ಕಾರ್ತಿಕ ಸೋಮವಾರದ ಅಂಗವಾಗಿ ರಾತ್ರಿ ಶ್ರೀಕರಕಂಠೇಶ್ವರಸ್ವಾಮಿ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ನೆರವೇರಿತು.

ಕಡೇ ಕಾರ್ತಿಕ ಸೋಮವಾರ ಹಿನ್ನೆಲೆ

ಶ್ರೀಕಂಠೇಶ್ವರಸ್ವಾಮಿ, ಪಾರ್ವತಿ ಅಮ್ಮನವರ ಮುತ್ತಿನ ಪಲ್ಲಕ್ಕಿ ಉತ್ಸವ

ನಂಜನಗೂಡು, ನ.22– ಕಡೇ ಕಾರ್ತಿಕ ಸೋಮವಾರದ ಅಂಗವಾಗಿ ಶ್ರೀಕಂಠೇಶ್ವರಸ್ವಾಮಿ ಮತ್ತು ಪಾರ್ವತಿ ಅಮ್ಮನವರ ಮುತ್ತಿನ ಪಲ್ಲಕ್ಕಿ ಉತ್ಸವ ಸೋಮವಾರ ರಾತ್ರಿ ನಗರದ ರಥದ ಬೀದಿಯಲ್ಲಿ ವೈಭವಯುತವಾಗಿ ಜರುಗಿತು.

ದೇವಾಲಯದಲ್ಲಿ ರಾತ್ರಿ ವೇಳೆ ಉತ್ಸವ ಮೂರ್ತಿಗಳಿಗೆ ಪೂಜೆ ಸಲ್ಲಿಸಲಾಯಿತು. ಬಳಿಕ ದೇವಾಲಯದ ಆವರಣದಲ್ಲಿ ನಿಂತಿದ್ದ ಬಣ್ಣ ಬಣ್ಣದ ಹೂಗಳು ಹಾಗೂ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ಉತ್ಸವ ರಥದಲ್ಲಿ ಶ್ರೀಕಂಠೇಶ್ವರಸ್ವಾಮಿ ಮತ್ತು ಪಾರ್ವತಿ ಅಮ್ಮನವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ನಂತರ ಸಾವಿರಾರು ಭಕ್ತರು ಉದ್ಘೋಷ ಹಾಗೂ ಜಯಘೋಷಗಳೊಂದಿಗೆ



ರಥಬೀದಿಯಲ್ಲಿ ದೇವರ ಉತ್ಸವ ಮೂರ್ತಿಗಳನ್ನು ಮೆರವಣಿಗೆ ಮಾಡಿದರು.

ಉತ್ಸವ ಮೂರ್ತಿ ದಾಸೋಹ ಭವನದ ಆವರಣಕ್ಕೆ ಬರುತ್ತಿದ್ದಂತೆ ನಯನಜ ಕ್ಷತ್ರಿಯ ಸಮುದಾಯದಿಂದ ಏರ್ಪಡಿಸಿದ್ದ ಬಾಣ ಬಿರುಸು ಕಾರ್ಯಕ್ರಮಕ್ಕೆ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ ಚಾಲನೆ ನೀಡಿದರು. ಈ ವೇಳೆ ನೆರೆದಿದ್ದ



ಸಾವಿರಾರು ಭಕ್ತರು ಬಾಣ ಬಿರುಸು ಕಂಡು ಹರ್ಷ ವ್ಯಕ್ತಪಡಿಸಿದರು. ರಾತ್ರಿ 7.30ಕ್ಕೆ ಆರಂಭಗೊಂಡ ಕಾರ್ಯಕ್ರಮ ರಾತ್ರಿ 9 ಗಂಟೆವರೆಗೆ ನಡೆಯಿತು.

ಈ ವೇಳೆ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ನಗರಸಭಾ ಸದಸ್ಯರಾದ ಯೋಗೀಶ್, ಮಹದೇವಮ್ಮ, ನಯನಜ ಕ್ಷತ್ರಿಯ ಮಂಡಳಿ ಜಿಲ್ಲಾ ಸಂಘದ ಅಧ್ಯಕ್ಷ ಎನ್.ಆರ್.ನಾಗೇಶ್, ತಾಲೂಕು ಅಧ್ಯಕ್ಷ ಶ್ರೀನಿವಾಸ್, ಕೃಷ್ಣಂರಾಜು, ವಿಷಕಂಠ, ಮಂಜುನಾಥ್, ಶಿವಪ್ಪ, ಪ್ರಕಾಶ್, ನಿಂಗರಾಜು, ಎನ್.ಆರ್.ನಾಗೇಶ್ ಸೇರಿದಂತೆ ಇತರರಿದ್ದರು.



ಬೆಟ್ಟದಪುರ ಸಮೀಪದ ಮಹದೇಶ್ವರ ಮಠದ ಹಾಲು ಉತ್ಪಾದಕರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಶಿವಪ್ಪ, ಉಪಾಧ್ಯಕ್ಷರಾಗಿ ಎಂ.ಮಹೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಸದಸ್ಯರಾದ ಎಂ.ಬಿ. ಸುಂದರ ಪ್ರಭಾವತಿ, ಲಲಿತ, ಭಾಗ್ಯ, ತೇಜಸ್ವಿನಿ, ಜ್ಯೋತಿ, ಎಚ್.ಕೆ. ರಮ್ಯಾಕುಮಾರಿ, ಅಂಬಿಕಾ ಹಾಗೂ ಸಂಘದ ಕಾರ್ಯದರ್ಶಿ ಷಡಕ್ಷರಿ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಸಹಕರಿಸಲು ಬೋಧನಾ ಸಿಬ್ಬಂದಿಗೆ ಡಿಡಿಪಿಐ ಮನವಿ



ಮೈಸೂರು, ನ.22(ಎಸ್‌ಪಿಎನ್)– ಮುಂಬರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯು ಶೇ.100 ರಷ್ಟು ಪ್ರಗತಿ ಸಾಧಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಗುರಿ ಹಾಕಿಕೊಂಡಿದ್ದು, ಇದಕ್ಕೆ ಜಿಲ್ಲೆಯ ಎಲ್ಲಾ ಬೋಧಕ ಸಿಬ್ಬಂದಿ ಸಹಕಾರ ನೀಡುವಂತೆ ಡಿಡಿಪಿಐ ರಾಮಚಂದ್ರರಾಜೇ ಅರಸ್ ಮನವಿ ಮಾಡಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಪ್ರೌಢಶಾಲೆಯಲ್ಲಿ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಫಲಿತಾಂಶ ಉತ್ತಮಪಡಿಸಲು ಗುಣಮಟ್ಟದ ಕಲಿಕೆಗೆ ಆದ್ಯತೆ ನೀಡಬೇಕು. ಈ ದಿಸೆಯಲ್ಲಿ ಸದ್ವಿದ್ಯಾ ಸಂಸ್ಥೆಯು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುತ್ತಿರುವುದು ಉತ್ತಮ ಸಂಗತಿ. ಅಲ್ಲದೆ, ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡುವುದರಿಂದ ಉಳಿದ ವಿದ್ಯಾರ್ಥಿಗಳಲ್ಲಿಯೂ ಸ್ಪರ್ಧಾತ್ಮಕ ಮನೋಭಾವ ಬೆಳೆಯುತ್ತದೆ ಎಂದರು.

ಈ ವೇಳೆ 2021–22ನೇ ಸಾಲಿನಲ್ಲಿ 625ಕ್ಕೆ 625 ಅಂಕ ಗಳಿಸಿದ ಬಿ.ಎಸ್.ಅದಿತಿ, ಎಂ.ಯಶಸ್ವಿ ಅರಸ್ ಹಾಗೂ ಎಂ.ಇಂಚರಾ ಅವರಿಗೆ ಪ್ರತಿಭಾ ಪುರಸ್ಕಾರ ಹಾಗೂ ಬೆಳ್ಳಿ ಫಲಕ ನೀಡಿ ಸನ್ಮಾನಿಸಲಾಯಿತು. ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ 143 ವಿದ್ಯಾರ್ಥಿಗಳಿಗೂ ಪ್ರಮಾಣ ಪತ್ರ ವಿತರಿಸಲಾಯಿತು.

ವೇದಿಕೆಯಲ್ಲಿ ಸಂಸ್ಥೆ ಅಧ್ಯಕ್ಷ ಪ್ರೊ.ವಿ.ಕೆ.ಗೋಪಾಲಾಚಾರ್, ಉಪಾಧ್ಯಕ್ಷ ಸಿ.ಆರ್.ನಾಗರಾಜ್, ಕಾರ್ಯದರ್ಶಿ ಪ್ರೊ.ಎಂಎಸ್‌ಕೆ ನರಹರಿಬಾಬು, ಸಹ ಕಾರ್ಯದರ್ಶಿ ಪ್ರೊ.ಕೆ.ಎಸ್.ಹಿರಿಯಣ್ಣ, ಮುಖ್ಯಶಿಕ್ಷಕ ರಾಮಚಂದ್ರ ಭಟ್ ಉಪಸ್ಥಿತರಿದ್ದರು.

ವರಕವಿ ದ.ರಾ.ಬೇಂದ್ರೆ ಸೊಸೆ ನಿಧನ



ಧಾರವಾಡ, ನ.22– ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಸೊಸೆ ನಿಧನರಾಗಿದ್ದಾರೆ. ವಯೋಸಹಜ ಕಾಯಿಲೆಯಿಂದ ನಿಧನರಾದ ಪದ್ಮಾ ಪಾಂಡುರಂಗ ಬೇಂದ್ರೆ(90)ಯವರು ಧಾರವಾಡ ಸಾಧನಕೇರಿಯ ದ.ರಾ. ಬೇಂದ್ರೆ ಮನೆಯಲ್ಲಿ ವಾಸವಿದ್ದರು.

ಪದ್ಮಾ ಬೇಂದ್ರೆ ಅವರು ಓರ್ವ ಪುತ್ರ ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗ ಅಗಲಿದ್ದಾರೆ.

ರಾಜ್ಯಸಭಾ ಮಾಜಿ ಸದಸ್ಯ ಅಬ್ದುಲ್ ಸಮದ್ ಸಿದ್ದೀಖಿ ಇನ್ನಿಲ್ಲ



ರಾಯಚೂರು, ನ.22– ರಾಜ್ಯಸಭಾ ಮಾಜಿ ಸದಸ್ಯ ಅಬ್ದುಲ್ ಸಮದ್ ಸಿದ್ದೀಖಿ(87) ನಿಧನ ಹೊಂದಿದ್ದಾರೆ.

ಇವರು 1988–1994 ರವರೆಗೆ ರಾಜ್ಯಸಭಾ ಸದಸ್ಯರಾಗಿದ್ದರು. ಅಲ್ಲದೆ ಜಿಲ್ಲೆಯಲ್ಲಿ ಜನತಾದಳ ಪಕ್ಷ ಕಟ್ಟಲು ಮುಂದಾಳತ್ವ ವಹಿಸಿದ್ದರು. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರನ್ನು ಹೈದರಾಬಾದ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ತಡರಾತ್ರಿ ಕೊನೆಯುಸಿರೆಳೆದರು.

ಅಬ್ದುಲ್ ಸಮದ್ ಸಿದ್ದೀಖಿ ರಾಯಚೂರು ನಗರದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ.

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ: ಮೈನಪ್ರಾ / ವ.ಕ–8/ 5046/2022–23
ದಿನಾಂಕ: 21.11.2022

ಪತ್ರಿಕಾ ಪ್ರಕಟಣೆ

ಶ್ರೀ ಕೆ.ನಿಂಗಪ್ಪ ಬಿನ್ ಲೇ॥ ಕರಿಯಪ್ಪ ಎಂಬುವರಿಗೆ ಹಂಚ್ಯಾ – ಸಾತಗಳ್ಳಿ 'ಬಿ' ವಲಯ ಬಡಾವಣೆಯಲ್ಲಿ ನಿ.ಸಂಖ್ಯೆ : 367 ಅಳತೆ : 6×9 ಮೀ ನಿವೇಶನವು ದಿ: 25.02.02001 ರಂದು ಮಂಜೂರಾಗಿರುತ್ತದೆ. ನಿವೇಶನದ ಪೂರ್ಣ ಹಣ ರೂ.22,000/– ಗಳನ್ನು ಪಾವತಿಸಿ ದಿ: 30.01.2004 ರಂದು ಕ್ರಯಪತ್ರ ಪಡೆದಿರುತ್ತಾರೆ ಆದರೆ ಮಂಜೂರಾತಿದಾರರು ಕ್ರಯಪತ್ರ ನೋಂದಾಯಿಸಿರುವುದಿಲ್ಲ.

ನಂತರ ಸದರಿ ಮಂಜೂರಾತಿದಾರರಾದ ಶ್ರೀ ಕೆ.ನಿಂಗಪ್ಪ ರವರು ನಿ.ಸಂಖ್ಯೆ : 367 ರ ಕ್ರಯಪತ್ರವನ್ನು ನವೀಕರಿಸಿ ಕೊಡುವಂತೆ ಕೋರಿ ದಿ: 15.10.2005 ರಂದು ಅರ್ಜಿ ಸಲ್ಲಿಸಿರುತ್ತಾರೆ. ಕ್ರಯಪತ್ರ ನವೀಕರಿಸುವ ಸಂಬಂಧ ಸೂಕ್ತ ಸ್ಪಷ್ಟೀಕರಣ ಕೋರಿ ದಿ: 20.12.2005 ರಲ್ಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಈ ಬಗ್ಗೆ ಅರ್ಜಿದಾರರಿಗೂ ಪ್ರತಿಯನ್ನು ನೀಡಲಾಗಿರುತ್ತದೆ.

ನಂತರ ಮಂಜೂರಾತಿದಾರರಾದ ಶ್ರೀ ನಿಂಗಪ್ಪ ರವರು ಮರಣ ಹೊಂದಿದ್ದು, ಹಾಗೂ ಇವರ ಪತ್ನಿ ಶ್ರೀಮತಿ ತಾಯಮ್ಮ ರವರು OS No. :1839 / 2009 ರ ರೀತ್ಯಾ ದಾವೆ ಹೂಡಿದ್ದು, ಪ್ರಕರಣವು ದಿ: 28.02.2022 ರಂದು ಮುಕ್ತಾಯಗೊಂಡಿರುತ್ತದೆ.

ಶ್ರೀಮತಿ ತಾಯಮ್ಮ ರವರು ಸಹ ಮರಣ ಹೊಂದಿರುವುದರಿಂದ ಇವರ ಮಕ್ಕಳುಗಳಾದ ಶ್ರೀ ಸೋಮಸುಂದರ್, ಶ್ರೀಮತಿ ಉಮಾ.ಎನ್, ಶ್ರೀಮತಿ ಸುವರ್ಣ.ಎನ್, ಶ್ರೀಮತಿ ಸವಿತ ಕುಮಾರಿ.ಎನ್ ಮತ್ತು ಶ್ರೀ ರವಿಕುಮಾರ್.ಎನ್ ರವರುಗಳು ಮನವಿ ಸಲ್ಲಿಸಿ, ಸದರಿ ನಿವೇಶನವನ್ನು ಪೌತಿ ವರ್ಗಾವಣೆ ಮಾಡಿ ಕ್ರಯಪತ್ರದ ನವೀಕರಣ ಶುಲ್ಕ ಪಡೆದು ಕ್ರಯಪತ್ರ ನೀಡುವಂತೆ ಕೋರಿರುತ್ತಾರೆ.

ಶ್ರೀ ಸೋಮಸುಂದರ್, ಶ್ರೀಮತಿ ಉಮಾ.ಎನ್, ಶ್ರೀಮತಿ ಸುವರ್ಣ.ಎನ್, ಶ್ರೀಮತಿ ಸವಿತ ಕುಮಾರಿ.ಎನ್ ಮತ್ತು ಶ್ರೀ ರವಿಕುಮಾರ್.ಎನ್ ರವರುಗಳ ಹೆಸರಿಗೆ ವರ್ಗಾವಣೆ ಮಾಡಿ ಕ್ರಯಪತ್ರ ನೀಡಬೇಕಾಗಿರುವುದರಿಂದ ಯಾರಿಂದಾದರೂ ತಕರಾರು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಚೇರಿ–8
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಸಾರ್ವಜನಿಕರ ಗಮನಕ್ಕಾಗಿ

[illegible]

Sd/-Palaksha, B.sc., LL.B.,Advocate.
Enroll No, KAR 1146/96, Chamber : No.645, 1st Floor. Narayana Shastri Road. Behind Sitavilas Choultry. Mysore-570024 Ph: 9448075718

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದಿಸಿರುವ ಸ್ವತ್ತನ್ನು, ಅದರ ಮಾಲೀಕರಾದ ಮೈಸೂರು ಸಿಟಿ, ಅಶೋಕಪುರಂ, ನ್ಯೂ ಮಾಡಲ್ ಹೋಂ, 8ನೇ ಅಡ್ಡರಸ್ತೆ, ಮನೆ ನಂ.ಸಿ.ಎಚ್.19ರಲ್ಲಿ ವಾಸವಾಗಿರುವ ಲೇ.ಚಿಕ್ಕತಿಕ್ಕಬೋರಯ್ಯ ರವರ ಮಗ ಬಿ. ಲಿಂಗಯ್ಯ ರವರ ಜೊತೆ ಜಂಟಿ ಅಭಿವೃದ್ಧಿ ಒಪ್ಪಂದದ ಕರಾರನ್ನು ಮಾಡಿಕೊಳ್ಳಲು ಇಚ್ಛಿಸುತ್ತಾರೆ. ಲೇ. ಚಿಕ್ಕತಿಕ್ಕಬೋರಯ್ಯ ರವರ ಮಗ ಬಿ.ಲಿಂಗಯ್ಯ ರವರಿಗೆ ಷೆಡ್ಯೂಲಿನಲ್ಲಿ ನಮೂದಿಸಿರುವ ಸ್ವತ್ತು ದಿನಾಂಕ 01.01.2004ರ ಪಂಚಾಯಿತಿ ಪಾಲುಪಟ್ಟಿ ಮುಖಾಂತರ ಬಂದಿರುತ್ತದೆ. ಆದ್ದರಿಂದ ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾದರು ಅಥವಾ ಯಾವುದೇ ಬ್ಯಾಂಕ್‌ಗಾಗಲಿ ಅಥವಾ ಯಾವುದೇ ಹಣಕಾಸು ಸಂಸ್ಥೆಗಾದರು ಅಥವಾ ಇನ್ನಿತರೆ ಯಾರಿಗಾದರು, ಯಾವುದೇ ರೀತಿಯ ಹಕ್ಕು, ತಂಟೆ, ತಕರಾರು, ಕ್ಲೇಮು, ಇದ್ದಲ್ಲಿ ಈ ಕೆಳಗೆ ನಮೂದಿಸಿರುವ ವಕೀಲರನ್ನು ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 07 (ಏಳು) ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಸಂಪರ್ಕಿಸತಕ್ಕದ್ದು. ಈ ಅವಧಿಯೊಳಗೆ ಯಾವುದೇ ರೀತಿಯ ಹಕ್ಕು, ತಂಟೆ, ತಕರಾರು ಇತ್ಯಾದಿಗಳು ಬಾರದಿದ್ದಲ್ಲಿ, ಯಾವುದೇ ಆಕ್ಷೇಪಣೆ ಇಲ್ಲವೆಂದು ತೀರ್ಮಾನಿಸಲಾಗುವುದು.

ಷೆಡ್ಯೂಲ್: ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಲಿಂಗಾಂಬುಧಿ ಗ್ರಾಮದ ಸರ್ವೇ ನಂಬರ್ 90/*/5, 1 ಎಕರೆ 20 ಗುಂಟೆ ಜಮೀನಿಗೆ, ಚೆಕ್ಕುಬಂಧಿ ಈ ಕೆಳಕಂಡಂತಿರುತ್ತದೆ.

ಪೂರ್ವಕ್ಕೆ: ರಸ್ತೆ ಮತ್ತು ಸ.ನಂ.93, ಪಶ್ಚಿಮಕ್ಕೆ ಸ.ನಂ.48, ಉತ್ತರಕ್ಕೆ: ಸ.ನಂ.90/13, ದಕ್ಷಿಣಕ್ಕೆ ಸ.ನಂ.90/04

ಸಹಿ/– ಬಿ.ಎಸ್.ಸಾವಂತ್, ವಕೀಲರು, #1079/ಎ, 1ನೇ ಮಹಡಿ, ರೈಲ್ವೇ ಸ್ಟೇಷನ್ ರಸ್ತೆ, ಚಾಮರಾಜಪುರಂ, ಮೈಸೂರು–570005. ಮೊ: 9740097497

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದಿಸಿರುವ ನಿವೇಶನವನ್ನು ಅದರ ಮಾಲೀಕರಾದ ಮೈಸೂರು ಸಿಟಿ, ವಿಶ್ವೇಶ್ವರನಗರ, ಇಂಡಸ್ಟ್ರಿಯಲ್ ಸಬರ್ಬ್, 3ನೇ ಹಂತ, ಮನೆ ನಂ. 27ರಲ್ಲಿ ವಾಸವಾಗಿರುವ ಶ್ರೀ ಚಂದಾಲಾಲ್ ಪಟೇಲ್ ರವರ ಧರ್ಮಪತ್ನಿಯಾದ, ಸುಮಾರು 61 ವರ್ಷ ವಯಸ್ಸಿನ, ದಮಯಂತಿ ಸಿ ಪಟೇಲ್ ರವರಿಂದ ಖರೀದಿ ಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತು ಸ್ವಯಾರ್ಜಿತವಾಗಿದ್ದು, ದಮಯಂತಿ ಸಿ ಪಟೇಲ್ ರವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾಗಿರುತ್ತದೆ, ಸದರಿ ಷೆಡ್ಯೂಲ್ ನಿವೇಶನದ ಕ್ರಯ ಪತ್ರ ದಿನಾಂಕ 22.06.2006, ಮೈಸೂರು ಸಿಟಿ, ಪೂರ್ವ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಪುಸ್ತಕ ಸಂಖ್ಯೆ–1, ದಾಖಲಾತಿ ಸಂಖ್ಯೆ MDA-1-02300-2006-07, ಸಿಡಿ ಸಂಖ್ಯೆ MDAD4 ರಂತೆ ನೋಂದಣಿಯಾಗಿರುತ್ತದೆ. ಸದರಿ ಷೆಡ್ಯೂಲ್ ನಿವೇಶನದ ಖಾತೆಯು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ದಮಯಂತಿ ಸಿ ಪಟೇಲ್‌ರವರ ಹೆಸರಿಗೆ ಖಾತೆಯಾಗಿರುತ್ತದೆ. ಸದರಿ ಷೆಡ್ಯೂಲ್ ನಿವೇಶನಕ್ಕೆ ಸಂಬಂಧಿಸಿದ ಮೇಲೆ ತಿಳಿಸಿರುವ ಅಸಲಿ ದಾಖಲಾತಿಗಳು ಕಳೆದು ಹೋಗಿರುವುದಾಗಿ ಕಂಡು ಬಂದಿರುತ್ತದೆ. ಆದ್ದರಿಂದ ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾದರು ಅಥವಾ ಯಾವುದೇ ಬ್ಯಾಂಕ್‌ಗಾಗಲಿ ಅಥವಾ ಯಾವುದೇ ಹಣಕಾಸು ಸಂಸ್ಥೆಗಾದರು ಅಥವಾ ಇನ್ನಿತರೆ ಯಾರಿಗಾದರು, ಯಾವುದೇ ರೀತಿಯ ಹಕ್ಕು, ತಂಟೆ, ತಕರಾರು, ಕ್ಲೇಮು, ಇತ್ಯಾದಿಗಳು ಇದ್ದಲ್ಲಿ, ಈ ಕೆಳಗೆ ನಮೂದಿಸಿರುವ ವಕೀಲರನ್ನು ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 07 (ಏಳು) ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಸಂಪರ್ಕಿಸತಕ್ಕದ್ದು. ಈ ಅವಧಿಯೊಳಗೆ ಯಾವುದೇ ರೀತಿಯ ಹಕ್ಕು, ತಂಟೆ, ತಕರಾರು ಇತ್ಯಾದಿಗಳು ಬಾರದಿದ್ದಲ್ಲಿ, ಯಾವುದೇ ಆಕ್ಷೇಪಣೆ ಇಲ್ಲವೆಂದು ತೀರ್ಮಾನಿಸಲಾಗುವುದು.

ಷೆಡ್ಯೂಲ್: ಮೈಸೂರು ಸಿಟಿ, ವಿಜಯನಗರ ಬಿ.ಇ.ಎಂ.ಎಲ್, 4ನೇ ಹಂತ, 2ನೇ ಫೇಸ್, ನಿವೇಶನ ಸಂಖ್ಯೆ 8360. ವಿಸ್ತೀರ್ಣ ಪೂರ್ವ ಪಶ್ಚಿಮವಾಗಿ 12 ಮೀ ಹಾಗೂ ಉತ್ತರ ದಕ್ಷಿಣವಾಗಿ 9 ಮೀ ಆಗಿರುತ್ತದೆ. ಸದರಿ ನಿವೇಶನಕ್ಕೆ ಚೆಕ್ಕುಬಂದಿ ಈ ಕೆಳಕಂಡಿರುತ್ತದೆ.

ಪೂರ್ವಕ್ಕೆ: ನಿವೇಶನ ಸಂಖ್ಯೆ: 8375, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ 8361, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 8359.

ಸಹಿ/– ಬಿ.ಎಸ್.ಸಾವಂತ್, ವಕೀಲರು, #1079/ಎ, 1ನೇ ಮಹಡಿ, ರೈಲ್ವೇ ಸ್ಟೇಷನ್ ರಸ್ತೆ, ಚಾಮರಾಜಪುರಂ, ಮೈಸೂರು–570005. ಮೊ: 9740097497

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಬೆಂಗಳೂರು, ಬಸವೇಶ್ವರನಗರ, ಕೆ.ಹೆಚ್.ಬಿ. ಕಾಲೊನಿ, 1ನೇ ಅಡ್ಡ ರಸ್ತೆ, ಮನೆ ನಂಬರ್ 1 ರ ನಿವಾಸಿಯಾದ, ಶ್ರೀಮತಿ ಡಿ.ಧನಲಕ್ಷ್ಮಿ ಕೋಂ. ದಿ. ಕೃಷ್ಣ ಪ್ರಸಾದ್ ಮತ್ತು ಅವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಹರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಐದು (5) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ನಗರ, ಚಾಮರಾಜ ಮೊಹಲ್ಲಾ, ಕುವೆಂಪುನಗರ, 1ನೇ ಹಂತ, ಪಿ ಅಂಡ್ ಟಿ ಬ್ಲಾಕ್, ಜೆ.ಸಿ.ಎಸ್.ಟಿ, ಟಿ.ಕೊಪ್ಪಲ್, ಜಯನಗರದಲ್ಲಿರುವ, ಪೂರ್ವದಿಂದ ಪಶ್ಚಿಮ 40 ಅಡಿ, ಉತ್ತರ ದಕ್ಷಿಣ 30 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ ಅಳತೆಯ ನಿವೇಶನದಲ್ಲಿ ಕಟ್ಟಿರುವ 750 ಚದರ ಅಡಿ ನೆಲ ಅಂತಸ್ತಿನ ಸ್ವತ್ತಿನ ಸಂಖ್ಯೆ 1659 ಕ್ಕೆ ಚಕ್ಕುಬಂದಿ: ಪೂರ್ವಕ್ಕೆ: 9 ಮೀಟರ್ ರಸ್ತೆ ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 610/ಸಿ, ಉತ್ತರಕ್ಕೆ : ನಿವೇಶನ ಸಂಖ್ಯೆ 1660, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 1658.

Sd/- M.N.Prakash Kalappa
KAR-1996-2000
Advocate & Legal Consultant
#67/7A, P.R.I. Complex No.2 & 3, 1st Floor, New Sayyaji Rao Road, Fort Mohalla, Mysuru - 570004

ಮೈಸೂರು: 22/11/2022
ಮೊ.: 9343112535

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರಾದ, ರವರ ಇಚ್ಛೆಯ ಮೇರೆಗೆ, ಏನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ ಕುಂತಮ್ಮ ಬಿನ್ ಕಲ್ಯಾಣಯ್ಯ ಕಣಕೊಳ ಗ್ರಾಮ, ಜಯಪುರ ಹೋಬಳಿ, ಮೈಸೂರು ರವರೊಂದಿಗೆ ಕ್ರಯದ ಕರಾರಿನ ಮೂಲಕ ಒಡಂಬಡಿಕೆ ಮಾಡಿಕೊಂಡಿದ್ದು, ಸದರಿ ಜಮೀನನ್ನು, ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯ ಪತ್ರ ಬರೆದುಕೊಡಲು ಒಪ್ಪಿರುತ್ತಾರೆ ಈಗಾಗಲೇ ಕೆಲವು ದಾಖಲಾತಿಗಳನ್ನು ನನ್ನ ಕಕ್ಷಿದಾರರಿಗೆ ನೀಡಿದ್ದು, ಹಾಗಾಗಿ ನನ್ನ ಕಕ್ಷಿದಾರರು ನೋಂದಾಯಿತ ಕ್ರಯ ಪತ್ರ ಪಡೆದುಕೊಳ್ಳಲು ಸಿದ್ಧರಿದ್ದು ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಆಪಾದಾಲು ಹಾಗೂ ತಕರಾರನ್ನು ಸಲ್ಲಿಸತಕ್ಕದ್ದು, ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧಪಟ್ಟ ಹಾಗೆ ಯಾವುದೇ ಅಡಚಣೆ, ತಕರಾರು, ಇಲ್ಲವೆಂದು ಪರಿಗಣಿಸಿ, ಮೇಲ್ಕಂಡ ಮಾಲೀಕರಿಂದ ಕ್ರಮ ಬದ್ಧವಾದ ನೊಂದಣಿ ಕ್ರಯ ಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಛಿಸಿದ್ದು ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮದ (ಹಳೆ ಸರ್ವೆ ನಂ. 50/2 ಹೊಸ ಸರ್ವೆ ನಂ.50/4 ವಿಸ್ತೀರ್ಣ 1 ಎಕರೆ 13 ಗುಂಟೆ, ಇದಕ್ಕೆ ಚೆಕ್‌ಬಂದಿ:

ಪೂರ್ವಕ್ಕೆ: ದೇವಮ್ಮ ಮತ್ತು ವೆಂಕಟರಾಜು ಶಿವಮ್ಮರವರ ಸರ್ವೆ ನಂ. 50/2 ರ ಹಿಸ್ಸಾ ಬಾಬ್ತು ಜಮೀನು, ಪಶ್ಚಿಮಕ್ಕೆ : ರಸ್ತೆ ಮತ್ತು ರೈಲ್ವೆ ಟ್ರಾಕ್, ಉತ್ತರಕ್ಕೆ : ಸರ್ವೆ ನಂ. 50/1 ರ ಜಮೀನು (ಲಾ ಪಿ ನಂ 1), ದಕ್ಷಿಣಕ್ಕೆ : ಸರ್ವೆ ನಂ. 48 ಜೊಕ್ಕಮಾದಯ್ಯ ಹಾಗೂ ಜೋಗಯ್ಯ ರವರ ಜಮೀನು (ಲಾ ಪಿ ನಂ.48).

ಸಹಿ/– ಶ್ರೀ ಪಾಲಾಕ್ಷ, B.Sc, LL.B, KAR / 1146/96, ವಕೀಲರು, ನಂ.645, ಮೊದಲನೇ ಮಹಡಿ, ಸೀತಾವಿಲಾಸ ಛತ್ರ ಹಿಂಭಾಗ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು. ಮೊ.: 9448075718

BEFORE THE HON'BLE PRESMMISSION, MYSURU DISTRIT CONSUMER REDRESSAL COMMISSION, MYSURU DISTRICT.

Complaint Case No. 288/2021

Complainant : Sri Vikram P, S/o Prabhakar Rao, Aged about 35 years, R/at Door No.277, 'C' Block, Srinagar, Mysuru - 570008.

V/s

Opposite Party : Sri Umesh Kumar M. S/o Mayanna C., Aged about 32 years, R/at Door No. 4826, 3rd Cross, Pension Block, N.R.Mohalla, Mysuru - 570 007.

And also office address:-
M/s Skanda Builders, No. 55-16, 1st Floor, Buddha Marga, Beside Teresian Collage, Siddarthanagara, Mysuru - 570011.

2nd Residential Address:-
Sri Umesh Kumar M. S/o Mayanna C., C/o Basavaraju, No.534, 9th Main, 9th Cross, Alanahalli Layout, Mysuru - 570 028.

PAPER PUBLICATION

Whereas, the above named complainant have filed the complaint petition against the Respondent U/S 35 of consumer protection act for calling upon opposite party to refund the Expenses spent by the complainant to the sum of Rs.6,79,304/- (Rs. Six Lakh Seventynine Thousand three hundred four Rupess Only) and also to pay damages of Rs.10,00,000/- (Rupess Ten Lakhs only) forthwith penal interest of 24% per annum from the date of petition till the realization.

You, the opposite party is hereby warned to appear in the Court in person or by a pleader duly instructed on 29-12-2022 at 11.00 O' Clock in the forenoon to show - cause against the compalint petition will be heard and determined Ex-parte.

Given under my hand and seal the court this 22 nd day of November 2022.

By order of the Court.
Sd/- Hob'ble Presmmission, Mysuru District.
Consumer Redressal Commission, Mysuru District.

Advocate for Petitioner
Sd/- Sri M.B.Balaji Singh
B.Com., LL.B,
MBBS Law Associates
#18, K.T.Street, Near Mandi Mohalla Police Station, Mysuru
(M.No.9880196965)

ಕರ್ನಾಟಕ ಸರ್ಕಾರ (ಜಲಸಂಪನ್ಮೂಲ ಇಲಾಖೆ)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ನಂ.1, ಜಲಮಾಪನ ವಿಭಾಗ, ರಾಜಘಟ್ಟ ರಸ್ತೆ, ರೈಲ್ವೆ ಸ್ಟೇಷನ್ ಹತ್ತಿರ, ಹಾಸನ–573201
ದೂ: 08172–267539

ಟೆಂಡರ್ ಪ್ರಕಟಣೆ ಸಂಖ್ಯೆ– 03/2022–23, ದಿನಾಂಕ:21.11.2022

ಕಾರ್ಯಪಾಲಕ ಇಂಜಿನಿಯರ್, ನಂ.1, ಜಲಮಾಪನ ವಿಭಾಗ, ಹಾಸನ ಇವರು ರಾಜ್ಯಪಾಲರು, ಕರ್ನಾಟಕ ಸರ್ಕಾರ ಇವರ ಪರವಾಗಿ ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿನ ನದಿ ಮಾಪನ ಕೆಲಸಕ್ಕಾಗಿ ಕೆಲಸಗಾರರನ್ನು ಒದಗಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಏಜೆನ್ಸಿದಾರರು/ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು e-procurement ನಲ್ಲಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in-eportal/index.seam ನಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ:1 ಜಲಮಾಪನ ವಿಭಾಗ, ಹಾಸನ

ವಾಶಾಸಂಇ/ಹಿಸನಿ/ಹಾಸನ/ಎಂಸಿಎ/758/2022–23